ಅಧ್ಯಕ್ಷರು.—ನಾನು ಎಲ್ಲಾ ಬರೆದದ್ದನ್ನು ಓದಿದ್ದೇನೆ. ಅದಕ್ಕೇ ಹೇಳಿದ್ದು ಮುಗಿದು ಹೋದ ಮೇಲೆ ತಿರುಗಿ ಏತಕ್ಕೆ ಆ ಪ್ರಶ್ನೆ ಎತ್ತುತ್ತೀರಿ ?

ಶ್ರೀ ಎಸ್. ಬಂಗಾರಪ್ಪ.—ಮುಗಿದು ಹೋದ ವಿಷಯದ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ. ಸದನದ ರೆಕಾರ್ಡ್‌ನಲ್ಲಿ ಸತ್ಯವಾದ ಹೇಳಿಕೆ ಇರಬೇಕು ಎಂದು ಹೇಳಿದೆ. ಆ ದೃಷ್ಟಿಯಿಂದ ಸರ್ಕಾರದವರು ಇವತ್ತು ವಿವರಣೆ ಕೊಡದೆ ಹಾಗೆ ಬಿಡುವುದಾದರೆ that will remain on record. That is what we mean by this motion. ಇಲ್ಲದೆ ಹೋದರೆ ನಮ್ಮ ಹಕ್ಕುಭಾದ್ಯತಾ ಸೂಚನೆಗೆ ಅನುಮತಿ ಕೊಡಬೇಕು.

ಶ್ರೀ ಸಿ. ಬೈರೇಗೌಡ.—ಅವರ ಕೈ ಕೆಳಗೆ ಇರತಕ್ಕ ಡಿಪಾರ್ಟ್‌ಮೆಂಟಿನ ವಿಷಯ ಅವರಿಗೆ ಗೊತ್ತಿಲ್ಲದೇ ಹೋದರೆ ರಾಜ್ಯದ ಗತಿ ಏನಾಗಬೇಕು ?

Sri S. M. KRISHNA.—What the Chief Minister wanted to convey when he made a referenre to the Central C.I.D. was.

Sri H. D. DEVE GOWDA.—On behalf of the Chief Minister, if the hon. Minister expresses regrets, that is enough.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಕೃಷ್ಣರವರು ಈಗಾಗಲೇ ವಿವರಣೆ ಕೊಟ್ಟಿದ್ದಾರೆ ಮಾನ್ಯ ಸದಸ್ಯರು ಕೇಳಿಸಿಕೊಂಡಿಲ್ಲ ಎಂದು ಕಾಣುತ್ತದೆ.

Sri S. M. KRISHNA.—I do not know whether it has been recorded as 'C.I.D. Central'. The Bangalore C.I.D, is know as the Central C I D. There was certain honest misunder: standing of the tituation. ಆದುದರಿಂದ ದಯವಿಟ್ಟು ಬಂಗಾರಪ್ಪನವರು ಪ್ರಿವಿಲೇಜ್ ಮೋಷನ್‌ಗೆ ಒತ್ತಾಯ ಮಾಡಬಾರದು.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಕೃಷ್ಣರವರು ಹಾಗೆ ಹೇಳಬಾರದು. ಮುಖ್ಯ ಮಂತ್ರಿಗಳು ಏನು ಹೇಳಿದರು ಅಂದರೆ ಈ ಕೇಸನ್ನು ಅವರಿಗೆ ವಹಿಸಿಕೊಟ್ಟಿದ್ದೇವೆ, ಅದು ಕೇಂದ್ರ ಸರ್ಕಾರದ ವ್ಯಾಪ್ತಿ ಇರುವುದರಿಂದ ನನಗೂ ಅದಕ್ಕೂ ಏನೇನು ಸಂಬಂಧವಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಯಾವುದೋ ಕಾರಣದಿಂದ ಹಾಗೆ ಹೇಳಿರಬಹುದು. ಅದು ಗೊತ್ತಾದ ಮೇಲೂ ಕೂಡ, ಸದನದ ಮುಂದೆ ಈ ಮಾತನ್ನು ಹೇಳಬಾರದಾಗಿತ್ತು, ಅದನ್ನು ವಾಪಸ್ಸು ಪಡೆಯುತ್ತೇನೆ ಎನ್ನುವ ಸೌಜನ್ಯತೆ ಇರಬೇಕು. ಮುಖ್ಯ ಮಂತ್ರಿಗಳ ಹೇಳಿಕೆಯಲ್ಲಿ ಈ ತರಹ ದಾಖಲೆ ಇರಬಾರದು. ಇದನ್ನು ಸರಿ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ with words of regret ಸರಿ ಮಾಡಿಕೊಳ್ಳಲಿ.

ಶ್ರೀ ಎಸ್ ಎಂ. ಕೃಷ್ಣ.—ನಾನು ಆಗಲೇ ಹೇಳಿದ್ದೇನೆ, Honest misunderstanding ಎಂದು.

ಶ್ರೀ ಎಚ್. ಡಿ. ದೇವೇಗೌಡ.—ಲೋಕಸಭೆಯಲ್ಲಿ ತಮಗೆ ಕೆಲಸ ಮಾಡಿದ ಅನುಭವ ಇದೆ ಹಲವಾರು ಸಂದರ್ಭದಲ್ಲಿ ಮಂತ್ರಿಗಳು ಆ ರೀತಿ ತಪ್ಪು ಉತ್ತರ ಕೊಟ್ಟು ನಂತರ ತಿದ್ದಿಕೊಂಡಿದ್ದಾರೆ. ಕೇಂದ್ರ ಸರ್ಕಾರದ ಗೃಹ ಸಚಿವರು ವಿಷಾದ ವ್ಯಕ್ತಪಡಿಸಿ ಕ್ಷಮೆ ಕೇಳಿದ್ದಾರೆ. ಇದರಲ್ಲಿ ಇಜತ್ತು ಪ್ರಶ್ನೆ ಏನೂ ಕಾಣಲಿಲ್ಲ. ಅವರು ಹೇಳಿದ ಬಗ್ಗೆ Reg et Express ಮಾಡಬಹುದು.

Sri S. M. KRISHNA.—I propose that it may be taken up on Monday.

NON-OFFICIAL RESOLUTION

re : recommending the Government of India to Conduct Castwise census of the people in the State.

MADAM SPEAKER—Private Members resolution Mr. Puttaranganath to continue his speach. ಇದರ ಮೇಲೆ 12 ಜನ ಮಾತನಾಡಿದ್ದಾರೆ. ಎರಡು ದಿವಸ ಚರ್ಚೆ ಆಗಿದೆ. ಇನ್ನೂ ಬೇಕಾದಷ್ಟು ನಿರ್ಣಯಗಳು ಚರ್ಚೆ ಆಗುವುವು ಇವೆ. ಆದುದರಿಂದ ಈ ನಿರ್ಣಯವನ್ನು ಈವೊತ್ತು ಮುಗಿಸಿಕೊಟ್ಟರೆ ಒಳ್ಳೆಯದು.

ಶ್ರೀ ಹೆಚ್. ಡಿ. ದೇವೇಗೌಡ.—ಇದು ಬಹಳ ಮುಖ್ಯವಾದ ನಿರ್ಣಯ ಇದೆ. ಅದಕ್ಕೆ ಈ ನಿರ್ಣಯಕ್ಕೆ ಕಾಲಮಿತಿ ಗೊತ್ತು ಮಾಡುವುದು ಬೇಡ ಎನ್ನುವುದನ್ನು ಸಭೆಯವರು ಒಪ್ಪಿಕೊಂಡಿದ್ದೇವೆ ಇದು ರಾಷ್ಟ್ರದಲ್ಲಿ ಪ್ರಮುಖವಾದ ಸಮಸ್ಯೆ ಚರ್ಚೆ ಮಾಡತಕ್ಕ ವಿಷಯ ಇದೆ. ನಾನು ಆಗಲೇ ಎರಡು ಗಂಟೆ ಕಾಲ ಮಾತನಾಡಿದ್ದೇನೆ. It is a problem concerning the whole country. ಇದು ಜಾತಿ ಪ್ರಶ್ನೆ ಇದೆ. ಇವತ್ತು ಚರ್ಚೆ ಕೊನೆ ಆಗದೇ ಇದ್ದರೂ, ಮುಂದಿನವಾರ ಮುಗಿಸಬಹುದು.

† ಶ್ರೀ ಎಸ್. ಎಚ್. ಪುಟ್ಟರಂಗನಾಥ (ಬೇಲೂರು).—ಮಾನ್ಯ ಅಧ್ಯಕ್ಷರೇ, ನಾನು ಈ ಹಿಂದೆ ಮಾನ್ಯ ಹನುಮೇಗೌಡರು ಮಂಡಿಸಿರತಕ್ಕಂಥ ನಿರ್ಣಯದ ಮೇಲೆ ಮಾತನಾಡುವಾಗ ಯಾವ ಯಾವ ಜನಾಂಗಕ್ಕೆ ಎಷ್ಟೆಷ್ಟು ಹುದ್ದೆಗಳನ್ನು ಕೊಡುವುದಕ್ಕೆ ಸಾಧ್ಯ ಎಂಬ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಿದ್ದೆ. ಈ ಬಗ್ಗೆ ನನ್ನ ವಾದವಾದರೂ ಇಷ್ಟೇ, ಇವೊತ್ತು ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಎಂದು ಮಾಡಿರುವುದರಿಂದ, ಅನೇಕ ವಿಧವಾದಂಥ ಸಮಸ್ಯೆಗಳು ದೇಶದಲ್ಲಿ ತಲೆಯೆತ್ತಿವೆ. ಆದಕಾರಣ ಇನ್ನು ಮುಂದೆಯಾದರೂ ಕೂಡ ಸ್ವಲ್ಪ ಮಟ್ಟಿಗೆ ಈ ಸಮಸ್ಯೆಗಳನ್ನು ಕಡಿಮೆ ಮಾಡಿಕೊಂಡರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಸರ್ಕಾರದಿಂದ ಯಾರು ಯಾರು ಹೆಚ್ಚು ಹೆಚ್ಚು ಹುದ್ದೆಗಳನ್ನು ಪಡೆದುಕೊಂಡಿದ್ದಾರೆಂಬ ಬಗ್ಗೆ ಮಾಹಿತಿಯನ್ನು ಒದಗಿಸುವುದು ಮೊದಲು ಆಗಬೇಕಾದ ಕೆಲಸ ಎಂದು ನಾನು ಆ ದಿನವೇ ಹೇಳಿದ್ದೆ. ಈ ನಿರ್ಣಯದಲ್ಲಿ ಜಾತಿವಾರು ಜನಗಣತಿ ಖಸ್ತು ಮಾಡಬೇಕು ಎಂದು ಕೇಳಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಈ ಜಾತಿಗಳ ಬಗ್ಗೆ ಪ್ರಸ್ತಾಪ ಮಾಡದೇ ಇದ್ದ ಕಾಲ ಇತ್ತು. ಇವೊತ್ತು ನನಗೆ ಸ್ವಾತಂತ್ರ್ಯ ಬಂದಮೇಲೆ ರಾಜಕೀಯ ಉದ್ದೇಶಕ್ಕೋಸ್ಕರ ಯಾವ ಒಂದು ಏರಿಯಾದಲ್ಲಿ ಯಾವ ಒಂದು ಜನಾಂಗ ಜಾಸ್ತಿ ಇದೆಯೋ ಅದೇ ಜನಾಂಗಕ್ಕೆ ಜಾಗ ಕೊಡಬೇಕು, ಅಂದರೆ ಒಕ್ಕಲಿಗರು ಜಾಸ್ತಿ ಇರುವ ಕಡೆ ಅವರಿಗೇ ಜಾಗ ಕೊಡಬೇಕು, ಲಿಂಗಾಯಿತರು ಜಾಸ್ತಿ ಇರುವ ಕಡೆ ಅವರಿಗೆ ಜಾಗ ಕೊಡಬೇಕು, ಹರಿಜನರು ಜಾಸ್ತಿ ಇರುವ ಕಡೆ ಅವರಿಗೆ ಜಾಗ ಕೊಡಬೇಕು ಎಂಬತಕ್ಕಂಥ ವಾದ ಇಂದು ಹೆಚ್ಚು ಹೆಚ್ಚು ಬೆಳೆಯುತ್ತಿರುವುದರಿಂದ ನನಗನ್ನಿಸುತ್ತದೆ, ಬಹುಶಃ ಇಂತಹ ಜಾತಿಗಳ ಬಗ್ಗೆ ನಾವು ಏನು ಒಂದು ಎಕನಾಮಿಕ್ ಡೆವಲಪ್‌ಮೆಂಟ್ ಮಾಡುತ್ತೇವೆ ಮತ್ತು ಹುದ್ದೆಗಳನ್ನು ನಾವು ಕೊಡುತ್ತೇವೆ, ಅದಕ್ಕೆ ಬದಲಾಗಿ ನನ್ನ ಒಂದು ಅಭಿಪ್ರಾಯವನ್ನು ಹೇಳುವುದಾದರೆ, ಬಹುಶಃ ಇಂದು ಯಾರು ಯಾರು ಎಲ್ಲೆಲ್ಲಿ ಎಷ್ಟೆಷ್ಟು ಪ್ರಮಾಣದಲ್ಲಿದ್ದಾರೆಂಬ ಅಂಶ ಈ ಸದನದ ಎಲ್ಲ ಮಾನ್ಯ ಸದಸ್ಯರಿಗೂ ಗೊತ್ತಿರುವುದರಿಂದ, ತಾವೇ ಏತಕ್ಕೆ ಮುಂದೆ ನಿಂತು ಹಿಂದುಳಿದ ಜನಾಂಗದವರನ್ನು ಮೇಲೆತ್ತಬೇಕು ಎಂಬ ದೃಷ್ಟಿಯಿಂದ ತಮ್ಮಲ್ಲಿರುವ ಸ್ವಾರ್ಥವನ್ನು ತ್ಯಾಗ ಮಾಡಿ, ಈ ಹಿಂದುಳಿದ ಜನಾಂಗದವರನ್ನು ಮೇಲೆತ್ತುವುದಕ್ಕೆ ಏತಕ್ಕೆ ಪ್ರಯತ್ನ ಮಾಡಬಾರದು ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಮುಖ್ಯವಾಗಿ ನಮಗೆ ಸ್ವಾತಂತ್ರ್ಯ ಬಂದಮೇಲೆ ಎಷ್ಟು ಕಡೆಗಳಲ್ಲಿ ಈ ಜಾತಿಯ ಗೊಂದಲಗಳು ಉಂಟಾಗಿ ಹೊಡೆದಾಟಗಳಾಗಿ ಆ ಬಗ್ಗೆ ಎಷ್ಟು ಕೇಸುಗಳಾಗಿವೆ ಮತ್ತು ಎಷ್ಟು ಕೇಸುಗಳು ಕೋರ್ಟಿನಲ್ಲಿ ಪೆಂಡಿಂಗ್ ಇವೆ ಎಂಬುದನ್ನು ಸರ್ಕಾರದವರು ತಮ್ಮ ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಇಂದು ದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೊಂದಿರುವ ಜನರು ಇದ್ದಾರೆ ಅವರ ಬಗ್ಗೆ ಹೆಚ್ಚಿನ ಒಂದು ಕರುಣೆಯನ್ನು ತೋರಿಸಿ ಅವರಿಗೆ ಸಹಾಯ ಮಾಡಬೇಕು ಮತ್ತು ಅವರನ್ನು ಮೇಲೆತ್ತುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಕಡೆಯದಾಗಿ ಮಾನ್ಯ ಹನುಮೇಗೌಡರ ನಿರ್ಣಯದ ಬಗ್ಗೆ ನನ್ನ ಅಭಿಪ್ರಾಯ ಹೇಳುವುದಾದರೆ, ಹಿಂದೆ ಬಿದ್ದಿರುವ ಜನಾಂಗದವರನ್ನು ಮುಂದೆ ತರಲು ಪ್ರಯತ್ನಗಳು ಇಂದು ಆಗುತ್ತಿರುವಾಗ ಮತ್ತೆ ಜನಸಂಖ್ಯೆ ಆಧಾರದ ಮೇಲೆ ಹುದ್ದೆಗಳನ್ನು ಕೊಡಬೇಕು ಮತ್ತು ಹುದ್ದೆಗಳನ್ನು ಜಾಸ್ತಿ ಮಾಡಬೇಕು ಎಂಬ ಉದ್ದೇಶದಿಂದ ಈ ನಿರ್ಣಯವನ್ನು ತಂದಿದ್ದರೆ ಅದು ತಪ್ಪಾದೀತು ಎಂದು ನನ್ನ ಸಂಶಯವನ್ನು ವ್ಯಕ್ತಪಡಿಸುತ್ತಿದ್ದೇನೆ. ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಇರತಕ್ಕಂಥ ನಿರ್ಣಯವನ್ನು ನಾನು ಬೆಂಬಲಿಸುತ್ತಾ ಅದಕ್ಕೆ ಎರಡು ಮಾತುಗಳನ್ನು ಪೂರ್ವಕವಾಗಿ ಹೇಳುವುದಕ್ಕೆ ತಮ್ಮ ಒಂದು ಅನುಮತಿಯನ್ನು ಬೇಡುತ್ತೇನೆ. ಇವೊತ್ತು ನಮ್ಮ ರಾಜ್ಯದಲ್ಲಿ ಸಾಕಷ್ಟು ಸಂಶಯಗಳು ಜನಾಂಗ ಜನಾಂಗದಲ್ಲಿ ಮೂಡುವುದಕ್ಕೆ ಪ್ರಾರಂಭವಾಗಿದೆ. ಅದಕ್ಕೆ ಮುಖ್ಯ ಕಾರಣ ಎಲ್ಲಿ ಸಾಮಾಜಿಕವಾದ ಅಸಮತೋಲನ ಉಂಟಾಗುತ್ತದೋ ಅಂತಹ ಕಡೆಗಳಲ್ಲಿ ಇಂತಹ ಅಸಮಾಧಾನಗಳು ಸರ್ವೇಸಾಧಾರಣವಾಗಿ ಪ್ರಾಪ್ತವಾಗುತ್ತದೆ. ಇದನ್ನು ಹೋಗಲಾಡಿಸಲು ಪ್ರಜಾಪ್ರಭುತ್ವದಲ್ಲಿರತಕ್ಕಂಥ ಸರ್ಕಾರಗಳು ಮತ್ತು ಪ್ರಜಾಪ್ರಭುತ್ವದಲ್ಲಿ ವಿಶ್ವಾಸ

ವಿರತಕ್ಕಂಥ ವಿಚಾರವಂತರು ಮತ್ತು ರಾಷ್ಟ್ರದಲ್ಲಿ ಮತ್ತು ರಾಜ್ಯದಲ್ಲಿ ವ್ಯಕ್ತಿ ವ್ಯಕ್ತಿಯಲ್ಲಿ ಸಮಾನತೆಯನ್ನು ರೂಢಿಸಬೇಕು ಎಂದು ಮೂಲಭೂತವಾದಂಥ ಕಲ್ಪನೆಯನ್ನು ಇಟ್ಟುಕೊಂಡಿರುವವರು ಪ್ರಯತ್ನ ಮಾಡಬೇಕು. ಮತ್ತು ಈ ಬಗ್ಗೆ ದೀರ್ಘವಾಗಿ ವಿಚಾರ ಮಾಡಬೇಕು. ಯಾವುದೋ ದ್ವೇಷ, ಯಾವುದೋ ಈರ್ಷೆಯಿಂದ ವಿಚಾರ ಮಾಡತಕ್ಕಂತಹ ಸಮಸ್ಯೆಗಳು ಇವಲ್ಲ. ಜನರ ಮೂಲಭೂತವಾದಂಥ ಸಮಸ್ಯೆಗಳನ್ನು, ಜನರ ಹೃದಯದಲ್ಲಿ ಆಳವಾಗಿ ಬೇರೂರಿತಕ್ಕಂಥ ಸಮಸ್ಯೆಗಳನ್ನು ಹುಡುಕಿ ನೋಡಿ ಅವುಗಳಿಗೆ ಪರಿಹಾರವನ್ನು ಕಂಡುಹಿಡಿಯತಕ್ಕಂಥ ವಿಚಾರಗಳು ಇವು. ಆದಕಾರಣ ಈ ಬಗ್ಗೆ ವಿಚಾರ ಮಾಡುವಾಗ ನಮಗೆ ಪೂರ್ವಾಪರ ಯಾವ ಒಂದು ಕಲ್ಪನೆಗಳು ಇರಬಾರದು. ಯಾರ ಮನಸ್ಸು ನಿಸ್ಸಂಕೋಚವಾಗಿರುತ್ತದೋ ಅಂತಹವರು ಯಾವ ಒಂದು ಆತಂಕಕ್ಕೂ ಒಳಗಾಗದೆ ಇದರ ಬಗ್ಗೆ ವಿಚಾರ ಮಾಡಿದರೆ ನಿಜವಾಗಿಯೂ ಪರಿಹಾರ ಕಂಡುಹಿಡಿಯುವುದಕ್ಕೆ ಸಾಧ್ಯವಾಗುತ್ತದೆ ಮತ್ತು ನಿರ್ವಿಕಾರ ಬುದ್ಧಿಯಿಂದ ವಿಚಾರ ಮಾಡಿದರೆ ಪರಿಹಾರ ಕಂಡುಹಿಡಿಯುವುದಕ್ಕೆ ಸಾಧ್ಯವಾಗುತ್ತದೆ. ಈಗ ಏನು ಒಂದು ನಿರ್ಣಯವನ್ನು ಈ ಬಗ್ಗೆ ಮಂಡಿಸಲಾಗಿದೆ, ಅದಕ್ಕೆ ಯಾವ ದೃಷ್ಟಿಕೋನದಿಂದ ಮಾನ್ಯತೆ ಕೊಡಬೇಕು ಎಂಬ ಬಗ್ಗೆ ನಾವು ಇದರ ಹಿನ್ನೆಲೆಯನ್ನು ಕುರಿತು ವಿಚಾರ ಮಾಡಬೇಕಾಗಿದೆ. ಆ ರೀತಿ ವಿಚಾರ ಮಾಡಿದಾಗ ನಾವು ಇದರ ಪ್ರಾಮಾಣಿಕತೆಯನ್ನು ಮನಗಾಣುತ್ತೇವೆ. ಮತ್ತು ಈ ನಿರ್ಣಯದಿಂದ ಎಷ್ಟು ಸಾಧಕವಾಗಬಹುದು ಎಂಬುದು ಗೊತ್ತಾಗುತ್ತದೆ. ಈಗ ಈ ನಿರ್ಣಯದಲ್ಲಿರುವ ಅಂಶಗಳು ಏನೆಂದರೆ, 1951ನೇ ಇಸವಿಯವರೆಗೆ ಜನಗಣತಿ ಮಾಡತಕ್ಕಂಥ ಸಂದರ್ಭದಲ್ಲಿ ಜಾತೀ ಆಧಾರದ ಮೇಲೆ ಮಾಡುವ ಪದ್ಧತಿ ಇತ್ತು ತದನಂತರ ಆ ಪದ್ಧತಿಯನ್ನು ನಿಲ್ಲಿಸಲಾಯಿತು. ನಮಗೆ ಸ್ವಾತಂತ್ರ್ಯ ಬಂದ ತರುವಾಯ ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ದೇಶದಲ್ಲಿರುವ ಎಲ್ಲ ಜನಾಂಗಗಳು ಏನು ಅಭಿವೃದ್ಧಿ ಹೊಂದಿವೆ, ಅವು ತಮ್ಮ ಕಾಲಮೇಲೆ ನಿಂತುಕೊಂಡು ಬದುಕತಕ್ಕಂಥ ಸಾಮರ್ಥ್ಯ ಪಡೆದಿವೆಯೋ ಎಂಬುದನ್ನು ತುಲನಾತ್ಮಕವಾಗಿ ವಿಚಾರ ಮಾಡಬೇಕಾಗಿದೆ. ಆ ರೀತಿ ವಿಚಾರ ಮಾಡಲು ಸಹಾಯವಾಗಲಿ ಎಂಬ ದೃಷ್ಟಿಯಿಂದ ಈ ನಿರ್ಣಯವನ್ನು ಮಂಡಿಸಲಾಗಿದೆ. ನೋಡುವವರ ಕಣ್ಣಿಗೆ ಖಚಿತವಾಗಿ ಏನನ್ನಾದರೂ ತೋರಿಸಬೇಕಾದರೆ ಅದಕ್ಕೆ ಏನಾದರೂ ಆಧಾರ ಬೇಕಾಗುತ್ತದೆ. ಮತ್ತು ಅದಕ್ಕೆ ಏನಾದರೂ ಒಂದು ಸ್ಪಷ್ಟವಾದಂಥ ತೀರ್ಮಾನಗಳು ಇರಬೇಕಾಗುತ್ತದೆ. ಹಾಗಿಲ್ಲದಿದ್ದರೆ ಯಾರೂ ಅದನ್ನು ಒಪ್ಪುವುದಿಲ್ಲ. ಮೊದಲಿನಿಂದಲೂ ನಮ್ಮ ರಾಜ್ಯದಲ್ಲಿ ಹಾಗೂ ರಾಷ್ಟ್ರದಲ್ಲಿ ಅವಿದ್ಯಾವಂತರು ಜಾಸ್ತಿ ಇದ್ದಾರೆ. ಆದಕಾರಣ ಅವರಿಗೆ ಈ ರಾಷ್ಟ್ರದ ಆಗುಹೋಗುಗಳನ್ನು ತಿಳಿದುಕೊಳ್ಳುವುದಕ್ಕೆ, ಪ್ರತಿಯೊಂದು ಜನಾಂಗ ಮತ್ತು ವರ್ಗದವರ ವಿಚಾರವನ್ನು ತಿಳಿದುಕೊಳ್ಳುವುದಕ್ಕೆ ಸಾಕಷ್ಟು ಪ್ರಜ್ಞೆ ಆಗಲೀ, ಬುದ್ಧಿವಂತಿಕೆಯಾಗಲೀ ಇವೊತ್ತು ಅವರಿಗೆ ಇಲ್ಲ. ದೇಶದಲ್ಲಿ ಏನು ಇಂದು ಅಭಿವೃದ್ಧಿಯನ್ನು ಸಾಧಿಸಲಾಗಿದೆ, ಏನು ಬದಲಾವಣೆಯಾಗಿದೆ ಎಂಬುದನ್ನು ಈ ಜನತೆಗೆ ನಾವು ತೋರಿಸಿ ಕೊಡಬೇಕಾಗುತ್ತದೆ. ಹಾಗೆಯೇ ಪ್ರತಿಯೊಂದು ಜನಾಂಗದಲ್ಲಿಯೂ ಆಯಾ ಜನಾಂಗಗಳು ಏನಾದರು ಸಮತೋಲನವಾದ ಅಭಿವೃದ್ಧಿಯನ್ನು ಸಾಧಿಸಿವೆಯೋ ಅಥವಾ ಏನಾದರು ವೈಪರೀತ್ಯ ನಿರ್ಮಾಣವಾಗಿದೆಯೋ ಎಂಬುದನ್ನು ಸಹ ತೋರಿಸಿಕೊಡಬೇಕಾಗುತ್ತದೆ. ಒಳ್ಳೆಯ ಕಾಲದಲ್ಲಿ ಸರ್ವೇಸಾಧಾರಣವಾಗಿ ಕೆಲವರು ಲಾಭ ಮಾಡಿಕೊಳ್ಳುತ್ತಾರೆ. ಹಣ ಮಾಡಿಕೊಳ್ಳುತ್ತಾರ. ಆ ರೀತಿ ಲಾಭ ಮಾಡಿಕೊಳ್ಳಲು ಅನೇಕ ಕಾರಣಗಳು ಇರುತ್ತವೆ. ಮತ್ತು ಒಂದು ರೀತಿಯ ವಾತಾವರಣ ಇರುತ್ತದೆ. ಯಾರು ಯಾರು ಅಧಿಕಾರದ ಸಮೀಪದಲ್ಲಿರುತ್ತಾರೆ, ಅಧಿಕಾರದ ಸುತ್ತ ಕೇಂದ್ರೀಕೃತವಾಗಿರುತ್ತಾರೆ ಅಥವಾ ಅದರ ಪ್ರಭಾವದ ಕಕ್ಷೆಯಲ್ಲಿ ಬರುತ್ತಾರೆ, ಅಂತಹವರು ಸರ್ವೇಸಾಧಾರಣವಾಗಿ ಅನುಕೂಲತೆಯನ್ನು ಪಡೆಯುತ್ತಾ ಹೋಗುತ್ತಾರೆ. ನಮ್ಮ ರಾಜ್ಯದಲ್ಲಿ ಈ ರೀತಿ ಅನುಕೂಲ ಪಡೆದುಕೊಂಡಿರುವವರನ್ನು ಪರೀಕ್ಷಿಸಿ ನೋಡಬೇಕಾದರೆ ಮತ್ತು ಅವರು ಅನುಕೂಲ ಪಡೆದುಕೊಂಡಿರುವುದು ಹೌದು ಎಂದು ತೋರಿಸಿಕೊಡಬೇಕಾದರೆ ಅದಕ್ಕೆ ಒಂದು ಮೂಲಭೂತವಾದ ವ್ಯವಸ್ಥೆ ಬೇಕಾಗುತ್ತದೆ. ಅದಕ್ಕಾಗಿ ನಾವು ಜನಗಣತಿ ಮಾಡುವಾಗ ಕೋಮುವಾರು ಜನಗಣತಿ ಮಾಡಿದರೆ ನಾವು ನಿರೀಕ್ಷಿಸಿದ ಫಲ ಸಿಗಬಹುದು. ಇವೊತ್ತು ರಾಜ್ಯದಲ್ಲಿ ಹಾಗೂ ರಾಷ್ಟ್ರದಲ್ಲಿ ಅಭಿವೃದ್ಧಿಗೋಸ್ಕರವಾಗಿ ಒಂದು ರಾಜಕೀಯ ವ್ಯವಸ್ಥೆ ಇದೆ. ರಾಷ್ಟ್ರವನ್ನು ಕಟ್ಟುವ ಕೆಲಸಕ್ಕೋಸ್ಕರ ಒಂದು ರಾಜಕೀಯ ವ್ಯವಸ್ಥೆ ಇದೆ. ಈ ರಾಜಕೀಯ ವ್ಯವಸ್ಥೆಯಲ್ಲಿ ನಾವು ಹೇರಳವಾಗಿ ಹಣ ಖರ್ಚು ಮಾಡುತ್ತೇವೆ. ಈ ರೀತಿ ಖರ್ಚು ಮಾಡತಕ್ಕ ಹಣ ಯಾವ ವರ್ಗಕ್ಕೆ ಸೇರುತ್ತದೆ; ಯಾವ ವ್ಯಕ್ತಿಗೆ ಸೇರುತ್ತದೆ, ಮತ್ತು ಹಾಗೆ ಸೇರತಕ್ಕ ಕಾಲದಲ್ಲಿ ಅದು ಏನಾದರೂ ಸೀಮಿತ ಕ್ಷೇತ್ರದಲ್ಲಿ ಸೇರುತ್ತದೆಯೋ ಅಥವಾ ವ್ಯಾಪಕವಾಗಿ ಸೇರುತ್ತದೆಯೋ ? ಒಂದು ವೇಳೆ ಸೀಮಿತ ಕ್ಷೇತ್ರದಲ್ಲಿ ಸೇರಿದ್ದರೆ ಯಾವ ಸೀಮಿತ ಕ್ಷೇತ್ರದಲ್ಲಿ ಉಳಿದಿದೆ, ವ್ಯಾಪಕವಾಗಿ ಸೇರಿದ್ದರೆ ಯಾವ ವ್ಯಾಪಕ ಕ್ಷೇತ್ರದಲ್ಲಿ ಹರಡಿದೆ ಎಂಬುದನ್ನು ಸಮೀಕ್ಷೆ ಮಾಡಿ ನೋಡಿಸಬೇಕು. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ರಾಜಕೀಯ ಅವಕಾಶ

(ಶ್ರೀ ಕಾಗೋಡು ತಿಮ್ಮಪ್ಪ)

ಅಧಿಕಾರ ಅವಕಾಶ, ಸೇವಾ ಅವಕಾಶ ಇವುಗಳನ್ನು ಎಲ್ಲಾ ವರ್ಗದ ಜನಗಳಿಗೂ ಕಲ್ಪಿಸಿ ಕೊಡಲಾಗಿದೆಯೇ ಅಥವಾ ಏನಾದರೂ ಸೀಮಿತ ವರ್ಗದಲ್ಲಿ ಅವಕಾಶವನ್ನು ಕಲ್ಪಿಸಿಕೊಡಲಾಗಿದೆಯೇ ? ರಾಜ್ಯದ ಎಲ್ಲಾ ವರ್ಗದ ಜನಗಳಿಗೂ ರಾಜ್ಯಾಂಗದ ಪ್ರಕಾರ ಸಮಾನತೆಯನ್ನು ಕಲ್ಪಿಸಿಕೊಡಲಾಗಿದೆಯೇ ವರ್ಚಸ್ಸಿನ ಮೇಲೆ ಅವಕಾಶವನ್ನು ಕಲ್ಪಿಸಿಕೊಡಲಾಗಿದೆಯೇ, ರಾಜಕೀಯ ಅವಕಾಶ, ಸೇವಾ ಅವಕಾಶ, ಅಧಿಕಾರ ಅವಕಾಶ ಇವುಗಳನ್ನು ಎಲ್ಲಾ ವರ್ಗದ ಜನಗಳಿಗೂ ಸಮಾನವಾಗಿ ಕಲ್ಪಿಸಿಕೊಡಲಾಗಿದೆಯೇ ಎನ್ನುವುದನ್ನು ವಿಶ್ಲೇಷಣೆ ಮಾಡಿ ನೋಡಬೇಕಾದ ಸಂದರ್ಭ ಬಂದಿದೆ. ಇವುಗಳನ್ನು ವಿಶ್ಲೇಷಣೆ ಮಾಡತಕ್ಕ ಸಂದರ್ಭದಲ್ಲಿ ಕೆಲವು ಸಾದನೋಪಾಯಗಳು ಬೇಕು. ಅದಕ್ಕೋಸ್ಕರ ಒಂದು ಜನಗಣತಿಯ ಅವಕಾಶವನ್ನು ಮಾಡಿಕೊಳ್ಳಬೇಕಾಗಿದೆ. ಅದರ ಅವಶ್ಯಕತೆ ಇದೆಯೆಂದು ಹೇಳಬೇಕಾದರೆ ಕೆಲವು ದೃಷ್ಟಾಂತಗಳ ಮುಖಾಂತರ ಉದಹರಿಸಿ ಹೇಳಬೇಕಾಗುತ್ತದೆ. ಆದ್ದರಿಂದ ನಾನು ತಮಗೆ ಹೇಳುವುದು ಏನೆಂದರೆ ಇವೊತ್ತು ಎಲ್ಲರಿಗೂ ಗೊತ್ತಿರುವ ಹಾಗೆ ಜಾತೀಯತೆ ಇಲ್ಲದೆ ಇರತಕ್ಕ ಸಮಾಜವನ್ನು ಯಾರೂ ನಿರ್ಮಾಣ ಮಾಡಿರತಕ್ಕ ವ್ಯವಸ್ಥೆ ಇಲ್ಲ. ಪುರಾತನ ಕಾಲದಿಂದಲೂ ಜಾತೀಯ ಪದ್ಧತಿ ನಿರ್ಮಾಣವಾಗಿರತಕ್ಕ ಒಂದು ವ್ಯವಸ್ಥೆ. ಸಮಾಜದಲ್ಲಿರತಕ್ಕ ವ್ಯಕ್ತಿ, ರಾಜಕಾರಿಣಿಗಳು, ವಿಚಾರವಂತರು, ಪ್ರಜ್ಞಾವಂತರು ಸಮಾಜದಲ್ಲಿ ಸಮಾನತೆಯನ್ನು ತರಬೇಕು ಎಂದು ಹೇಳಿದರೂಕೂಡ ಜಾತಿ ಜಾತಿಯಲ್ಲೇ ಮದುವೆಯಾಗುವ ಪದ್ಧತಿ ಇದೆ. ತಮ್ಮ ಸಂಬಂಧದಲ್ಲಿಯೇ ಮದುವೆಯಾಗುವ ಪದ್ಧತಿ ಇದೆ. ತಮ್ಮ ಜಾತಿಯನ್ನು ಬಿಟ್ಟು ಮುಂದೆ ಹೋಗಿ ಬೇರೆ ಜಾತಿಯಲ್ಲಿ ಮದುವೆಯಾಗತಕ್ಕ ಪದ್ಧತಿ ಇನ್ನೂ ನಮ್ಮ ಸಮಾಜದಲ್ಲಿ ನಿರ್ಮಾಣವಾಗಿಲ್ಲ. 25 ವರ್ಷಗಳ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಮ್ಮ ರಾಜ್ಯಾಂಗ ನಿರ್ಮಾಣವಾದ ಮೇಲೂ ಕೂಡ ಇವೊತ್ತು ಜಾತಿ ಯಾವ ಸೀಮಿತ ಕ್ಷೇತ್ರದಲ್ಲ ಉಳಿದಿದೆ, ಬೆಳೆದು ನಿಂತಿದೆ. ಈ ಬೇಲಿಯನ್ನು ಕಂದಕವನ್ನು ಕಡಿದು ಹಾಕಿ ಮುಂದೆ ಹೋಗತಕ್ಕಂಥಾದ್ದನ್ನು ಯಾವ ಸಮಾಜವೂ ಮಾಡಿಲ್ಲ. ಮಾಡುತ್ತಲೂ ಇಲ್ಲ. ಜಾತಿ ಎನ್ನುವ ಕಂದಕ ಇನ್ನಷ್ಟು ಗಾಢವಾಗಿ ಬೆಳೆದು ನಿಂತಿದೆ. ಎಲ್ಲಾ ಜಾತೀಯವರೂ ಕೂಡ ಅವರಷ್ಟಕ್ಕೇ ಸಂಘಟನೆ, ಅವರಷ್ಟಕ್ಕೇ ಸಂಬಂಧ, ಅವರಷ್ಟಕ್ಕೇ ಆಚರಣೆ ವಿಚಾರಣೆ ಮಾಡುವುದು ಇದೆ. ಒಂದೊಂದು ಜಾತಿಯವರನ್ನೂ ಅವರು ಅಡಿಗೆ ಮಾಡುವುದರಲ್ಲಿ ಅವರು ಇಂಥಾ ಜಾತಿಯವರೆಂದು ಕಂಡುಹಿಡಿಯಬಹುದು. ಉಪ್ಪಿನಕಾಯಿ ತಿನ್ನುವುದರಿಂದ ಅವರು ಇಂಥಾ ಜಾತಿಗೆ ಸೇರಿದವರು ಎಂದು ಕಂಡುಹಿಡಿಯಬಹುದು. ಸಾರು ಮಾಡುವುದರಿಂದ ಅವರು ಇಂಥಾ ಜಾತಿಯವರು ಎಂದು ಕಂಡುಹಿಡಿಯಬಹುದು. ಆದ್ದರಿಂದ ಜಾತಿಯನ್ನು ಕಂಡುಹಿಡಿಯತಕ್ಕ ಕಾಲದಲ್ಲಿ ನಮ್ಮ ದೇಶದಲ್ಲಿ ಜಾತಿಯ ವ್ಯವಸ್ಥೆ ಬೇರೂರಿನಿಂತಿದೆ. ಇದನ್ನು ಮುಚ್ಚುಮರೆ ಮಾಡುವ ಪ್ರವೃತ್ತಿ ಇಲ್ಲ. ನಮ್ಮಲ್ಲಿ ಬೇಕಾದಷ್ಟು ಅಸಮತೆಗಳು, ರಾಜಕೀಯ ಅಸಮತೆಗಳು. ಸಾಮಾಜಿಕ ಅಸಮತೆಗಳು, ವ್ಯಕ್ತಿ ವ್ಯಕ್ತಿಯ ಅಸಮತೆಗಳು ಇವೆ. ಆ ಅಸಮತೆಗಳನು ತೊಡೆದು ಹಾಕಬೇಕು. ಜಾತೀಯ ವ್ಯವಸ್ಥೆ ಈ ದೇಶದಲ್ಲಿ ನಿರ್ಮಾಣವಾಗಿದೆ. ಜಾತಿಯ ಭಾವನೆ ವ್ಯಕ್ತಿ ವ್ಯಕ್ತಿಯಲ್ಲಿ ಬೇರೂರಿದೆ. ಈ ಅಂತರವನ್ನು ಈ ಭಾವನೆಯನ್ನು ನಿರ್ಮೂಲನ ಮಾಡಬೇಕು, ಜಾತಿಯ ವ್ಯವಸ್ಥೆಯನ್ನು ನಿರ್ಮೂಲನ ಮಾಡಬೇಕು, ರಾಜ್ಯಾಂಗದಲ್ಲಿ ಅಳವಡಿಸಿರತಕ್ಕ ಸಮಾನತೆಯನ್ನು ಕಲ್ಪನೆ ಮಾಡಬೇಕು ಎನ್ನುವುದೇ ಮುಖ್ಯ ಉದ್ದೇಶ. ಈ ಉದ್ದೇಶವನ್ನು ಸಾಧಿಸಬೇಕಾದರೆ ಒಂದು ಗುರಿಯನ್ನು ಇಟ್ಟುಕೊಂಡು ಪ್ರಜಾಪ್ರಭುತ್ವ ವ್ಯವಸ್ಥೆಯ ಪ್ರಕಾರ ಸರ್ಕಾರದ ಕಾರ್ಯಕ್ರಮಗಳು ನಡೆಯಬೇಕು. ಈ ಗುರಿಯನ್ನು ಮುಟ್ಟಬೇಕಾದರೆ ಎಲ್ಲಾ ಕಾರ್ಯಕ್ರಮಗಳೂ ವ್ಯವಸ್ಥಿತವಾದ ಹಾದಿಯಲ್ಲಿ ನಿಯೋಜಿತವಾಗಬೇಕು ನಮ್ಮ ಎಲ್ಲಾ ಕಾರ್ಯಕ್ರಮಗಳೂ, ಎಲ್ಲಾ ಯೋಜನೆಗಳೂ, ಎಲ್ಲಾ ಶ್ರಮಗಳೂ ಎಲ್ಲಾ ವೆಚ್ಚಗಳೂ ಇವೊತ್ತು ಯಾವುದೋ ಸೀಮಿತ ವರ್ಗಕ್ಕೆ, ಸೀಮಿತ ಕ್ಷೇತ್ರಕ್ಕೆ ಹೋಗಿ ಸೇರುತ್ತಿವೆ. ಇವು ಜಾತಿಯ ವ್ಯವಸ್ಥೆಯನ್ನು ತೆಗೆದು ಹಾಕುವುದಕ್ಕೆ ಸಹಾಯಕವಾಗುವುದಿಲ್ಲ ಎಂದು ಖಚಿತವಾದಾಗ ಜಾತಿಯ ವ್ಯವಸ್ಥೆಯನ್ನು ತೆಗೆದುಹಾಕುವುದಕ್ಕೆ ಸಹಾಯಕವಾಗುವಂತಹ ಒಂದು ಪರಿಹಾರವನ್ನು ಕಂಡುಹಿಡಿಯಬೇಕು. ನಮ್ಮ ರಾಜ್ಯದಲ್ಲಿ ಜಾತೀಯತೆಯು ವ್ಯಾಪಕವಾಗಿ ಬೆಳೆದು ಒಂದು ವಿಷಮಕಾರಿಯಾದ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದೆ. ಅದಕ್ಕೋಸ್ಕರ ಸ್ವಲ್ಪ ಹೆಚ್ಚು ಕಡಿಮೆ, ಸರ್ಕಾರಿ ಸೇವೆಯಲ್ಲಿ, ಜಮೀನು ಕೂಡ, ಹೆಚ್ಚು ಸಂಪಾದನೆ ಕೂಡ ಜಾತೀಯ ಆಧಾರದ ಮೇಲೆ ಇವೊತ್ತು ಹಂಚಿದೆ ಎಂದರೆ ತಪ್ಪಾಗುವುದಿಲ್ಲ. ಭೂಮಿ ಆಗಬಹುದು, ಇತರೆ ಚರಸ್ವತ್ತು ಆಗಬಹುದು, ಆಸ್ತಿ ಸಂಪತ್ತು ಆಗಬಹುದು, ಇದು ಹೆಚ್ಚೂ ಕಡಿಮೆ ಒಂದೊಂದು ಜಾತಿಯವರಲ್ಲೇ ಕೇಂದ್ರೀಕೃತವಾಗುವುದನ್ನು ನಾವು ಕಾಣುತ್ತಿದ್ದೇವೆ. ಹೆಚ್ಚು ಬಂಡವಾಳ ಕೂಡ ಒಂದೇ ವರ್ಗದಲ್ಲಿ ಸೇರುತ್ತದೆ, ಸರ್ಕಾರಿ ಸೇವೆಯಲ್ಲಿ ಕೂಡ ಒಂದೇ ವರ್ಗದವರಿಗೆ ಸಿಕ್ಕುತ್ತಿದೆ.

ರಾಜಕಾರಿಣಿಗಳು ಕೂಡ ಹೆಚ್ಚಿಗೆ ಒಂದೇ ವರ್ಗದವರಿಗೆ ಸಿಕ್ಕುತ್ತಿದೆ. ಆಯಾಯ ಜಾತಿಗಳು ಆಯಾಯ ಕಾಲಕ್ಕೆ ತಕ್ಕಂತೆ ರಾಜಕೀಯ ವಾತಾವರಣಕ್ಕೆ ಹೊಂದಿಕೊಂಡು ಎಷ್ಟೋ ಪ್ರಯೋಜನ ಗಳನ್ನು ಪಡೆದಿದ್ದಾರೆ. ಒಂದು ಕಾಲದಲ್ಲಿ ಕೆಲವರಿಗೆ ಭೂಮಿ ಸಿಕ್ಕಿದೆ, ಒಂದು ಕಾಲದಲ್ಲಿ ಕೆಲವರಿಗೆ ಸ್ಥಾನಮಾನಗಳು ಸಿಕ್ಕಿವೆ. ಒಂದು ಕಾಲದಲ್ಲಿ ಕೆಲವರಿಗೆ ಇನಾಂ ಜಮೀನುಗಳು ರಾಜಮಹಾ ರಾಜರುಗಳಿಂದ ಪ್ರಾಪ್ತವಾಗಿವೆ. ಸ್ವಲ್ಪ ಹೆಚ್ಚು ಕಡಿಮೆ ಈ ಇನಾಮ್ ಜಮೀನುಗಳು ಬ್ರಾಹ್ಮಣ ರಿಗೇ ಇದ್ದದ್ದನ್ನು ನಾವು ಕಾಣುತ್ತೇವೆ. ಯಾವುದೋ ಒಂದು ಕಾರಣಕ್ಕಾಗಿ ರಾಜಮಹಾರಾಜರು ಅವರಿಗೆ ಇನಾಂ ಜಮೀನುಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ಈ ಇನಾಂ ಜಮೀನು ಆ ವರ್ಗ ದವರಿಗೇ ಸೇರುತ್ತಿದೆ. ಈ ರೀತಿಯಾಗಿ ಇನಾಂ ಜಮೀನಿನ ಆಸ್ತಿಯ ಹಕ್ಕು ಆ ವರ್ಗದವರಿಗೆ ಸೇರಿ ಕೊಂಡು ಬರುತ್ತಿದೆ. ಈ ರೀತಿ ಜಾತಿಯ ವ್ಯವಸ್ಥೆ ದೇಶದಲ್ಲಿ ಕಾಣುತ್ತಿದೆ. ನಮ್ಮ ಹಳೆಯ ಮೈಸೂರು ರಾಜ್ಯದಲ್ಲಿ 1925ನೇ ಇಸವಿಯಲ್ಲಿ ಸರ್ಕಾರಿ ಸೇವೆಯಲ್ಲಿ ರಾಜ್ಯದ ಸೇವೆಯಲ್ಲಿ ಎಲ್ಲಾ ಜನಾಂಗದವರಿಗೂ ಅವಕಾಶ ಸಿಕ್ಕಬೇಕು ಎನ್ನುವ ವಾದ ಪ್ರಾಪ್ತವಾಯಿತು. ಆಗ ಸರ್ಕಾರಿ ಸೇವೆಯಲ್ಲಿ ಬಹು ಹೆಚ್ಚಿನ ಪಾಲು ಬ್ರಾಹ್ಮಣ ವರ್ಗದವರು ಇದ್ದರು. ಆಗ ಒಂದು ವಾದ ಪ್ರಾರಂಭ ವಾಯಿತು. ಬೇರೆಯವರನ್ನು ನಿರ್ಲಕ್ಷ್ಯ ಮಾಡಿದ್ದಾರೆ, ಬೇರೆಯವರಿಗೆ ಸರ್ಕಾರಿ ಸೇವೆಯಲ್ಲಿ ಅವಕಾಶ ಇಲ್ಲ ಬೇರೆಯವರಿಗೂ ಅವಕಾಶವನ್ನು ಕೊಡಬೇಕು ಎನ್ನುವ ವಾದ ಪ್ರಾರಂಭವಾಯಿತು. ಈ ವಾದವನ್ನು ಪ್ರಮುಖವಾಗಿ ಪ್ರಸ್ತಾಪ ಮಾಡಿರತಕ್ಕವರು ದಿವಂಗತ ಶ್ರೀಮಾನ್ ಕೆ. ಎಚ್. ರಾಮಯ್ಯನವರು. ಅವರು ಒಕ್ಕಲಿಗರ ಜನಾಂಗದಲ್ಲಿ ಬಂದಂತಹ ಮೊದಲನೇ ಗ್ರಾಜುಯೇಟ್. ಈ ವಿಷಯ ಮಾನ್ಯ ಮುಖ್ಯಮಂತ್ರಿಗಳಿಗೂ ಗೊತ್ತಿದೆ. ಆಗ ಅಂದಿನ ಮಹಾರಾಜರು ಒಂದು ಆಜ್ಞೆಯನ್ನು ಹೊರಡಿಸಿದರು. ಅದು ಏನೆಂದರೆ ಬೇರೆ ಜನಾಂಗದವರಿಗೂ ಕೂಡ ರಾಜ್ಯದ ಸೇವೆ ಯಲ್ಲಿ, ಸರ್ಕಾರಿ ಸೇವೆಯಲ್ಲಿ ಅವಕಾಶವನ್ನು ಕಲ್ಪಿಸಿಕೊಡಬೇಕು ಎಂದು. ಆಗ ಸ್ವಲ್ಪ ಹೆಚ್ಚುಕಡಿಮೆ ಒಕ್ಕಲಿಗರು ಮತ್ತು ಲಿಂಗಾಯಿತರು ರಾಜ್ಯದ ಸೇವೆಯಲ್ಲಿ ಕಡಿಮೆ ಪ್ರಮಾಣದಲ್ಲಿ ಕೆಲಸಗಳನ್ನು ಹೊಂದಿರತಕ್ಕ ಪರಿಸ್ಥಿತಿ ಇತ್ತು. ಈ ಪರಿಸ್ಥಿತಿಯನ್ನು ಮನಗಂಡು ಬೇರೆ ಜನಾಂಗದವರಿಗೂ ರಾಜ್ಯದ ಸೇವೆಯಲ್ಲಿ ಸರ್ಕಾರಿ, ಸೇವೆಯಲ್ಲಿ ಅವಕಾಶವನ್ನು ಕಲ್ಪಿಸಬೇಕು ಎನ್ನತಕ್ಕಂಥಾ ದೃಷ್ಟಿ ಕೋಣದಿಂದ ಮಹಾರಾಜರ ಸರ್ಕಾರ ಒಂದು ಆಜ್ಞೆಯನ್ನು ರಾಜ್ಯದಲ್ಲಿ ಹೊರಡಿಸಿತು.

10-30 A.M.

ಆ ಆಧಾರದ ಮೇಲೆ ಬೇರೆಯವರಿಗೆ ಸರ್ಕಾರಿ ಸೇವೆಯಲ್ಲಿ ಸ್ವಲ್ಪ ಅವಕಾಶ ಸಿಕ್ಕಲು ಪ್ರಾರಂಭ ವಾಯಿತು. ನಾನು ಈ ಕಾಲದ ಅವಧಿಯನ್ನು ಎರಡು ವಿಭಾಗವಾಗಿ ಭಾಗಮಾಡಿದ್ದೇನೆ. ಒಂದು 1929 ರಿಂದ 1946ರ ವರೆಗೆ ಒಂದು ಹಂತ ಆ ಅನಂತರ 1917 ರಿಂದ 1974ರ ವರೆಗೆ ಒಂದು ಹಂತ ಎಂದು. 1929 ರಲ್ಲಿ ಜಾತೀ ಆಧಾರದಮೇಲೇ ಕೆಲವು ಹಿಂದುಳಿದ ವರ್ಗಗಳವರಿಗೆ ಸರ್ಕಾರಿ ಸೇವೆಯಲ್ಲಿ ಸ್ಥಾನಕೊಡಬೇಕೆಂದು ಏನು ಒಂದು ಸರ್ಕಾರಿ ಆಜ್ಞೆ ಹೊರಟಿತು ಅದಕ್ಕೆ ಹಿಂದೆ ಈ ಸರ್ಕಾರಿ ಸೇವೆಗಳೆಲ್ಲಾ ಸುಮಾರು ನೂರಕ್ಕೆ ತೊಂಭತ್ತರಷ್ಟು ನೌಕರಿಗಳೇನಿದ್ದವು ಅವುಗಳೆಲ್ಲ ಒಂದೇ ಕೋಮಿನವರಿಗೆ ದೊರೆತಿದ್ದವು—ಅಂದರೆ ನೂರಕ್ಕೆ 90 ರಷ್ಟು ಈ ಸರ್ಕಾರಿ ನೌಕರಿಗಳು ಕೇವಲ ಒಂದು ಬ್ರಾಹ್ಮಣವರ್ಗದವರ ಕೈಲಿದ್ದವು. ಹಾಗಿರುವುದು ಸರಿಯಲ್ಲ ಎಂದು ಅಗ ಮದ್ರಾಸಿ ನಲ್ಲಿ ಜಸ್ಟೀಸ್ ಪಾರ್ಟಿ ಎಂದು ಒಂದು ಪಾರ್ಟಿ ಎದ್ದಿತು ; ಇಲ್ಲಿ ಮೈಸೂರು ರಾಜ್ಯದಲ್ಲಿ ನಾನ್ ಬ್ರಾಹ್ಮಿನ್ ಪಾರ್ಟಿ ಎಂಬುದಾಗಿ ಒಂದು ಪಾರ್ಟಿ ಎದ್ದಿತು. ಹಾಗೆ ಆ ಪಾರ್ಟಿಗಳೆದ್ದ ನಂತರ ಮತ್ತು ಅಗ್ಗೆ ಸರ್ಕಾರದವರು ಹೊರಡಿಸಿದ ಒಂದು ಆಜ್ಞೆಯ ದೆಶೆಯಿಂದ ಸರ್ಕಾರಿ ಸೇವೆಗಳಲ್ಲಿ ಬ್ರಾಹ್ಮಣರ ಸಂಖ್ಯೆ 1929 ರಿಂದ 1947 ರ ವರೆಗೂ ದಿನೇ ದಿನೇ ಕಡಿಮೆಯಾಗುವುದಕ್ಕೆ ಪ್ರಾರಂಭ ವಾಯಿತು. ಆದರೆ ಹಾಗೆ ಆ ಬ್ರಾಹ್ಮಣರಿಗೆ ಕಡಿಮೆಯಾದ ಸ್ಥಾನಗಳೆನಿದ್ದವು ಅವು ಇನ್ನುಳಿದ ಎಲ್ಲ ಬ್ರಾಹ್ಮಣೇತರವರ್ಗಗಳಿಗೂ ಸರಿಸಮನಾಗಿ ಹಂಚಿಕೆಯಾದವೆ ಅಥವಾ ಇಲ್ಲವೇ ಎಂಬುದನ್ನು ನಾವೀಗ ಪರಿಶೀಲನೆ ಮಾಡಬೇಕಾಗಿದೆ. 1929 ರಿಂದ 1947 ರ ವರೆಗೂ ಸರ್ಕಾರಿ ಸೇವೆಯಲ್ಲಿ ಅತ್ಯಧಿಕ ಸಂಖ್ಯೆಯಲ್ಲಿದ್ದ ಆ ಬ್ರಾಹ್ಮಣರ ಸಂಖ್ಯೆ ಶೇ : 40 ಅಥವಾ 45 ರಷ್ಟು ಕಡಿಮೆಯಾಯಿತು ; ಈ ಅವಧಿಯಲ್ಲಿ ಹಾಗೆ ಏನು ಆ ಬ್ರಾಹ್ಮಣವರ್ಗಕ್ಕೆ ಶೇ : 40—45 ರಷ್ಟು ಕಡಿಮೆಯಾಯಿತು, ಅಷ್ಟು ಸ್ಥಾನಗಳು ಆ ಬ್ರಾಹ್ಮಣವರ್ಗದವರನ್ನು ಬಿಟ್ಟು ಇನ್ನುಳಿದ ಎಲ್ಲ ಬ್ರಾಹ್ಮಣೇತರ ವರ್ಗ ಗಳವರಿಗೂ ಸೇರಿರುತ್ತವೆ. ಆದರೆ ವಾಸ್ತವಾಂಶದಲ್ಲಿ ಹಾಗಾಗಲಿಲ್ಲ. ಆ 45 ಪರ್ಸೆಂಟ್ ನೌಕರಿ ಗೇನಿದ್ದವು ಅವು ಎಲ್ಲ ವರ್ಗದವರಿಗೂ ಸರಿಸಮನಾಗಿ ಹಂಚಿಕೆಯಾಗಲಿಲ್ಲ. ಆ ನೌಕರಿಗಳೆಲ್ಲಾ ಕೇವಲ ಎರಡು ಮೇಜರ್ ಕಮ್ಯುನಿಟಿಗಳಾದ ಒಕ್ಕಲಿಗರು ಮತ್ತು ಲಿಂಗಾಯಿತ ಕೋಮುಗಳಲ್ಲಿ ಸೀಮಿತವಾದವು ಎಂಬುದು ನನ್ನ ವಾದ. ಇನ್ನು ಇದರಂತೆಯೇ 1956 ರಿಂದ 1947ರ ವರೆಗೂ

(ಶ್ರೀ ಕಾಗೋಡು ತಿಮ್ಮಪ್ಪ)

ಸರ್ಕಾರಿ ಸೇವೆಯಲ್ಲಿ ಯಾವ ಯಾವ ಕೋಮಿನವರು ಎಷ್ಟೆಷ್ಟಿದ್ದಾರೆಂಬುದನ್ನು ತಿಳಿಯುವುದು ಅಷ್ಟೇ ಗಮನಾರ್ಹವಾದ ಅಂಶ. ಈ ಅವಧಿಯಲ್ಲೂ ಕೂಡ ಆ ಬ್ರಾಹ್ಮಣ ಜನಾಂಗದವರು ತಮ್ಮ ಶೇ : 30—35 ರ ಪಾಲಿನ ಜೊತೆಗೆ ಇನ್ನಷ್ಟು ಸೇವೆಗಳನ್ನು ಹೆಚ್ಚು ಪಡೆದಿದ್ದಾರೆ. ಅವರಿಗೆ ದೊರೆತನಂತರ ಉಳಿಯತಕ್ಕ ಶೇ : 65 ರಷ್ಟು ಸರ್ಕಾರಿ ಸ್ಥಾನಗಳಲ್ಲಿ ಶೇ : 45 ರಷ್ಟು ನಾನಾಗಲೇ ಹೇಳಿದ ಎರಡು ಮೇಜರ್ ಕೋಮುಗಳಾದ ಒಕ್ಕಲಿಗರು ಮತ್ತು ಲಿಂಗಾಯಿತರಿಗೆ ಸೇರಿರುತ್ತವೆ. ಇನ್ನುಳಿದ ಶೇ : 20 ರಷ್ಟು ಸ್ಥಾನಗಳು ರಾಜ್ಯದ ಶೇ : 65 ರಷ್ಟು ಜನತೆಗೆ ಹಂಚಿಕೆಯಾಗಿವೆ. ಆದರೆ ಬ್ರಾಹ್ಮಣೇತರರಿಗೆ ಹೆಚ್ಚು ಸ್ಥಾನಗಳು ಸಿಗಬೇಕೆಂದು ಏನೊಂದು ಚಳವಳಿ ಇಲ್ಲಿ ಆ 1929 ರಲ್ಲಿ ಪ್ರಾರಂಭವಾಯಿತೋ ಅದಕ್ಕನುಸಾರವಾಗಿ ಆ ಸ್ಥಾನಗಳು ಎಲ್ಲ ಬ್ರಾಹ್ಮಣೇತರವರ್ಗಗಳಿಗೂ ಒಂದು ಸಮನಾದ ರೀತಿಯಲ್ಲಿ ಹಂಚಿಕೆಯಾಗದೆ ಅವೆಲ್ಲಾ ಕೇವಲ ರಾಜ್ಯದ ಎರಡು ದೊಡ್ಡ ಕೋಮುಗಳಾದ ಒಕ್ಕಲಿಗರು ಮತ್ತು ಲಿಂಗಾಯಿತ ಕೋಮುಗಳವರಿಗೆ ಸೇರಿವೆ. ಇದಕ್ಕೆ ಬೇರೆ ಕಾರಣಗಳೂ ಉಂಟು—ಅಂದರೆ ಆಗಿನ ಕಾಲದಲ್ಲಿ ಈ ರಾಜಕೀಯ ಸ್ವಲ್ಪ ಹೆಚ್ಚುಕಡಿಮೆ ಆ ಎರಡು ಮೇಜರ್ ಕೋಮುಗಳ ಕೈಲೇ ಇತ್ತು. ಅಂದಿನ ಕಾಲದಲ್ಲಿ ಬೇರೆ ವರ್ಗಗಳವರು ರಾಜಕೀಯದಲ್ಲಿ ಅಷ್ಟಾಗಿ ಪ್ರವೇಶಿಸಿರಲಿಲ್ಲ. ಹೀಗೆ ನಾನು ಹೇಳುತ್ತಿರುವುದು ''ಹೌದೇ'' ಅಥವಾ ''ಅಲ್ಲವೇ'' ಎಂಬುದನ್ನು ಕಂಡುಹಿಡಿಯುವುದಕ್ಕಾಗಿ ಕೋಮುವಾರು ಜನಗಣತಿ ನಡೆಯಬೇಕೆಂದು ನಾನು ಹೇಳುತ್ತಿದ್ದೇನೆ. ನಾನು ಈ ಸಂದರ್ಭದಲ್ಲಿ ಒಂದು ಉದಾಹರಣೆಯನ್ನು ಕೊಟ್ಟು ನಾನು ಹೇಳುತ್ತಿರುವುದು ಸರಿಯಾಗಿದೆ ಎಂದು ಅನ್ನಿಸಬಹುದು. 1956—58 ರಲ್ಲಿ ಇದ್ದಂತ ನಾಗನಗೌಡ ಸಮಿತಿಯವರ ವರದಿಯಲ್ಲಿ ಕೆಲವು ಅಂಶಗಳನ್ನು ನಾನಲ್ಲಿ ಉದ್ಧರಿಸುವುದಕ್ಕೆ ಇಷ್ಟಪಡುತ್ತೇನೆ. ಈ ವರದಿಯಲ್ಲಿ ಹೇಳಿರುವ ಪ್ರಕಾರ :—

ಪ್ರಜಾಸಂಖ್ಯೆ	ಜಾತಿ	ಸರ್ಕಾರಿ ನೌಕರಿಗಳಲ್ಲಿ ಶೇ : ಪ್ರಾತಿನಿಧ್ಯ	
ಶೇ : 4.05	ಬ್ರಾಹ್ಮಣರು	ಶೇ : 49.36—	ಗೆಜೆಟೆಡ್ ನೌಕರಿಗಳಲ್ಲಿ
ಶೇ : 20.34	ಒಕ್ಕಲಿಗರು	ಶೇ : 5.5	ಡಿಟೋ
ಶೇ : 11.63	ಲಿಂಗಾಯಿತರು	ಶೇ : 7.4	ಡಿಟೋ
ಶೇ : 6.48	ಕುರುಬ	ಶೇ : 0.8	ಡಿಟೋ
ಶೇ : 4.59	ಬೇಡರು	ಶೇ : 0.16	ಡಿಟೋ
ಶೇ : 19. 4	ಡಿಪ್ರೆಸ್ಡ್ ಕ್ಲಾಸ್	ಶೇ : 0.95	ಡಿಟೋ
ಶೇ : 7.95	ಮುಸಲ್ಮಾನರು	ಶೇ : 5.29	ಡಿಟೋ
ಶೇ : 6.38	ಇಂಡಿಯನ್ ಕ್ರೈಸ್ತರು	ಶೇ : 10.18	ಡಿಟೋ

ಹೀಗೆ ಇದನ್ನು ನೋಡಿದರೆ ಹೆಚ್ಚು ಜನಸಂಖ್ಯೆಯುಳ್ಳ ಜನಾಂಗಕ್ಕೆ ಸರ್ಕಾರಿ ಸೇವೆಗಳಲ್ಲಿ ಕಡಿಮೆ ಅವಕಾಶವೂ, ಕಡಿಮೆ ಜನಾಂಗಕ್ಕೆ ಹೆಚ್ಚಿನ ಅವಕಾಶವೂ ಸಿಕ್ಕಿದೆಯೆಂಬುದು ಇದರಿಂದ ವೇದ್ಯವಾಗುತ್ತದೆ. ಇದಾದಮೇಲೆ ಎನ್.ಜಿ.ಒ. ಗಳ ವಿಚಾರ ಹೇಳುತ್ತೇನೆ. 1946 ರಲ್ಲಿದ್ದ ಒಂದು ಪರಿಸ್ಥಿತಿ ಇದು. ಬ್ರಾಹ್ಮಣರು 38.45 ಪರ್ಸೆಂಟ್ ನಾನ್ ಗೆಜೆಟೆಡ್ ಹುದ್ದೆಗಳನ್ನು ಪಡೆದಿದ್ದರು, ಒಕ್ಕಲಿಗರು ಶೇಕಡ 8.08, ಲಿಂಗಾಯಿತರು ಶೇಕಡ 10.82, ಕುರುಬರು ಶೇಕಡ 1.63, ಬೇಡರು ಶೇಕಡ 0.85, ಡಿಪ್ರೆಸ್ಡ್ ಕ್ಲಾಸಿನವರು ಶೇಕಡ 4.58, ಇತರ ಕ್ಯಾಸ್ಟ್ ಹಿಂದುಗಳು ಶೂದ್ರರು ಶೇಕಡ 11. 2, ಕ್ರಿಶ್ಚಿಯನ್ನರು ಶೇಕಡ 4.63, ಮುಸಲ್ಮಾನರು ಶೇಕಡ 10.52 ನಾನ್‌ಗೆಜೆಟೆಡ್ ಹುದ್ದೆಗಳನ್ನು ಪಡೆದಿದ್ದರು. ಇಂದು ಹಿಂದಿದ್ದಹಾಗೆಯೇ ಇದೆ, ಪರಿಸ್ಥಿತಿ ಬದಲಾವಣೆಯಾಗಿಲ್ಲ. ಸ್ವಾತಂತ್ರ್ಯ ಬಂದಮೇಲೆ ಏನಾಗಿದೆ ? ಬದಲಾವಣೆ ಆಗಿದೆಯೇ ? ನಾಗನಗೌಡ ಸಮಿತಿಯವರು ಕೂಡ ಸಮೀಕ್ಷೆ ಮಾಡಿದ್ದಾರೆ, ಬದಲಾವಣೆಯಾಗುವ ಕಾಲದಲ್ಲಿ ಮೇಜರ್ ಕಮ್ಯೂನಿಟೀಸ್ ಹೆಚ್ಚು ಸಹಾಯ ಪಡೆದಿವೆ, ಇದರ ಲಾಭ ಪೂರ್ಣವಾಗಿ ಬ್ರಾಹ್ಮಣೇತರರಿಗೆ ಸಿಕ್ಕಿಲ್ಲ. ನಾಗನಗೌಡ

ಸಮಿತಿಯ ವರದಿ ಮತ್ತು 1946 ರರ ಅಂಕಿಅಂಶ ನೋಡಿದರೆ ಇದು ಖಚಿತವಾಗುವುದು. 1959ರ ವರೆಗೆ ಒಂದೂವರೆ ದಶಕದಲ್ಲಿ ಬದಲಾವಣೆಯಾಗಿರುವದು ಇಷ್ಟೆ. 31-3-1959 ರಲ್ಲಿ ಸರಕಾರಿ ಹುದ್ದೆಗಳಲ್ಲಿ ಕಮ್ಯೂನಿಟಿಗಳ ರೆಪ್ರೆಸೆಂಟೇಷನ್ ಸರಕಾರದಲ್ಲಿ ಹೀಗಿದೆ. ಉತ್ತಿಯಲ್ಲಿ ಹೆಚ್ಚು ಭಾಗ ಯಾರ ಕಡೆಗೆ ಹೋಗುತ್ತಿದೆಯೆಂಬುದನ್ನು ಹೇಳುತ್ತೇನೆ. 1959 ರಲ್ಲಿ ಬ್ರಾಹ್ಮಣರಲ್ಲಿ 1012 ಜನ ಗೆಜೆಟೆಡ್ ಹುದ್ದೆಗಳಲ್ಲಿ ಮತ್ತು 25123 ಜನ ನಾನ್‌ಗೆಜೆಟೆಡ್ ಹುದ್ದೆಗಳಲ್ಲಿ, ನಾಲ್ಕನೆ ದರ್ಜೆ ಹುದ್ದೆಗಳಲ್ಲಿ 2294 ಜನ, ಒಟ್ಟು 28429 ಜನರು ಹುದ್ದೆಗಳಲ್ಲಿದ್ದರು. ಟೋಟಲ್ ಪರ್ಸೆಂಟೇಜ್ ಸೇಕಡ 19.12 ಇತ್ತು. ಇನ್ನು ಬೇರೆಯವರಲ್ಲಿ ಗೆಜೆಟೆಡ್ ಮತ್ತು ನಾನ್‌ಗೆಜೆಟೆಡ್ ಹುದ್ದೆಗಳನ್ನು ಎಷ್ಟು ಮಂದಿ ಪಡೆದಿದ್ದರೆಂಬುದನ್ನು ಹೇಳುತ್ತೇನೆ. ಬ್ರಾಹ್ಮಣರದು ಎಲ್ಲರಿಗಿಂತ ಅಧಿಕವಾಗಿತ್ತು, ಅವರಿಗೆ ಹೆಚ್ಚು ಹುದ್ದೆಗಳು ದೊರೆತಿದ್ದವು. ಇನ್ನು ಮೇಜರ್ ಕಮ್ಯೂನಿಟೀಸ್ ನೋಡೋಣ. ಲಿಂಗಾಯಿತರ ಜನಸಂಖ್ಯೆ 15.57 ಪರ್ಸೆಂಟ್. ಅವರಲ್ಲಿ ಗೆಜೆಟೆಡ್ ಹುದ್ದೆಗಳಲ್ಲಿ 488 ಜನ, ನಾನ್‌ಗೆಜೆಟೆಡ್ ಹುದ್ದೆಗಳಲ್ಲಿ 15706 ಜನ, ನಾಲ್ಕನೆ ದರ್ಜೆ ಕೆಲಸದಲ್ಲಿ 2217 ಜನ ಇದ್ದರು. ಸೇಕಡ 12.40 ಅವರಿಗೆ ದೊರೆತಿತ್ತು. 1946 ರಲ್ಲಿ ಸೇಕಡ 7.4 ಇದ್ದುದು ಈಗ ಸೇಕಡ 12 ಕ್ಕೆ ಏರಿದೆ. ಒಕ್ಕಲಿಗರಲ್ಲಿ 316 ಜನರು ಗೆಜೆಟೆಡ್ ಹುದ್ದೆಗಳಲ್ಲಿ, 9457 ಜನರು ನಾನ್‌ಗೆಜೆಟೆಡ್ ಹುದ್ದೆಗಳಲ್ಲಿ, 6113 ಜನರು ನಾಲ್ಕನೆ ದರ್ಜೆಯ ಹುದ್ದೆಗಳಲ್ಲಿ ಇದ್ದು, ಒಟ್ಟು 15886 ಜನರಿಗೆ ನೌಕರಿ ಇತ್ತು. ಇದರ ಪ್ರಕಾರ ಸೇಕಡ 10.68 ದೊರೆತಿತ್ತು. ಹಿಂದೆ ಸೇಕಡ 5.5 ಇದ್ದುದು ಸೇಕಡ 3.4 ರಷ್ಟು ಹೆಚ್ಚಾಗಿದೆ. ಈ ಪ್ರಮಾಣದಲ್ಲಿ ಬೇರೆ ಜಾತಿಗಳವರದೂ ಹೆಚ್ಚಾಗಿದೆಯೇ ಎಂದು ನೋಡೋಣ. ಕುರುಬರಲ್ಲಿ ಗೆಜೆಟೆಡ್ ಆಫೀಸರುಗಳು 1946 ರಲ್ಲಿ ಸೇಕಡ 0.8 ಇದ್ದರು, ಅವರ ಜನಸಂಖ್ಯೆ ಸೇಕಡ 6.8. ನಂತರ ಗೆಜೆಟೆಡ್ ಹುದ್ದೆಗಳು ಅವರಿಗೆ 56 ದೊರೆತಿವೆ, ಇದರಿಂದ ಸೇಕಡ 0.8 ಇದ್ದುದು ಈಗ ಸೇಕಡ 2 ಆಗಿದೆ. ಅವರಿಗೆ 2452 ನಾನ್‌ಗೆಜೆಟೆಡ್ ಹುದ್ದೆಗಳು, 2079 ನಾಲ್ಕನೆ ದರ್ಜೆ ಹುದ್ದೆಗಳು ದೊರೆತು ಒಟ್ಟು 4587 ಹುದ್ದೆಗಳು ಸಿಕ್ಕಿವೆ. ಇದರ ಪ್ರಕಾರ ಸೇಕಡ 3.09 ದೊರೆತಂತಾಯಿತು. ಬೇಡರಿಗೆ ಸೇಕಡ 0.16 ಇತ್ತು, ಈ ದಿವಸ 19 ಜನರಿದ್ದಾರೆ, ಒಟ್ಟು ಸೇಕಡ 1.05 ಅವರಿಗೆ ದೊರೆತಿದೆ. ಅಗಸರನ್ನು ತೆಗೆದುಕೊಂಡರೆ ಹಿಂದೆ 0.0 ಇತ್ತು, 59 ರಲ್ಲಿ ಗೆಜೆಟೆಡ್ ಹುದ್ದೆ 5 ಆಯಿತು. ಒಟ್ಟಿನಲ್ಲಿ 0.90 ಆಯಿತು, ಒಂದಕ್ಕೆ ಹತ್ತಿರ ಬಂದರು.

ಮುಸ್ಲಿಮರ ಪಾಪ್ಯುಲೇಷನ್ 15.03 ಇವರಲ್ಲಿ ಸೇಕಡ ಐದರಷ್ಟು ಜಾಸ್ತಿಯಾಗಿದೆ. ಒಟ್ಟು ಲೆಕ್ಕ ಹಾಕಿದರೆ 1959ರಲ್ಲಿ ಜಾಸ್ತಿಯಾಗಿದೆ. ಮುಸ್ಲಿಮರಿಗೆ ಗೆಜೆಟೆಡ್ ಪೋಸ್ಟ್‌ನಲ್ಲಿ 7.85 ಪರ್ಸೆಂಟ್ ಇತ್ತು, ನಾನ್ ಗೆಜೆಟೆಡ್ ಪೋಸ್ಟ್‌ನಲ್ಲಿ 10.52 ಇತ್ತು. 1959ರಲ್ಲಿ ಗೆಜೆಟೆಡ್ ಹುದ್ದೆಗಳಲ್ಲಿ 313ಕ್ಕೆ ಏರಿದೆ, ನಾನ್ ಗೆಜೆಟೆಡ್ ಹುದ್ದೆಗಳಲ್ಲಿ 14,494 ಜನರಿದ್ದು, ನಾಲ್ಕನೇ ದರ್ಜೆಯೂ ಸೇರಿದಂತೆ ಪರ್ಸೆಂಟೇಜ್ 15ಕ್ಕೆ ಏರಿದೆ. ಅದುದರಿಂದ ಈ ಪ್ರಮಾಣಗಳನ್ನು ನೋಡಿದರೆ ಏರಿಳಿತಗಳು ಹೇಗಾಗಿವೆ, ನಮ್ಮ ಅನುಕೂಲತೆಗಳು ಅಥವಾ ಅಭಿವೃದ್ಧಿಗಳು ಅಥವಾ ಸಾಧನೆಗಳು ಸೀಮಿತ ಕ್ಷೇತ್ರದಲ್ಲಿ ಹೇಗೆ ಸೇರಿದ್ದಾವೆ ಎನ್ನುವ ಮಾಹಿತಿ ಸಿಕ್ಕುತ್ತದೆ.

ಇನ್ನೊಂದು ಸ್ವಾರಸ್ಯಕರವಾದ ವಿಚಾರವೆಂದರೆ ಬೆಂಗಳೂರು ಮೆಡಿಕಲ್ ಕಾಲೇಜಿನ ಒಂದು ದಶಕದಲ್ಲಿ ಕೊಟ್ಟಿರುವ ಸೀಟುಗಳ ವಿಚಾರವನ್ನು ಹೇಳುತ್ತೇನೆ. 1964—65ರಿಂದ 1972—73 ರ ವರೆಗಿನ ಅಂಕಿ ಅಂಶಗಳನ್ನು ಸಭೆಯ ಗಮನಕ್ಕೆ ತರುತ್ತೇನೆ. ಈ ಅವಧಿಯಲ್ಲಿ ಕೊಟ್ಟಿರುವ ಸೀಟುಗಳ ಸಂಖ್ಯೆ 1750. ಇದರಲ್ಲಿ ಬ್ರಾಹ್ಮಣರಿಗೆ 654, ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ನವರಿಗೆ 319, ಒಕ್ಕಲಿಗರಿಗೆ 322, ಲಿಂಗಾಯಿತರಿಗೆ 155, ಮುಸ್ಲಿಮರಿಗೆ 155, ವೈಶ್ಯರಿಗೆ 104 ಸೀಟುಗಳೂ ದೊರೆತಿವೆ. ವೈಶ್ಯರ ಜನಸಂಖ್ಯೆ 0.6 ಪರ್ಸೆಂಟ್ ಎಂದು ಹೇಳುತ್ತಾರೆ. ಕ್ರಿಶ್ಚಿಯನ್ಸ್ 82, ದೇವಾಂಗ 52, ಬಣಜಿ 53, ಮರಾಠ 51, ಕುರುಬ 52, ಮೊದಲಿಯಾರ್ 36; ಕ್ಷತ್ರಿಯ 26, ಕೂರ್ಗಿ 114, ಪಾಂಚಾಲ 11, ಯಾದವ 15, ಸಿಂಧಿ 15, ಈಡಿಗ 10, ಗಾಣಿಗ 11, ತಿಗಳ 9, ಬಾರ್ಬರ್ 3, ಅಗಸ 6, ಬೇಡ 6, ಉಪ್ಪಾರ 1, ಬೆಸ್ತ 3, ಕುಂಬಾರ 2 ಸಾತಾನಿ 1 ಹೀಗೆ ಒಟ್ಟು 1750 ಸ್ಥಾನಗಳನ್ನು ಮೇಲೆ ಹೇಳಿದ ಜಾತಿಯ ಪ್ರಕಾರವಾಗಿ ಹಂಚಿದ್ದಾರೆ. ಈ ಹೊತ್ತು ಏನಾಗಿದೆ ಎಂದರೆ ಒಟ್ಟು 1750 ಸೀಟುಗಳಲ್ಲಿ 654 ಸೀಟುಗಳು ಒಂದೇ ಜನಾಂಗಕ್ಕೆ ಹೋದರೆ ಸೇಕಡ ಎಷ್ಟು ಆಯಿತು ? ಅದರ ಜೊತೆಗೆ ಇನ್ನೂ ಎರಡು ಮೂರು ಜನಾಂಗವನ್ನು ಸೇರಿಸಿದರೆ ಎಷ್ಟು ಆಗುತ್ತದೆ ಎನ್ನುವುದನ್ನು ನೋಡಬಹುದು.

ಹೆಚ್ಚು ಕಡಿಮೆ ಬೆಂಗಳೂರು ಮೆಡಿಕಲ್ ಕಾಲೇಜ್ ಒಂದು ತರಹ ಕಾಸ್ಮೋಪಾಲಿಟನ್ ಕಾಲೇಜಿದೆ. ಮಣಿಪಾಲ್ ಕಾಲೇಜಿಗೆ ಹೋದರೂ ಯಾರು ಸಿಕುತ್ತಾರೆ, ಬೆಳಗಾಂ ಕಾಲೇಜಿಗೆ ಹೋದರೆ ಯಾರು ಹೆಚ್ಚು ಸಿಕ್ಕುತ್ತಾರೆ, ಬಳ್ಳಾರಿ ಮೆಡಿಕಲ್ ಕಾಲೇಜಿಗೆ ಹೋದರೆ ಯಾರು ಹೆಚ್ಚು

(ಶ್ರೀ ಕಾಗೋಡು ತಿಮ್ಮಪ್ಪ)

ಸಿಕ್ಕುತ್ತಾರೆ, ದಾವಣಗೆರೆ ಕಾಲೇಜಿಗೆ ಹೋದರೆ ಯಾರು ಸಿಕ್ಕುತ್ತಾರೆ ಹಾಗೆಯೇ ಮೈಸೂರು ಕಾಲೇಜಿಗೆ ಹೋದರೆ ಯಾರು ಹೆಚ್ಚು ಸಿಕ್ಕುತ್ತಾರೆ ಎನ್ನುವುದನ್ನು ನೋಡಬೇಕು. ಬೆಳಗಾಂ ಕಾಲೇಜಿನಲ್ಲಿ ಲಿಂಗಾಯಿತರು, ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಒಕ್ಕಲಿಗರೂ, ಮಣಿಪಾಲನಲ್ಲಿ ಬ್ರಾಹ್ಮಣರೂ ಜಾಸ್ತಿ ಸಂಖ್ಯೆಯಲ್ಲಿ ಸಿಕ್ಕಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಎಲ್ಲ ಕಾಲೇಜುಗಳಲ್ಲಿಯೂ ಗವರ್ನ್‌ಮೆಂಟ್ ಸೀಟ್ಸ್ ಕೊಡುವಾಗ ಪ್ರಪೋರ್ಷನ್ ಬರುತ್ತದೆ. ಕ್ಯಾಪಿಟೇಷನ್ ಫೀ, ದುಡ್ಡು ಕೊಟ್ಟಿರುವವರು ಪಡೆದಿರುವ ಸ್ಥಾನಗಳು ಹೆಚ್ಚಾಗಿರಬಹುದು.

ಶ್ರೀ ಕಾಗೋಡು ತಿಮ್ಮಪ್ಪ.—ದಾವಣಗೆರೆ ಕಾಲೇಜಿನಲ್ಲಿ 60 ಪರ್ಸೆಂಟ್ ಸೀಟ್ಸ್ ಇತರೆಯವರಿಗೆ ಹೋದರೆ ಸಂಪತ್ತು ಇರುವವರು ಬಂದು ಓದುವುದಕ್ಕೆ ಅನುಕೂಲವಾಗುತ್ತದೆ. Chain of action and reaction. ಸಂಪತ್ತು ಇರುವವನ್ನು 20—25 ಸಾವಿರ ರೂಪಾಯಿ ಖರ್ಚು ಮಾಡಿ ಮೆಡಿಕಲ್ ಕಾಲೇಜಿನಲ್ಲಿ ಸೀಟನ್ನು ಪಡೆದು ಡಾಕ್ಟರಾಗುತ್ತಾನೆ. ವರ್ಷೇ ವರ್ಷ ಸಂಬಳ ಜಾಸ್ತಿಯಾಗುತ್ತದೆ. ವರಮಾನ ಜಾಸ್ತಿಯಾಗುತ್ತದೆ ಇದೆಲ್ಲ ಅವರಿಗೆ ಹೋಗುತ್ತದೆ. ಸಂಪತ್ತು ಇದ್ದವನಿಗೆ ಮತ್ತೆ ಸಂಪತ್ತು ಸೇರುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಎಲ್ಲೂ ವೆಸ್ಟೆಡ್ ಇಂಟೆರೆಸ್ಟ್ ಡೆವಲಪ್ ಆಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಹೌದು. ಇವೆಲ್ಲ ಸ್ವಲ್ಪ ಉತ್ತಮವಾದ ಕೆಲಸಗಳು ಡಾಕ್ಟರ್ ಪದವಿ ಸಂಪಾದನೆಗೆ ಒಂದು ಮುಖ್ಯವಾದ ಕ್ಷೇತ್ರ. ಅಲ್ಲಿ ಅವನಿಗೆ ಉತ್ತಮವಾಗಿ ಸಂಪಾದನೆಯಾಗುತ್ತದೆ. ನಾನು ಇನ್ನೂ ಒಂದು ವಿಚಾರವನ್ನು ಹೇಳುತ್ತೇನೆ. ಬೆಂಗಳೂರು ನಗರದಲ್ಲಿ ಬೇರೆ ಬೇರೆ ನಗರಗಳಲ್ಲಿ ಮೊಹಲ್ಲಾಗಳು ಆಗಿವೆ. ಅದಕ್ಕೆ ಸರ್ಕಾರ ಬಂಡವಾಳವನ್ನು ತೊಡಗಿಸಿದೆ. 'ಯೋಜನೆಯ ಯಜ್ಞದಲ್ಲಿ ವಪೆಯ ರುಚಿಯ ಕಂಡವರು' ಎಂದು ಹೇಳುವಂತೆ ಕೆಲವು ಜನರು ಮೊಹಲ್ಲಾಗಳಲ್ಲಿ ಸೈಟುಗಳನ್ನು ತೆಗೆದುಕೊಂಡಿದ್ದಾರೆ, ಮನೆಗಳನ್ನು ತೆಗೆದುಕೊಂಡಿದ್ದಾರೆ. ಅವರೇ ಈ ಅನುಕೂಲತೆಗಳನ್ನೆಲ್ಲ ಹಂಚಿಕೊಳ್ಳುತ್ತ ಇರುವವರು.

ಹಾಗೆಯೇ ಈ ಹೊತ್ತು ಏನಾಗಿದೆ, ಪೊಲಿಟಿಕಲ್ ಪವರ್ ಹೇಗಾಗಿದೆ ಎನ್ನುವುದನ್ನು ನೋಡಿ. ಪೊಲಿಟಿಕಲ್ ಇನ್‌ಫ್ಲುಯೆನ್ಸ್, ಸಮಾಜದಲ್ಲಿ ಅಧಿಕಾರ ಸಿಕ್ಕಿದ್ದವರಲ್ಲಿ ಸರ್ವೇಸಾಧಾರಣವಾಗಿ ಈ ಪ್ರಭಾವ ಬೆಳೆಯುತ್ತದೆ. ಆ ಪ್ರಭಾವ ಬೆಳೆದರೆ ಸ್ವಲ್ಪ ಕೂಡಿಕೊಳ್ಳುತ್ತದೆ. ಒಂದೊಂದು ಜನಾಂಗದಲ್ಲಿಯೂ ಒಂದೊಂದು ರೂಲಿಂಗ್ ಕ್ಲಾಸ್, ಪ್ರತಿಯೊಂದು ಸಮಾಜದಲ್ಲಿಯೂ ಒಂದು ರೂಲಿಂಗ್ ಸರ್ಕಲ್ ಮತ್ತು ಅದರಲ್ಲಿ ಮತ್ತೊಂದು ಸರ್ಕಲ್ ಆಗಿರುವುದು ಹೆಚ್ಚು ಕಡಿಮೆ ಎಲ್ಲ ವರ್ಗಗಳಲ್ಲಿಯೂ ಕಾಣಿಸುತ್ತಿದೆ. ಈ ರೂಲಿಂಗ್ ಸೆಕ್ಷನ್ ವಿಸ್ತಾರವಾಗುತ್ತಿರುವುದರಿಂದ ಅವರವರೇ ಎಲವನ್ನೂ ಜನಕೋಟಿಯ ಹೆಸರಿನಲ್ಲಿ ಪಡೆಯುತ್ತಾರೆ. ನಮ್ಮ ಊರಿನಲ್ಲಿ ಕೆಲವರು ಒಕ್ಕಲಿಗರಿದ್ದಾರೆ. ಅವರನ್ನು ನೋಡಿದರೆ ಒಕ್ಕಲಿಗರಲ್ಲ ಎಂದು ಹೇಳಬಹುದು. ಹಾಗೆಯೇ ಕೆಲವು ಕಡೆ ಲಿಂಗಾಯಿತರಿದ್ದಾರೆ. ಅವರನ್ನು ನೋಡಿದರೆ ಲಿಂಗಾಯಿತರಲ್ಲ ಎಂದು ಹೇಳಬಹುದು. ಹೀಗೆಯೇ ಇನ್ನೂ ಕೆಲವು ಜನಾಂಗಗಳಿವೆ. ಬೆಂಗಳೂರಿನಲ್ಲಿರುವ ಶ್ರೀ ಗುರುಸ್ವಾಮಿ, ಶ್ರೀ ವೆಂಕಟಸ್ವಾಮಿ ಇವರನ್ನು ನೋಡಿ ಎಲ್ಲ ಈಡಿಗರೂ ಹೀಗೆಯೇ ಇರುತ್ತಾರೆಂದು ತಿಳಿದುಕೊಂಡು ಅಲ್ಲಿಗೆ ಹೋದರೆ ಅವರಿಗೂ ಇವರಿಗೂ ಹೋಲಿಕೆ ಮಾಡುವುದಕ್ಕಾಗುವುದಿಲ್ಲ. ಪ್ರತಿಯೊಂದು ಸರ್ಕಲಿನಲ್ಲಿಯೂ ಒಂದೊಂದು ರೂಲಿಂಗ್ ಸೆಕ್ಷನ್ ಇರುತ್ತದೆ. This is a creation after this movement.

ಈ ಕ್ಲಾಸ್‌ನಲ್ಲಿ ಇನ್ನೊಂದು ಕ್ಲಾಸ್ ಸಿಸ್ಟಂ ಪ್ರಾರಂಭವಾಗಿದೆ. ರಾಜಕೀಯವಾಗಿ ನಿನ್ನೆ ಒಂದು ಸಣ್ಣ ಉದಾಹರಣೆ ಹೇಳಿದೆ. ಮೇಲೆ ಇರುವವರು ತಮ್ಮ ವರ್ಚಸ್ಸು, ಅಧಿಕಾರವನ್ನು ಬೀರುತ್ತಾ ಹೋಗುತ್ತಾರೆ. ಅವರಿಗೆ ಹೆಚ್ಚು ಸ್ಥಾನಮಾನಗಳು ಸಿಕ್ಕಿದರೆ, ಅವರು ಹೆಚ್ಚು ಹೆಚ್ಚು ಪ್ರಭಾವಗಳನ್ನು ವಿಸ್ತರಿಸಿಕೊಳ್ಳುತ್ತಾ ಹೋಗುತ್ತಾರೆ. ಅಲ್ಲಿಗೆ ಒಂದು ಸೆಕ್ಷನ್ ಬೆಳೆಯುತ್ತಾ ಹೋಗುತ್ತದೆ. ಅದರಲ್ಲಿ ಜಾತೀಯ ವೈಶಿಷ್ಟ್ಯ ಕೂಡ ಇದೆ.

11-00 A. M.

1—11—1956 ರಿಂದ 19—4—1957 ರವರೆಗೆ ಶ್ರೀಮಾನ್ ನಿಜಲಿಂಗಪ್ಪನವರು ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದರು. ಅವರ ಕಾಲದಲ್ಲಿ 12 ಕ್ಯಾಬಿನೆಟ್ ಮಂತ್ರಿಗಳು. ಅದರಲ್ಲಿ ಲಿಂಗಾಯತರು 4 ಕ್ಯಾಬಿನೆಟ್, ಒಕ್ಕಲಿಗರು 3 ಕ್ಯಾಬಿನೆಟ್, ಹಿಂದುಳಿದ ವರ್ಗದವರು 2 ಕ್ಯಾಬಿನೆಟ್, ಪರಿಶಿಷ್ಟ ವರ್ಗದವರು 1 ಕ್ಯಾಬಿನೆಟ್, ಇತರ ಮೈನಾರಿಟೀಸ್ 1 ಕ್ಯಾಬಿನೆಟ್, ಬ್ರಾಹ್ಮಣರು 1 ಕ್ಯಾಬಿನೆಟ್.

19—4—1957 ರಿಂದ 16—5—1958 ರವರೆಗೆ ಶ್ರೀಮಾನ್ ನಿಜಲಿಂಗಪ್ಪನವರು ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದರು. ಆಗ 11 ಕ್ಯಾಬಿನೆಟ್ ಮಂತ್ರಿಗಳು ಮತ್ತು 3 ಉಪ ಮಂತ್ರಿಗಳು. ಅದರಲ್ಲಿ ಲಿಂಗಾಯತರು 3 ಕ್ಯಾಬಿನೆಟ್ ಮತ್ತು ಒಬ್ಬರು ಉಪ ಮಂತ್ರಿಗಳು. ಒಕ್ಕಲಿಗರು 3 ಕ್ಯಾಬಿನೆಟ್, ಹಿಂದುಳಿದ ವರ್ಗದವರು 1 ಕ್ಯಾಬಿನೆಟ್, ಪರಿಶಿಷ್ಟ ವರ್ಗದವರು 1 ಕ್ಯಾಬಿನೆಟ್, ಇತರೇ ಮೈನಾರಿಟೀಸ್‌ನವರು 2 ಕ್ಯಾಬಿನೆಟ್ ಮತ್ತು 1 ಉಪ ಮಂತ್ರಿಗಳು, ಬ್ರಾಹ್ಮಣರು 1 ಕ್ಯಾಬಿನೆಟ್ ಮತ್ತು 1 ಉಪ ಮಂತ್ರಿಗಳು.

16—5—1958 ರಿಂದ 9—3—1962 ರವರೆಗೆ ಶ್ರೀಮಾನ್ ಜತ್ತಿಯವರು ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದರು. ಅವರ ಕಾಲದಲ್ಲಿ 14 ಕ್ಯಾಬಿನೆಟ್ ಮಂತ್ರಿಗಳು, ಮತ್ತು 6 ಉಪ ಮಂತ್ರಿಗಳು. ಅದರಲ್ಲಿ, ಲಿಂಗಾಯತರು 6 ಕ್ಯಾಬಿನೆಟ್ ಮತ್ತು 1 ಉಪ ಮಂತ್ರಿಗಳು, ಒಕ್ಕಲಿಗರು 4 ಕ್ಯಾಬಿನೆಟ್ ಮತ್ತು 1 ಉಪ ಮಂತ್ರಿಗಳು, ಹಿಂದುಳಿದ ವರ್ಗದವರು 1 ಕ್ಯಾಬಿನೆಟ್, ಪರಿಶಿಷ್ಟ ವರ್ಗದವರು 1 ಕ್ಯಾಬಿನೆಟ್ ಮತ್ತು 1 ಉಪ ಮಂತ್ರಿಗಳು, ಇತರೆ ಮೈನಾರಿಟೀಸ್‌ನವರು 3 ಉಪ ಮಂತ್ರಿಗಳು, ಬ್ರಾಹ್ಮಣರು 2 ಕ್ಯಾಬಿನೆಟ್.

9—8—1962 ರಿಂದ 21—6—1962 ರವರೆಗೆ ಶ್ರೀಮಾನ್ ಎಸ್. ಆರ್. ಕಂಠಿಯವರು ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದರು. ಆಗ 9 ಕ್ಯಾಬಿನೆಟ್ ಮಂತ್ರಿಗಳು ಮತ್ತು 2 ಉಪ ಮಂತ್ರಿಗಳು. ಅದರಲ್ಲಿ ಲಿಂಗಾಯತರು 4 ಕ್ಯಾಬಿನೆಟ್, ಒಕ್ಕಲಿಗರು 3 ಕ್ಯಾಬಿನೆಟ್, ಹಿಂದುಳಿದ ವರ್ಗದವರು ಇಲ್ಲ. ಪರಿಶಿಷ್ಟ ವರ್ಗದವರು 1 ಕ್ಯಾಬಿನೆಟ್, ಇತರೆ ಮೈನಾರಿಟೀಸ್‌ನವರು 2 ಉಪ ಮಂತ್ರಿಗಳು, ಬ್ರಾಹ್ಮಣರು 1 ಕ್ಯಾಬಿನೆಟ್.

21—6—1962 ರಿಂದ 3—3—1967 ರವರೆಗೆ ಶ್ರೀಮಾನ್ ಎಸ್. ನಿಜಲಿಂಗಪ್ಪನವರು ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದರು. ಆಗ 15 ಕ್ಯಾಬಿನೆಟ್ ಮಂತ್ರಿಗಳು ಮತ್ತು 11 ಉಪ ಮಂತ್ರಿಗಳು. ಅದರಲ್ಲಿ ಲಿಂಗಾಯತರು 5 ಕ್ಯಾಬಿನೆಟ್ ಮತ್ತು 2 ಡೆಪ್ಯುಟಿ ಮಂತ್ರಿಗಳು, ಒಕ್ಕಲಿಗರು 6 ಕ್ಯಾಬಿನೆಟ್ ಮತ್ತು 2 ಉಪ ಮಂತ್ರಿಗಳು, ಹಿಂದುಳಿದ ವರ್ಗದವರು 2 ಉಪ ಮಂತ್ರಿಗಳು, ಪರಿಶಿಷ್ಟ ವರ್ಗದವರು 1 ಕ್ಯಾಬಿನೆಟ್ ಮತ್ತು 2 ಉಪ ಮಂತ್ರಿಗಳು, ಇತರೆ ಮೈನಾರಿಟೀಸ್‌ನವರು 1 ಕ್ಯಾಬಿನೆಟ್ ಮತ್ತು 3 ಉಪ ಮಂತ್ರಿಗಳು, ಬ್ರಾಹ್ಮಣರು 2 ಕ್ಯಾಬಿನೆಟ್.

3—3—1967 ರಿಂದ 29—5—1968 ರವರೆಗೆ ಶ್ರೀಮಾನ್ ನಿಜಲಿಂಗಪ್ಪನವರು ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದರು. ಆಗ 14 ಕ್ಯಾಬಿನೆಟ್ ಮಂತ್ರಿಗಳು ಮತ್ತು 8 ಉಪ ಮಂತ್ರಿಗಳು. ಅದರಲ್ಲಿ ಲಿಂಗಾಯತರು 5 ಕ್ಯಾಬಿನೆಟ್ ಮತ್ತು 2 ಉಪ ಮಂತ್ರಿಗಳು, ಒಕ್ಕಲಿಗರು 4 ಕ್ಯಾಬಿನೆಟ್ ಮತ್ತು 2 ಉಪ ಮಂತ್ರಿಗಳು, ಹಿಂದುಳಿದ ವರ್ಗದವರು 2 ಉಪ ಮಂತ್ರಿಗಳು, ಪರಿಶಿಷ್ಟ ವರ್ಗದವರು 1 ಕ್ಯಾಬಿನೆಟ್ ಮತ್ತು 1 ಉಪ ಮಂತ್ರಿಗಳು, ಇತರೆ ಮೈನಾರಿಟೀಸ್ 2 ಕ್ಯಾಬಿನೆಟ್ ಮತ್ತು 1 ಉಪ ಮಂತ್ರಿಗಳು, ಬ್ರಾಹ್ಮಣರು 2 ಕ್ಯಾಬಿನೆಟ್.

29-5-1968 ರಿಂದ 27-3-1971 ರವರೆಗೆ ರಾಜ್ಯದ ಮುಖ್ಯ ಮಂತ್ರಿಗಳು ಶ್ರೀ ವಿರೇಂದ್ರ ಪಾಟೀಲರಾಗಿದ್ದರು. ಆಗ 12 ಕ್ಯಾಬಿನೆಟ್ ಮಂತ್ರಿಗಳು, 5 ರಾಜ್ಯ ಸಚಿವರು, 11 ಉಪ ಮಂತ್ರಿಗಳು. ಅದರಲ್ಲಿ ಲಿಂಗಾಯತರು 4 ಕ್ಯಾಬಿನೆಟ್, 2 ರಾಜ್ಯ ಸಚಿವರು, 6 ಉಪ ಮಂತ್ರಿಗಳು, ಒಕ್ಕಲಿಗರು 3 ಕ್ಯಾಬಿನೆಟ್, 3 ರಾಜ್ಯ ಸಚಿವರು, 2 ಉಪ ಮಂತ್ರಿಗಳು, ಹಿಂದುಳಿದ ವರ್ಗದವರು 1 ಕ್ಯಾಬಿನೆಟ್, (ರಾಜ್ಯ ಸಚಿವರು ಇಲ್ಲ), 2 ಉಪ ಮಂತ್ರಿಗಳು, ಪರಿಶಿಷ್ಟ ವರ್ಗದವರು 2 ಕ್ಯಾಬಿನೆಟ್ ಮತ್ತು (ರಾಜ್ಯ ಸಚಿವರು ಇಲ್ಲ) 1 ಉಪ ಮಂತ್ರಿಗಳು, ಇತರ ಮೈನಾರಿಟೀಸ್ 1 ಕ್ಯಾಬಿನೇಟ್, ಬ್ರಾಹ್ಮಣರು 1 ಕ್ಯಾಬಿನೆಟ್.

1-11-1956 ರಿಂದ 27-3-1971 ರವರೆಗಿನ ದಶಕದಲ್ಲಿ ಯಾರು ಹೆಚ್ಚಿನ ಅಧಿಕಾರವನ್ನು ಮಂತ್ರಿ ಮಂಡಲದಲ್ಲಿ ಪಡೆದಿದ್ದಾರೆ ಎಂದು ನೋಡಿದರೆ ಗೊತ್ತಾಗುತ್ತದೆ. ಇದು ಏತಕ್ಕೆ ಆಯಿತು ? 1947ನೇ ಇಸವಿಯ ನಂತರ, ಪ್ರಜಾಪ್ರಭುತ್ವ ವ್ಯವಸ್ಥೆ ಬಂತು. ಈ ಕಾಲದಲ್ಲಿ

(ಶ್ರೀ ಕಾಗೋಡು ತಿಮ್ಮಪ್ಪ)

ಹೋರಾಟದ ಮುಂಚೂಣಿಯಲ್ಲಿ ಯಾರು ಇದ್ದರೋ ಅವರು ಹೆಚ್ಚು ಕಡಮೆ ಸಿಕ್ಕತಕ್ಕ ಸ್ಥಾನಗಳಲ್ಲಿ ಬಂದು ಕೂತುಬಿಡುತ್ತಿದ್ದರು. ಸಮಾಜದ ಮುಖಂಡತ್ವ ಪಡೆಯಲು ನಾನ್‌ಬ್ರಾಹ್ಮಣ್ ಮೂವ್‌ಮೆಂಟ್ ಪ್ರಾರಂಭವಾದ ಮೇಲೆ, ಅಲ್ಲಲ್ಲಿ ಮುಖಂಡತ್ವ ಬೆಳೆಯುವುದಕ್ಕೆ ಅವಕಾಶ ಸಿಕ್ಕಿತು, ಸಿಕ್ಕಿದ ಕೂಡಲೇ ರಾಜಕೀಯದಲ್ಲಿ ಅವರವರು ಸ್ವತಂತವಾಗಿ ಮುಂದೆ ಬರುವುದನ್ನು ನೋಡಿಕೊಂಡರು. ಒಕ್ಕಲಿಗರು ಬಿಟ್ಟರೆ ಲಿಂಗಾಯಿತರು, ಲಿಂಗಾಯಿತರು ಬಿಟ್ಟರೆ ಒಕ್ಕಲಿಗರು, ಅವರವರೇ ಅನುಕೂಲತೆಗಳನ್ನು ಪಡೆದುಕೊಂಡರು. ಇತರರಿಗೂ ರಾಜಕೀಯವಾಗಿ ಸ್ವಲ್ಪ ಶಕ್ತಿ ಬೇಕಾಗುತ್ತದೆ. ಹೆಚ್ಚು ಕಡಮೆ ರಾಜಕೀಯ ಶಕ್ತಿ ಸೇರಿ ಬರುವುದು ಕೂಡ ಜಾತಿಯ ಆಧಾರದ ಮೇಲೆಯೇ. ಇನ್ನೂ ಕೆಲವರು ಇರುತ್ತಾರೆ, ಅವರು ಯಾವ ಜಾತಿಯಲ್ಲಿ ಇಲ್ಲದಿದ್ದರೂ ಕೂಡ, ವ್ಯಕ್ತಿಯ ಆಧಾರದ ಮೇಲೆ ದೊಡ್ಡ ಸ್ಥಾನ ಮಾನಗಳನ್ನು ಮಾಡಿಕೊಂಡಿರುತ್ತಾರೆ. ಪೊಲಿಟಿಕಲ್ ಎಕ್ಸಿಸ್ಟಿಂಗ್‌ನಲ್ಲಿ ಶಕ್ತಿ ಬರಬೇಕಾದರೆ, ಎಷ್ಟು ಪ್ರಮಾಣದಲ್ಲಿ ಯಾವ ಜಾತಿಯವರು ಜಾಸ್ತಿ ಇರುತ್ತಾರೋ ಅಲ್ಲಿ ಅವರ ಕೋಮಿನವರಿಗೆ ಓಟು ಕೊಟ್ಟೇ ಕೊಡುತ್ತಾರೆ. ಅಂತಹ ಸಹಜವಾದ ಒಂದು ಪ್ರವೃತ್ತಿ ಬೆಳೆದು ಈ ದೃಷ್ಟಿಯಿಂದ ಮೇಜರ್ ಕಮ್ಯೂನಿಟೀಸ್‌ರವರು ಏನು ಇದ್ದ ಅವರು ಪ್ರಜಾಪ್ರಭುತ್ವ ವ್ಯವಸ್ಥೆ ಬಂದ ಮೇಲೆ, ಹೋರಾಟ ಕಾಲದಲ್ಲಿ ಮುಂಚೂಣಿಯಲ್ಲಿದ್ದವು. ಅವೆಲ್ಲವೂ ಕೂಡ ಹೆಚ್ಚು ಕಡಮೆ ಅಧಿಕಾರದ ಪ್ರಯೋಜನವನ್ನು ಹೆಚ್ಚಾಗಿ ಪಡೆದುಕೊಂಡವು. ಒಕ್ಕಲಿಗರು, ಶೂದ್ರರು, ಮಾಂಸಹಾರಿಗಳು ಮತ್ತು ಜಮೀನು ಮಾಡುವವರು ಮುಖಂಡತ್ವವನ್ನು ಪಡೆಯ ಬೇಕಾಗಿತ್ತು. ಅವರು, ಅವರನ್ನು ಕೈಬಿಟ್ಟರು. ಒಕ್ಕಲಿಗರು ಶೂದ್ರ ಮುಖಂಡತ್ವವನ್ನು ಪಡೆದು ಕೊಂಡಿದ್ದಾರೆ ಬ್ರಾಹ್ಮಣೇತರರ ಚಳವಳಿಯ ಪ್ರಯೋಜನ ಮತ್ತು ಪಾಲು ಎಲ್ಲಾ ವರ್ಗದವರಿಗೂ ಹಂಚತಕ್ಕ ಸಾಧ್ಯತೆ ಇತ್ತು. ಮಾನ್ಯ ಹುಚ್ಚಮಾಸ್ತೀ ಗೌಡರಿಗೆ ಅಧಿಕಾರ ಇಲ್ಲದೇ ಇದ್ದರೂ ಕೂಡ, ಸಾಮಾನ್ಯ ಜನರಿದ್ದರೂ ಕೂಡ ಅವರಿಗೆ ಶಕ್ತಿ ಇರುತ್ತದೆ. ಆದರೆ ಶಕ್ತಿ ಇಲ್ಲದೇ ಇರತಕ್ಕ ಹೆಳವನಿಗೆ ಬೇರೆ ಶಕ್ತಿ ಇರುವುದಿಲ್ಲ. ಅವನನ್ನು ಹೊಳೆ ದಾಟಿಸಿಕೊಂಡು ಹೋಗಬೇಕು. ಅವನ ಮೈ ಕೈ ಬಲಾಢ್ಯ ಇರುತ್ತವೆ, ಅದರೆ, ಓಡಾಡಲು ಆಗುವುದಿಲ್ಲ. ಶಕ್ತಿ ಇರುವ ತಾವು ಅವನನ್ನು ಭುಜದ ಮೇಲೆ ಕೂರಿಸಿಕೊಂಡು ಹೊಳೆ ದಾಟಿಸಬೇಕು. ಶಕ್ತಿ ಇರತಕ್ಕವರು, ಪ್ರಭಾವ ಇರತಕ್ಕವರು, ವರ್ಚಸ್ಸು ಇರತಕ್ಕವರು ಸಮಾಜದಲ್ಲಿ ಈ ಕೆಲಸ ಮಾಡಬೇಕು. ಆ ರೀತಿ ಮಾಡಿದರೆ, ಹೆಳವ ಜನಾಂಗ ಮತ್ತು ಹೆಳವ ಸಮಾಜದ ಸಂಕಷ್ಟ ಪರಿಹಾರ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅಂತಹ ಆತ್ಮ ಪರಿವರ್ತನೆ ಮೇಜರ್ ಕಮ್ಯೂನಿಟೀಸ್‌ಗಳಿಗೆ ಆಗಬೇಕು ಎನ್ನುವುದು ನನ್ನ ಬಯಕೆ.

ಮೇಜರ್ ಕಮ್ಯೂನಿಟೀಸನಲ್ಲಿ ಮುಖಂಡತ್ವ ಎಲ್ಲ ಹೆಚ್ಚಾಗಿ ಸಿಗುತ್ತದೆ, ಅಂದವರು ಈ ಮತ್ತು ಮುಖಂಡತ್ವ ಪಡೆಯದೆ ಇರತಕ್ಕ ಜನತೆಯ ಬಗ್ಗೆ ಮುಖಂಡತ್ವ ಕೊಡಿಸಬೇಕು. ಅವರನ್ನು ಕಷ್ಟಪರಿಸ್ಥಿತಿಯಿಂದ ಪಾರುಮಾಡಬೇಕು. ಆಗ ಅಧಿಕಾರ ಪ್ರಾಪ್ತಿ ಅವರಿಗೂ ಥಗುತ್ತದೆ. ಅವರ ವರ್ಚಸ್ಸು ಬೆಳೆಯುತ್ತದೆ. ಅವರ ಮುಖಂಡತ್ವ ಕೂಡ ದಿನದಿನಕ್ಕೆ ಬೆಳೆಯುತ್ತದೆ. ಅವರೂ ಕೂಡ ಬದುಕಿ ತಮ್ಮ ಶ್ರೇಯಸ್ಸಿಗೆ ಸಮರ್ಥರಾಗಿ ಹೋರಾಟ ಮಾಡುವ ಶಕ್ತಿ ಬರುತ್ತದೆ, ಸ್ಟೇಟಸ್ ಬರುತ್ತದೆ. ಸಮಾಜದಲ್ಲಿ ಭೂಮಿ ಇದ್ದವನಿಗೆ ಸಮಾಜದಲ್ಲಿ. ಮೇಲುವರ್ಗದವರಿಗೆ ಜನ ಗೌರವ ಕೊಡುತ್ತಾರೆ. ಬಡ ಬ್ರಾಹ್ಮಣರೇ ಇದ್ದರೂ ಕೂಡ ಅವರನ್ನು ಏನ್ರಿ ಭಟ್ಟರೆ ಬನ್ರಿ ಎಂದು ಹೇಳುತ್ತೇವೆ. ಅಗಸ ಇರುತ್ತಾನೆ ಅವನನ್ನು ಬಾರೋ ಇತ್ತಲಾಗಿ ಎಂದು ಹೇಳುತ್ತೇವೆ. ಆದುದರಿಂದ ಅಂಥ ಜನರಿಗೆ ನಾವು ಅವಕಾಶ ಕಲ್ಪಿಸಿ ಕೊಡದಿದ್ದರೆ ಅವರ ವರ್ಚಸ್ಸು ಹೇಗೆ ಬೆಳೆಯುತ್ತದೆ. ? ಚುನಾವಣೆ ಕಾಲದಲ್ಲಿ ಒಬ್ಬ ಒಕ್ಕಲಿಗ ಲಿಂಗಾಯಿತ ಅಥವಾ ಮೇಲುವರ್ಗದ ಜನ ಇದ್ದರೆ, ಅವರು ಜನರ ಸಂಘಟನೆ ಮಾಡುವಹಾಗೆ ಬೇರೆಯವರಿಗೆ ಮಾಡುವುದಕ್ಕೆ ಆಗುವುದಿಲ್ಲ. ಉಪ್ಪಾರ, ಬೇಡ, ಅಗಸ ಇವರಿಗೆ ಕೊಟ್ಟು ತೆಗೆದುಕೊಳ್ಳುವುದಕ್ಕೆ ಇರುವುದಿಲ್ಲ. ಅವರಿಗೆ ಪಂಚಾಯತಿ ಚೇರ್‌ಮನ್ ಆಗುವುದಕ್ಕೂ ಶಕ್ತಿ ಇರುವುದಿಲ್ಲ. ಆತನ ವರ್ಚಸ್ಸು ಯಾರಮೇಲೂ ಒಡೆಯರು ಹಾಕುವುದಕ್ಕೆ ಆಗುವುದಿಲ್ಲ. ಅವರ ಮೇಲೆ ವರ್ಚಸ್ಸು ಹಾಕಿಕೊಂಡು ಹೋಗುತ್ತಾರೆ. ಈ ಸ್ಟ್ರಕ್ಚರ್ ಆಫ್ ಸೊಸೈಟಿ ಏನು ಇದೆ ಅದರಲ್ಲಿ ವರ್ಚಸ್ಸು ಬೆಳೆಸಿಕೊಳ್ಳುವುದಕ್ಕೂ ಕೂಡ ಯಾವುದೋ ಕೆಲವು ಗುಣಗಳು ಇರಬೇಕು. ವರ್ಚಸ್ಸು ಬೆಳೆಸಬೇಕಾದರೆ ತನಗೆ ತಾನೇ ಬರುವುದಿಲ್ಲ. ಜನರ ಮನಸ್ಸು ಪರಿವರ್ತನೆ ಆಗಬೇಕು. ಮೇಜರ್ ಕಮ್ಯೂನಿಟೀಸ್, ಬ್ರಾಹ್ಮಣರ ಮುಂಖಡರು, ಸಮಾಜದಲ್ಲಿ ಪ್ರಜ್ಞೆ ಬೆಳೆದಂತಹವರು, ಬೇರೆಯವರು ಮುಂದೆ ಬರುವುದನ್ನು ನೋಡಿ ಸಂತೋಷಪಡಬೇಕು ಈರ್ಷೆ ಪಡುವುದಿಲ್ಲ. ಹರಿಜನರು ಮುಖ್ಯ ಮಂತ್ರಿಯಾದರೆ ಸಂತೋಷ ಪಡಬೇಕು. ಹರಿಜನರಿಗೆ ಹೆಚ್ಚಿನ ಅವಕಾಶ ಬಂದರೆ ಸಂತೋಷಪಡಬೇಕು. ಶ್ರೀ ದೇವೇಗೌಡರ

ಹೇಳಿದರು. ಹಿಂದುಳಿದ ಆಯೋಗದಿಂದ ಪ್ರಯೋಜನವಾಗುವುದಿಲ್ಲ. ಅದು ಬೇಡ ಎಂದು ಒಂದು ಆಯೋಗ ನಿರ್ಮಾಣವಾದಾಗ ಅದಕ್ಕೆ ಸ್ವಾಗತ ಕೊಡಬೇಕು. ಅವರಿಗೆ ನಾನು ಹೇಳಬಹುದು ನೀವು ಸಿಟ್ಟೇತಕ್ಕೆ ಆಗುತ್ತೀರಿ. ಹಿಂದುಳಿದ ವರ್ಗದವರು ಅಥವಾ ಬಹಳ ಕಮ್ಮಿ ದರ್ಜೆಯ ವರ್ಗಕ್ಕೆ ಸೇರಿದವರು ತಪ್ಪು ಮಾಡಬಹುದು ಅವರು ಪಂಡಿತರು ಇರುವುದಿಲ್ಲ. ಅವರಿಗೆ ಸರಿಯಾಗಿ ವಿಚಾರ ಪ್ರಜ್ಞೆಯನ್ನು ಅರಿಯುವುದಕ್ಕೆ ಆಗುವುದಿಲ್ಲ.

ಶ್ರೀ ಎಚ್. ಡಿ ದೇವೇಗೌಡ —ಆಯೋಗದ ಅಧ್ಯಕ್ಷರ ಬಗ್ಗೆ ಸಿಟ್ಟು ಏತಕ್ಕೆ ಆಗುತ್ತೇವೆ ಎಂದು ಮಾನ್ಯ ಸದಸ್ಯರು ಕೇಳಿದರು. ಸಿಟ್ಟು ಆಗಬೇಕಾದರೆ ಆಗ ಬೇಕಾಗುತ್ತದೆ. ಆದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ವ್ಯಕ್ತಿ ಪ್ರಶ್ನೆ ಬಂದಾಗ, ವ್ಯಕ್ತಿಯ ಗೌರವಕ್ಕೆ ಘನತೆಗೆ ಕುಂದು ಬಂದಾಗ, ಅದು ಜಾತಿ ಪ್ರಶ್ನೆಯಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ನೋಡುವವರ ಕಣ್ಣಿಗೆ ಏನಾಗುತ್ತದೆ?

Sri H. D. DEVE GOWDA.—If one were to look at it room coloured glasses, ಏನು ಮಾಡುವುದಕ್ಕೆ ಆಗುತ್ತದೆ?

ಶ್ರೀ ಕಾಗೋಡು ತಿಮ್ಮಪ್ಪ.—ನೋಡುವವರು ಕಣ್ಣಿಗೆ ದೇವೇಗೌಡರು ಇದರ ಬಗ್ಗೆ ಪ್ರಚಾರ ಮಾಡುತ್ತಾರೆ ಎಂದಾಗುತ್ತದೆ. ರಾಜಕೀಯದಲ್ಲಿ ಇರುವ ಜನರು, ಅಭಿಪ್ರಾಯಗಳನ್ನು ರೂಢಿಸ ತಕ್ಕ ಜನರನ್ನು ನಾವು ಹುಶಾರಾಗಿರಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಕೇವಲ ಓಟಿಗೋಸ್ಕರ ವ್ಯಕ್ತಿತ್ವ ಕಳೆದುಕೊಂಡು ಹೆಸರು ಇರಬೇಕಾದುದು ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಹಿಂದುಳಿದ ವರ್ಗದ ಆಯೋಗ ರಚನೆ ಆದಾಗ, ಅದು ಉತ್ತಮವಾಗಿ ಕೆಲಸ ಮಾಡಬೇಕು ಎಂದು ಅದಕ್ಕೆ ಪೂರಕತೆ ತಾವು ತೋರಿಸಬೇಕು.

Sri H. D. DEVE GOWDA.—We ha e done it. The Hon. Member may go through the Proceedings.

ಶ್ರೀ ಕಾಗೋಡು ತಿಮ್ಮಪ್ಪ.—ಯಾವ ಹೆಚ್ಚಿನ ಪ್ರಜ್ಞೆ ಸಿಗುತ್ತದೆ, ಹೆಚ್ಚಿನ ಅವಕಾಶಗಳು ಸಿಗುತ್ತದೆ, ವಿಚಾರವಂತರು ಯಾರು ಇದ್ದಾರೆ ಅವರು ಬೇರೆಯವರಿಗೆ ಸಹಾಯ ಮಾಡಬೇಕು.

Sri H.D. DEVE GOWDA.—This issue was discussed througa separate resolution. ಜಾತಿಮೇಲೆ ಐ. ಎ. ಎ. ಎಸ್. ಐ ಪಿ. ಎಸ್, ಹುದ್ದೆಗಳನ್ನು ಕೊಡುವವಿಚಾರ ಡಿಸ್‌ಕಸ್ ಆದಾಗ ಒಕ್ಕಲಿಗರು ಲಿಂಗಾಯತರು, ಮುಂದೆ ಹೋದರ ತಡೆ ಹಿಡಿಯೋಣ ಎಂದು ಹೇಳಿದಾಗ ಈ ಸಭೆಯಲ್ಲಿ ಮುಖ್ಯ ಮಂತ್ರಿಗಳು ಬ್ಯಾಕ್‌ವರ್ಡ್ ಕ್ಲಾಸ್ ಕಮೀಶನ್ ಅನೌನ್ಸ್ ಮೆಂಟ್ ಮಾಡಿದರು.

ಶ್ರೀ ಕಾಗೋಡು ತಿಮ್ಮಪ್ಪ.—ಅಷ್ಟೇ ಅಲ್ಲ ರಾಜ್ಯಾಂಗದಲ್ಲಿ ಬಿಕ್ಕಟ್ಟು ಏನೆಬರಲಿ, ಆ ರಾಜ್ಯ ದಲ್ಲಿ ಮುಂದಿರತಕ್ಕ ಜನರು, ಮೇಜರ್ ಕಮ್ಯೂನಿಟೀಸ್ ಮುಂದೆ ನಿಂತು ಕೊಂಡು ಹೆಳವನಿಗೆ ಸಹಾಯಮಾಡುವ ದೀಕ್ಷೆ ಕೊಡಬೇಕು.

ಶ್ರೀ ಎನ್ ರಾಚಯ್ಯ.—ಯಾವುದೇ ಒಂದು ವರ್ಗ ತೆಗೆದುಕೊಂಡರೂ ಅದು ಮೇಜರ್ ಜನಾಂಗ ಆಗುವುದಿಲ್ಲ. ಪ್ರಬಲ ಜನಾಂಗ ಆಗುವುದಿಲ್ಲ. ಸೋಶಿಯಲಿಸ್ಟ್ ಪಕ್ಷದವರು ಡಾಮಿ ನೆಂಟ್ ಸೆಕ್ಷನ್ಸ್ ಬಗ್ಗೆ ಬರೆದಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಯಾವುದೇ ಒಂದು ಸೆಕ್ಷನ್ ಡಾಮಿನೆಂಟ್ ಸೆಕ್ಷನ್ ಆಗುವುದು ಕಷ್ಟ. ಅಗಸರು, ಈಡಿಗರು, ಉಪ್ಪಾರ, ಬೇಡ ಈ ರೀತಿ ಹತ್ತೆಂಟು ಜನಾಂಗದವರು ಎಲ್ಲಾ ಸೇರಿ ಶೇಕಡಾ 30 ರಷ್ಟು ಆಗುತ್ತಾರೆ ಎಲ್ಲಾ ಸೇರಿದರೆ ಮೇಜರ್ ಸೆಕ್ಷನ್ ಆಗುತ್ತಾರೆ. ಬೇಡ ಬೇಡನಾಗಿರುತ್ತಾನೆ, ಅಗಸ ಅಗಸನಾಗಿಯೇ ಇರುತ್ತಾನೆ. ಈಡಿಗ ಈಡಿಗನಾಗಿಯೇ ಇರು ತ್ತಾನೆ. ಕಸುಬಿನಲ್ಲಿ ಬೇರೆ ಆಗಿರಬಹುದು. ಆದರೆ ಅವರಲ್ಲಿ ಊಟದಲ್ಲಿ ವ್ಯತ್ಯಾಸವಿಲ್ಲ, ಬಟ್ಟೆ ತೊಡುವುದರಲ್ಲಿ ವ್ಯತ್ಯಾಸವಿಲ್ಲ, ಬಣ್ಣದಲ್ಲಿ ವ್ಯತ್ಯಾಸವಿಲ್ಲ ಮಾತಿನಲ್ಲಿ ವ್ಯತ್ಯಾಸವಿಲ್ಲ, ದೇವರನ್ನು ಪೂಜೆ ಮಾಡುವುದು, ಭೂತ ಪೂಜೆ ಮಾಡುವುದು ಎಲ್ಲಾ ಒಂದೇ ಅವರೂ ಕೂಡ ಒಬ್ಬರೊಡನೆ ಇನ್ನೊಬ್ಬರು ಸೇರುವುದಿಲ್ಲ. ನಮ್ಮಲ್ಲಿ ಬಾಂಧವ್ಯ ಬೆಳೆಸಬೇಕು, ಒಂದಾಗಬೇಕು ಎನ್ನುವ ಕಲ್ಪನೆ ಬರುವುದಿಲ್ಲ. ಆದುದರಿಂದ ಈವೊತ್ತಿನ ದಿವಸ ಎಲ್ಲರು ಸೇರಿದರ ಮೇಜರ್ ಸೆಕ್ಷನ್ ಆಗಬಹುದು. ಇದಕ್ಕೆ ಅಡ್ಡಿ ಜಾತಿ ಪ್ರಶ್ನೆ ಬೆಳೆದು ನಿಂತಿದೆ. ನನ್ನ ಮಗನಿಗೆ ಮದುವೆ ಮಾಡಬೇಕು ಎಂದರೆ ಒಕ್ಕಲಿಗರು ಮಗಳು ಕೊಡುತ್ತಾರೆಯೋ? ಲವ್ ಮ್ಯಾರೇಜ್ ವಿಚಾರ ಬೇರೆ.

ಶ್ರೀ ಎಸ್. ಎಂ. ಕೃಷ್ಣ.—ಏತಕ್ಕೆ ಆಗಬಾರದು ?

ಶ್ರೀ ಕಾಗೋಡು ತಿಮ್ಮಪ್ಪ.—ಮಂಡ್ಯಾದವರು ಹೆಣ್ಣು ಕೊಡಿಸಬೇಕು.

Sri D. DEVARAJA URS (Cheif Minister).—Hindu Marriage dose not pre-suppose. iove starts only after marriage.

Sri S. M. KRISHNA.—Here is difference of opinion between me and the Hon. Chief Minister.

ಶ್ರೀ ಕಾಗೋಡು ತಿಮ್ಮಪ್ಪ.—ನಾವು ಮ್ಯಾರೇಜ್ ಮಾಡಿಕೊಂಡು ನಂತರ ಲವ್ ಮಾಡಿಕೊಂಡಿರುವುದು.

ಶ್ರೀ ಡಿ. ದೇವರಾಜ ಅರಸ್.—ಹಿಂದುಗಳಲ್ಲಿ ಮೊದಲು ಮದುವೆ ಆಗಿ ಆಮೇಲೆ They must start loving each other.ಪ್ಯಾಶ್ಚಿಮಾತ್ಯ ಪದ್ಧತಿ ಪ್ರಕಾರ ಮೊದಲು ಲವ್, ಆಮೇಲೆ ಮ್ಯಾರೇಜ್.

ಶ್ರೀ ಎಸ್.ಎಂ. ಕೃಷ್ಣ.—ಪಾಶ್ಚಿಮಾತ್ಯರ ಪ್ರಕಾರ ಟ್ರಯಲ್ ಮ್ಯಾರೇಜೆಸ್ ಶುರುವಾಗಿದೆ.

ಶ್ರೀ ಕಾಗೋಡುತಿಮ್ಮಪ್ಪ.—ಎಷ್ಟೋ ಹೆಣ್ಣು ಮಕ್ಕಳು ಗಂಡುಗಳನ್ನು ನೋಡದೆ ನಾಚಿಕೆಯಿಂದ ಕೂತಿರುತ್ತಾರೆ. ನಮ್ಮ ರಾಜ್ಯದಲ್ಲಿರುವ ಶ್ರೇಷ್ಠನ್ಯಾಯಾಲಯದ ಬಗ್ಗೆ ಪ್ರಸ್ತಾಪಮಾಡಿದೆ. ಬುದ್ಧಿವಂತರು ಎಲ್ಲರಲ್ಲೂ ಇದ್ದಾರೆ, ನಮ್ಮ ಕಾಲದಲ್ಲಿ ಮುಖಂಡತ್ವಕ ಬೆಳೆಸಬೇಕು. ಬರವಣಿಗೆಕಾರರು, ವಿಚಾರವಂತರು ಪತ್ರಿಕೆಗಾರರು, ಭಾಷಣ ಮಾಡುವವರು, ಹರಿಕತೆ ಹೇಳುವವರು ಅವರ ಸಹಾಯ ಬೇಕು. ಹಿಂದುಳಿದ ವರ್ಗದವರಿಗೆ ಸಾಧನಗಳನ್ನು ಕಲ್ಪಿಸಿಕೊಡಬೇಕು. ಒಬ್ಬೊಬ್ಬರು ಹೈಕೋರ್ಟ ನ್ಯಾಯಾಧೀಶರು ಇದ್ದಾರೆ. ಹೈಕೋರ್ಟ ಪ್ರಾರಂಭ ಆದಲಾಗಾಯಿತು ನ್ಯಾಯಾಧೀಶರು ಯಾವ ಜನಾಂಗದವರು ಹೆಚ್ಚು ಆಗಿದ್ದಾರೆ, ಯಾವ ಜನಾಂಗದವರು ಕಡಿಮೆ ಆಗಿದ್ದಾರೆ ಎಂಬುದನ್ನು ನೋಡಿ.

ಈಗ ಮುಖ್ಯ ನ್ಯಾಯಾಧೀಶರು ಯಾರು ಇದ್ದಾರೆ ಎಂಬುದು ಗೊತ್ತಿದೆ. ಅವಕಾಶಗಳು ಸಿಕ್ಕಿದಾಗ ಹರಿಜನರನ್ನು ಮುಖ್ಯ ನ್ಯಾಯಾಧೀಶರನ್ನಾಗಿ ಏತಕ್ಕೆ ಮಾಡ ಬಾರದು ? ಕಿತ್ತೂರು ಅವರ ಪ್ರಕರಣ ತೆಗೆದುಕೊಂಡು ಅವರನ್ನು ಕೆಳಗೆ ಇಳಿಸುವುದಕ್ಕೆ ಹೋಗಿದ್ದಾರೆ.

Sri H. D. DEVE GOWDA.—Why do you unneeessarily drag his name ?

ಶ್ರೀ ಕಾಗೋಡು ತಿಮ್ಮಪ್ಪ.—ಆದುದರಿಂದ ಅವರನ್ನು ಮುಖ್ಯ ನ್ಯಾಯಾಧೀಶರನ್ನಾಗಿ ಏತಕ್ಕೆ ಮಾಡಿಲ್ಲ ? ಹಾಗೆ ಎಲ್ಲಾ ಕ್ಷೇತ್ರದಲ್ಲೂ ಕೂಡ ಬಹಳಷ್ಟು ಹರಿಜನರು ಸಿಕ್ಕುತ್ತಾರೆ. ಅವರಿಗೆ ಅವಕಾಶವನ್ನು ಏತಕ್ಕೆ ಕೊಡುವದಕ್ಕಾಗುವುದಿಲ್ಲ ? ಹಾಗೆ ಅವಕಾಶ ಕೊಟ್ಟರೆ ಅವರು ವರ್ಚಸ್ಸನ್ನು ಬೀರತಕ್ಕ ಅವಕಾಶಗಳು ಸಿಗುತ್ತವೆ.

ಶ್ರೀ ಎಚ್. ಡಿ. ದೇವೇಗೌಡ.—ಹೈಕೋರ್ಟ್ ಜಡ್ಜ್ ಆಗಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಯಾವಾಗ ನೇಮಕವಾದರು ?

ಶ್ರೀ ಕಾಗೋಡು ತಿಮ್ಮಪ್ಪ.—ನಿಜಲಿಂಗಪ್ಪನವರ ಕಾಲದಲ್ಲಿ ಮಾಡಿದ್ದರು. ಆ ಕಿರೀಟವನ್ನು ತಾವೇ ಹಾಕಿಕೊಳ್ಳಿ. ಅದೇ ರೀತಿ ಬ್ಯಾಂಕುಗಳನ್ನು ತೆಗೆದುಕೊಳ್ಳಿ.

ಶ್ರೀ ಎನ್. ರಾಚಯ್ಯ.—ಭೀಮಣ್ಣನವರನ್ನು ಡಿಸ್ಟ್ರಿಕ್ಟ್ ಜಡ್ಜ್ ಮಾಡಿದವರು ಶ್ರೀ ಹನ್ನುಮಂತಯ್ಯನವರು. ಅವರು ಆಟೋಮ್ಯಾಟಿಕ್ ಪ್ರಮೋಷನ್ ಆಗಿ ಹೈಕೋರ್ಟ್ ಜಡ್ಜ್ ಆದರು.

ಶ್ರೀ ಎಚ್. ಡಿ. ದೇವೇಗೌಡ.—ಹಾಗಾದರೆ ಪೊನ್ನುರಂಗಂ ಅವರು ಏತಕ್ಕೆ ಹೈಕೋರ್ಟ್ ಜಡ್ಜ್ ಆಗಲಿಲ್ಲ?

ಶ್ರೀ ಕಾಗೋಡು ತಿಮ್ಮಪ್ಪ.—ರೇ ಅವರನ್ನು ಸುಪ್ರಿಂ ಕೋರ್ಟ್ ಜಡ್ಜರನ್ನಾಗಿ ಯಾವುದೋ ಕಾರಣದಿಂದ ತಂದಿರಿ. ಅದೇ ರೀತಿ ಒಬ್ಬರು ಷೆಡ್ಯೂಲ್ಡ್ ಕ್ಯಾಸ್ಟ್ ಜಡ್ಜರನ್ನು ತರುವುದಕ್ಕೆ ಅವಕಾಶ ಇಲ್ಲವೇ? ಶ್ರೀ ಜಗಜೀವನರಾಮ್ ಅವರನ್ನು ಪ್ರೈಮಿನಿಸ್ಟರ್ ಮಾಡಿದ್ದರೆ ಏನು ಆಗುತ್ತಿತ್ತು ಇದನ್ನೆಲ್ಲ ಸ್ವಲ್ಪ ಆಲೋಚನೆ ಮಾಡಬೇಕು. ಸರ್ಕಾರಿ ಕ್ಷೇತ್ರದಲ್ಲಿ ಈ ರೀತಿ ಆದರೆ ಖಾಸಗೀ ಕ್ಷೇತ್ರದಲ್ಲಿ ಬೇರೆ ರೀತಿ ಇದೆ. ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಲ್ಲಿ ನೇಮಕಗಳನ್ನು ಇವತ್ತು ತೆಗೆಸಿ ನೋಡಿದರೆ ನೂರಕ್ಕೆ ತೊಂಬತ್ತು ಜನ ಒಂದೇ ಜಾತಿಯವರು ಇದ್ದಾರೆ. ಹಾಗೆಯೇ

ಕೆನೆರಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್ ಅದರಲ್ಲೂ ಒಂದೇ ಜನಾಂಗಕ್ಕೆ ಕೆಲಸ ಕೊಟ್ಟುಕೊಂಡು ಕೂತಿದ್ದಾರೆ. ಬ್ಯಾಂಕಿನಲ್ಲಿ ಒಂದು ಸಣ್ಣ ಪ್ಯೂನ್ ಕೆಲಸ ಅಥವಾ ಸಾಮಾನ್ಯ 4ನೇ ದರ್ಜೆಯ ನೌಕರಿ ಸಿಕ್ಕಿದರೂ 300 ರೂ ಸಿಕ್ಕುತ್ತದೆ. ಇಲ್ಲಿ ಮೆರಿಟ್ ಇಲ್ಲ. ಅವರಿಗೆ ಬೇಕಾದವರಿಗೆ ಕೊಡುವುದು, ಅವರ ಜಾತಿಯವರಿಗೆ ಕೊಡುವುದು. ನಾನು ಎರಡು ಪಂಚವಾರ್ಷಿಕ ಯೋಜನೆ ನೋಡಿದ್ದೇನೆ. ಬ್ಯಾಂಕುಗಳು ರಾಷ್ಟ್ರೀಕರಣ ಆದಮೇಲೆ ನಮ್ಮ ರಾಜ್ಯದಲ್ಲಿ 320 ಹೊಸ ಬ್ಯಾಂಕು ಶಾಖೆಗಳು ಪ್ರಾರಂಭವಾಗಿವೆ. ಅದರಲ್ಲಿ ನೂರಕ್ಕೆ 90ರಷ್ಟು ಸ್ಥಾನವನ್ನು ಒಂದೇ ಜನಾಂಗಕ್ಕೆ ಕೊಟ್ಟಿದ್ದಾರೆ. ಇದನ್ನು ರುಜುವಾತು ಮಾಡುತ್ತೇನೆ. ಷಡ್ಯೂಲ್ಡ್ ಕ್ಯಾಸ್ಟ್ ಜನರಿಗೆ ಅಲ್ಲೊಂದು ಇಲ್ಲೊಂದು ಕೊಟ್ಟಿದ್ದಾರೆ. ಉಳಿದ 100ಕ್ಕೆ 90ರಷ್ಟು ನೇಮಕವನ್ನು ಒಂದೇ ಜನಾಂಗಕ್ಕೆ ಕೊಟ್ಟಿದ್ದಾರೆ. ಎಲ್ಲಾ ಬ್ರಾಹ್ಮಣರಿಗೆ ಹೋಗಿದೆ. ಇದನ್ನು ಸಹಿಸಿಕೊಳ್ಳಬಹುದೇ? ನಮ್ಮಲ್ಲಿ ಕಾರಕೂನ ಮಾಡುವುದಕ್ಕೆ ಅರ್ಹತೆ ಇಲ್ಲವೇ? ದಕ್ಷತೆಇಲ್ಲವೆ? ಲೆಕ್ಕ ಬರೆಯಿಸುವುದಕ್ಕೆ ಬರುವುದಿಲ್ಲವೆ? ಕಾಸು ಕೂಡಿಸುವುದಕ್ಕೆ ಬರುವುದಿಲ್ಲವೇ? ಇದು ಯಾರ ಹಣ, ಸರ್ಕಾರದ ಹಣ ಎಲ್ಲಿ ಹೋಗುತ್ತಿದೆ? ಪ್ರತಿಯೊಂದು ಯೋಜನೆ ಬಗ್ಗೆ ಕೂಡ ಬಡ್ಜೆಟ್ಟಿನಲ್ಲಿರುವ ಹಣ ಸರ್ಕಾರಿ ನೌಕರರಿಗೆ ಕೊಡುತ್ತಾರೆ. ಅದು ಯಾರಿಗೆ ಹೋಗುತ್ತದೆ. ಶೇಕಡ ಒಟ್ಟು ಲೆಕ್ಕ ಹಾಕಿದರೆ, ಸರ್ಕಾರಿ ನೌಕರರ ಸಂಖ್ಯೆಯಲ್ಲಿ ಶೇಕಡ 35 ರಿಂದ 40 ಭಾಗ ಒಂದೇ ಜನಾಂಗಕ್ಕೆ ಸೇರಿದೆ. ಆದುದರಿಂದ ಹೆಚ್ಚು ಕೊಡುವುದು ಎಲ್ಲಾ ಒಂದೇ ಜನಾಂಗಕ್ಕೆ ಹೋಗಿದೆ. ಅಭಿವೃದ್ಧಿ ಸಾಧನೆ ಮಾಡಿರತಕ್ಕಂಥ ಈ ಆರ್ಥಿಕ ಕ್ಷೇತ್ರದಲ್ಲಿ ಸಾಧಿಸಿರತಕ್ಕ ಅಭಿವೃದ್ಧಿಯ ಹಣದ ಪ್ರಯೋಜನ ಎಲ್ಲಾ ಸೀಮಿತ ವರ್ಗಕ್ಕೆ, ಸೀಮಿತ ಜನಾಂಗಕ್ಕೆ ಹೋಗಿ ಸೇರುತ್ತಿದೆ. ಸೇರುತ್ತಾ ಇದೆ ಎನ್ನುವುದಕ್ಕೆ ನಾನು ರುಜುವಾತು ಮಾಡಿ ತಮಗೆ ಹೇಳಿದ್ದೇನೆ. ಸುಮಾರು 329 ಬ್ರಾಂಚುಗಳಲ್ಲಿ ಒಂದು ಬ್ರಾಂಚಿಗೆ 10 ಜನರಂತೆ ಸರಾಸರಿ ನೇಮಕ ಮಾಡಿದರೂ ಕೂಡ 3020 ಜನ ನೇಮಕ ಮಾಡಿಕೊಂಡಿದ್ದಾರೆ. ಅದರಿಂದ 3020 ಕುಟುಂಬಗಳು ಕ್ಷೇಮ ಜೀವನ ಮಾಡುವುದಕ್ಕೆ ಸಾಧ್ಯ ಇದೆ. 3020 ಕುಟುಂಬಗಳು ಅಥವಾ 25 ಸಾವಿರ ಪ್ರಜಾಸಂಖ್ಯೆ ಕನಿಷ್ಟ ಪ್ರಮಾಣದ ಸೌಕರ್ಯ ಪಡೆದು ಗೌರವಯುತವಾದ ಜೀವನ ಮಾಡತಕ್ಕ, ಮರ್ಯಾದೆಯಿಂದ ಜೀವನ ಮಾಡತಕ್ಕ ಪ್ರಯೋಜನ ಪಡೆದಿದ್ದಾರೆ. ಈಗ ಶೇಕಡ 40 ರಷ್ಟು ಜನರು ಬಡತನದ ರೇಖೆಯ ಕೆಳಗೆ ಇದ್ದಾರೆ. ಆದರೆ ಈವೊತ್ತು ಈ ಕ್ಷೇತ್ರದಲ್ಲಿ ಸೀಮಿತ ವರ್ಗದ ಜನ ಹೆಚ್ಚು ಪಾಲಿನ ಸೌಕರ್ಯವನ್ನು ಪಡೆಯುತ್ತಾ ಹೋಗುತ್ತಾರೆ. ಹಿಂದುಳಿದ ವರ್ಗ ಹಿಂದೆಯೇ ಇರುತ್ತದೆ. ಮುಂದೆ ಹೋಗುವವರು ಮುಂದೆ ಹೋಗುತ್ತಾರೆ. ಮಂತ್ರಿಗಳಾಗಿರುವವರು ಅವರ ಮಕ್ಕಳನ್ನು ಸಣ್ಣಪುಟ್ಟ ಕೆಲಸಕ್ಕೆ ಕಳುಹಿಸುವುದಿಲ್ಲ. ಅವರಲ್ಲಿ ಯಾರೂ ನಿರುದ್ಯೋಗಿಗಳಿಲ್ಲ. ಐ. ಎ. ಎಸ್. ಆಫೀಸರ ಮಕ್ಕಳು ಐ. ಎ. ಎಸ್. ಆಗಿದ್ದಾರೆ. ಜಡ್ಜು ಮಕ್ಕಳು ಜಡ್ಜು ಆಗಿದ್ದಾರೆ. ಮಂತ್ರಿಗಳ ಮಗ ಎಂ. ಎಲ್. ಎ. ಆಗಿದ್ದಾನೆ. ಈ ರೀತಿ ನಡೆಯುತ್ತಿದೆ. ಹೆಚ್ಚಿನ ಲಾಭ, ಉತ್ಪಾದನಾ ಪ್ರತಿಫಲ ಎಲ್ಲವೂ ಕೂಡ ಸೀಮಿತ ವರ್ಗಕ್ಕೆ ಹೋಗುತ್ತಿದೆ. ಇದನ್ನು ತಪ್ಪಿಸಬೇಕು ಎನ್ನುವುದು ನಮ್ಮ ಮುಖ್ಯ ಉದ್ದೇಶ. ಇದನ್ನು ತಪ್ಪಿಸಬೇಕಾದರೆ ವಾಸ್ತವಿಕ ಅಂಕಿ ಅಂಶಗಳನ್ನು ಅಳತೆ ಮಾಡಬೇಕು.

ಶ್ರೀ ಡಿ. ದೇವರಾಜ ಅರಸ್.—ಅವರು ಕೊಡುತ್ತಾ ಇರತಕ್ಕ ಅನಾಲಿಸಿಸ್ ನೋಡಿದರೆ ಅವರು ನಿಜವಾಗಿಯೂ ವಾಸ್ತವಿಕಾಂಶಗಳನ್ನು ಸ್ಪಷ್ಟವಾಗಿ ಹೇಳುತ್ತಾ ಇದ್ದಾರೆ. ನಾನು ಅದನ್ನು ಲಾಲಿಸಿ ಕೇಳುತ್ತಾ ಇದ್ದೇನೆ. ಈ ಒಂದು ಅನಾಲಿಸಿಸ್‌ನಿಂದ ಏನು ಇನ್‌ಫರೆನ್ಸ್ ಡ್ರಾ ಮಾಡುತ್ತಾ ಇದ್ದಾರೆ, ಅದರ ಪರಿಣಾಮಗಳು ಏನು ಆಗುತ್ತವೆ ಅದನ್ನು ತಾವು ಸ್ವಲ್ಪ ದೀರ್ಘವಾಗಿ ಯೋಚನೆ ಮಾಡಬೇಕು. ಏತಕ್ಕೆ ಎಂದರೆ ರಾಜಕಾರಣಿಗಳಾದಂತಹ ನಮ್ಮಂತಹವರು ವಿರೋಧಪಕ್ಷದವರೇ ಆಗಲಿ, ಅಥವಾ ಯಾರೇ ಆಗಲಿ, ವೈಯಕ್ತಿಕವಾಗಿ ಹೇಳುತ್ತಾ ಇಲ್ಲ, ಸಮಸ್ಯೆಗಳು ಬೇರೆ ರೂಪದಲ್ಲಿ ಬಂದಾಗ, ಇವನ್ನು ಮರೆತು ಬಿಟ್ಟು ವರ್ತನೆ ಮಾಡುತ್ತಾ ಇರುತ್ತೇವೆ. ಇದಕ್ಕೆ ಒಂದಲ್ಲ ಹತ್ತಾರು ನಿದರ್ಶನಗಳು ಇವೆ ನಿಮ್ಮಲ್ಲಿ ತಪ್ಪು ಹುಡುಕುವುದಕ್ಕಾಗಿ ಹೇಳುತ್ತಾ ಇಲ್ಲ. ದೇಶದಲ್ಲಿ ಆಗುತ್ತಾ ಇರುವ ಅನಾಹುತಗಳು ಹೆಚ್ಚಾಗಿ ಈ ಕಾರಣದಿಂದ ಅನಾಲಿಸಿಸ್ ಒಂದು ಕಡೆ, ಮಾಡುತ್ತಾ ಇರುವ ವರ್ತನೆ ಇನ್ನೊಂದು ಕಡೆ ಆಗುತ್ತಾ ಇದೆ. ಇದನ್ನು ಬಹಳ ಕಾಲ ಜ್ಞಾಪಕ ಮಾಡಿಕೊಳ್ಳುವುದಿಲ್ಲ. ಸಂದರ್ಭ ಬಂದಾಗ ಎತ್ತಿ ತೋರಿಸುತ್ತೇನೆ. ತಮ್ಮಲ್ಲಿ ನನ್ನ ವಿನಂತಿ ಏನೆಂದರೆ, ಅನಾಲಿಸಿಸ್‌ನ ಇನ್‌ಫರೆನ್ಸ್‌ನ್ನು ಮನಸ್ಸಿನಲ್ಲಿ ಇಟ್ಟುಕೊಂಡು ನಿಮ್ಮ ವರ್ತನೆಸೂಚಿ ಆಗಲಿ ಎನ್ನುವುದೇ ನನ್ನ ಇಚ್ಛೆ.

ಶ್ರೀ ಕಾಗೋಡು ತಿಮ್ಮಪ್ಪ.—ಶ್ರೀಮಾನ್ ರಾಚಯ್ಯನವರು ಹೇಳಿದರು ರಾಜ್ಯಾಂಗದಲ್ಲಿ ಏನು ಒಂದು ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡಬೇಕು ಎನ್ನುವ ಕಲ್ಪನೆ ಇಟ್ಟುಕೊಂಡಿದ್ದೇವೆ ಆ ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುವುದಕ್ಕೆ ಕಳೆದ 25 ವರ್ಷಗಳಿಂದ ಈ ರಾಷ್ಟ್ರ

(ಶ್ರೀ ಕಾಗೋಡು ತಿಮ್ಮಪ್ಪ)

ದಲ್ಲಿ ನಾವು ಪ್ರಾಮಾಣಿಕವಾಗಿ ರಾಜಕೀಯ ಕ್ಷೇತ್ರದಲ್ಲಿ ನಾವು ಪ್ರಯತ್ನ ಮಾಡಲಿಲ್ಲ ಎಂದು ನಾನು ಅದನ್ನು ಒಪ್ಪುತ್ತೇನೆ. ಎಲ್ಲಾ ರಾಜಕೀಯ ಕ್ಷೇತ್ರಗಳಲ್ಲೂ ಎಲ್ಲಾ ರಾಜಕೀಯ ಪಕ್ಷಗಳಲ್ಲೂ ಹುಡುಕಿದರೂ ಹೆಚ್ಚಿಗೆ ಜನ ಮೊದಲನೆ ವರ್ಗದವರೇ ಇರುತ್ತಾರೆ. ಇದನ್ನು ಅಲ್ಲಗಳೆಯುವುದಿಲ್ಲ. ಇದನ್ನೇ ಡಾ|| ಲೋಹಿಯಾರವರು ಅರ್ಥ ಮಾಡಿಕೊಂಡು ರಾಜಕೀಯವಾಗಿ, ಸಾರ್ವಜನಿಕವಾಗಿ ಎಲ್ಲಾ ಕ್ಷೇತ್ರಗಳಲ್ಲೂ ಕೂಡ ಹಿಂದುಳಿದ ಜನಾಂಗಕ್ಕೆ ಶೇಕಡ 60 ಭಾಗ ಕೊಟ್ಟರು. ಅದಕ್ಕೋಸ್ಕರ ಒಂದು ಕಾಲದಲ್ಲ ಬಿಹಾರದಲ್ಲಿ ಶೇಕಡ 60 ರಷ್ಟು ಪ್ರಾತಿನಿಧ್ಯ ಹಿಂದುಳಿದ ವರ್ಗದವರಿಗೆ ಮಂತ್ರಿ ಮಂಡಲ ರಚನೆ ಮಾಡತಕ್ಕ ಕಾಲದಲ್ಲಿ ಸಿಕ್ಕಿತು. ದಿನಕರಲಾಲ್ ಮಂಡಲದ ಅವರನ್ನು ಸ್ಪೀಕರ್ ಸ್ಥಾನಕ್ಕೆ ಆರಿಸುವವರೆಗೆ ಹಿಂದುಳಿದ ಪ್ರತಿನಿಧಿಗಳು ಮಂತ್ರಿಮಂಡಲದಲ್ಲಿ ಸೇರಲಿಲ್ಲ. ವೆಸ್ಟ್ ಬೆಂಗಾಲ್ ಚುನಾವಣೆ ಕಾಲದಲ್ಲಿ ಸಮ್ಮಿಶ್ರ ಸರ್ಕಾರ ಆಡಳಿತಕ್ಕೆ ಬಂದಾಗ ಮಂತ್ರಿಮಂಡಲದ 60 ರಷ್ಟು ಸ್ಥಾನವನ್ನು ಕೊಡುವವರೆಗೆ ನಮ್ಮ ಪಕ್ಷದ ಪ್ರತಿನಿಧಿಗಳು ಅಲ್ಲಿ ಸೇರುವುದಕ್ಕೆ ಬಿಡಲಿಲ್ಲ. ಕಾಶಿನಾಥ ಮೈತ್ರ ಅವರನ್ನು ಕಳಿಸಬೇಕಾದರೆ ಶೇಕಡ 60 ರಷ್ಟು ಇರಬೇಕು ಎಂದು ಶರತ್ತು ಹಾಕಿ ಆ ಮೇಲೆ ಮಂತ್ರಿಮಂಡಲದ ಸ್ಥಾಪನೆಗೆ ಅವಕಾಶ ಕೊಟ್ಟರು. ಉತ್ತರ ಪ್ರದೇಶದಲ್ಲಿ 1967 ರಲ್ಲಿ ಸಮ್ಮಿಶ್ರ ಮಂತ್ರಿಮಂಡಲ ಆದಾಗ ಕಡ್ಡಾಯವಾಗಿ ಶೇಕಡ 60 ರಷ್ಟು ಸ್ಥಾನಗಳನ್ನು ಹಿಂದುಳಿದ ವರ್ಗಕ್ಕೆ ಕೊಡತಕ್ಕ ಶರತ್ತಿನ ಮೇಲೆ ಮಂತ್ರಿಮಂಡಲದಲ್ಲಿ ಸೇರಿದರು ಅದರಿಂದ ರಾಜಕೀಯ ಪಕ್ಷಗಳು ಆಗಬಹುದು. ಅಲ್ಲದೆ ಇರಬಹುದು. ಎಲ್ಲಾ ಕ್ಷೇತ್ರಗಳಲ್ಲೂ ಕೂಡ ಹಿಂದುಳಿದ ಜನಾಂಗಕ್ಕೆ ಹೆಚ್ಚಿನ ಸ್ಥಾನವನ್ನು ಕೊಡಬೇಕೆಂಬುದೇ ನಮ್ಮ ಒತ್ತಾಯ. ಆ ದೃಷ್ಟಿಯಿಂದ ವ್ಯವಸ್ಥೆ ಮಾಡಬೇಕು ಮಾನ್ಯ ಮುಖ್ಯ ಮಂತ್ರಿಗಳು, ಇಲ್ಲಿ ಏನು ಒಂದು ವಾಸ್ತವ ಪರಿಸ್ಥಿತಿ ಕಾಣುತ್ತಾ ಇದೆ, ಅದನ್ನು ಕಾರ್ಯರೂಪಕ್ಕೆ ತರುವ ಕಾಲದಲ್ಲ ರಾಜಕೀಯವಾಗಿ ಏನೇನು ಅಭಿಪ್ರಾಯ ತಾಳುತ್ತಾರೆಂದು ಹೇಳಿದ್ದಾರೆ ಅದನ್ನು ನಾನು ಒಪ್ಪುತ್ತೇನೆ. ಇವತ್ತು ರಾಜಕೀಯವಾಗಿ ಅದನ್ನು ತೀರ್ಮಾನ ಮಾಡಬೇಕಾಗುತ್ತದೆ. ರಾಜಕೀಯವಾಗಿ ಪ್ರೋತ್ಸಾಹ ಕಂಡುಕೊಳ್ಳಬೇಕಾಗುತ್ತದೆ. ಕಂಡುಕೊಳ್ಳತಕ್ಕ ಕಾಲದಲ್ಲಿ ಅನೇಕಸಾರಿ......

11—30 A. M.

ಶ್ರೀ ಡಿ. ದೇವರಾಜ್ ಅರಸ್.—ನಾನು ಸ್ಪಷ್ಟಪಡಿಸಿ ಹೇಳುವುದಾದರೆ, ಬ್ಯಾಂಕ್ ಎಂಪ್ಲಾಯೀಸ್ ವಿಚಾರ ಹೇಳಿದಿರಿ, ಅನೇಕ ಫ್ಯಾಕ್ಟರಿ ಲೇಬರರ್ಸ್ ವಿಚಾರ ಹೇಳಿದಿರಿ. ಇವು ಒಂದೊಂದಕ್ಕೇ ಸೀಮಿತವಾಗಿಲ್ಲ, ತಮ್ಮ ಅನಾಲಿಸಸ್ I think the Hon. Member will agree even according to the thesis of Dr. Lohia, which he is trying to explain and expand, Dr. Lohia ವಾಸ್ತವಾಂಶ ದೇಶದಲ್ಲಿ ಏನಿದೆ ಅದನ್ನು ಚೆನ್ನಾಗಿ ಅಭ್ಯಾಸಮಾಡಿ, ಅರ್ಥಮಾಡಿಕೊಂಡು ಹೇಳಿದ್ದಾರೆ. ಅದು ನಮಗೆ ಬಹಳ ಸುಲಭವಾಗಿ ಅರ್ಥವಾಗತಕ್ಕ ವಿಚಾರ. ಏಕೆಂದರೆ ನಾವು ಅನುಭವಿಸಿ ನೋಡಿದ್ದೇವೆ. ಕೆಲವರಿಗೆ ಅರ್ಥವಾಗುವುದಿಲ್ಲ. ನಮಗೆ ಆ ವಿಚಾರ ಅರ್ಥವಾಗಲಿಲ್ಲ ಎಂದರೆ ಕಾರ್ಯರೂಪದಲ್ಲಿ ನಾವು ದಾರಿ ತಪ್ಪುತ್ತೇವೆ. ಬ್ಯಾಂಕ್ ಎಂಪ್ಲಾಯೀಸ್ ಇದ್ದಾರೆ, ಗವರ್ನ್‌ಮೆಂಟ್ ಸರ್ವೆಂಟ್ಸ್ ವರ್ಗ ಇದೆ. ಮತ್ತೆ ಫ್ಯಾಕ್ಟರಿಗಳಲ್ಲಿ ಮತ್ತೊಂದು ಕಡೆ ಕೆಲಸಮಾಡುವ ವರ್ಗ ಇದೆ. ಭಾರತ ದೇಶದಲ್ಲ ವೆಸ್ಟೆಡ್ ಇಂಟರೆಸ್ಟ್ irrespective of caste and creed. ಆಗುತ್ತಾ ಇದೆ. ನೀವು ಹೇಳಿದಿರಲ್ಲ, ಅವರ ಅಳಿಯ, ಮಾವ, ಸೊಸೆ ಎಂದು. ಅವರೂ ಅಷ್ಟೆ, ಹೈಯರ್ ಲೆವಲ್‌ನಲ್ಲಿ, ಲೋಯರ್ ಲೆವೆಲ್‌ನಲ್ಲಿ ಅಷ್ಟೇ, ಲೇಬರ್ ಫೀಲ್ಡ್‌ನಲ್ಲಿರುವವರೂ ಅಷ್ಟೆ, ಅವರೆಲ ಹೋಗಿ ಸೇರಿ ಕೊಂಡಾಗ, ನಾವು ನೀವು ಅನಲಿಸಸ್ ಕೊಟ್ಟು ಹೇಳುತ್ತೇವೆ. ಎಲ್ಲರೂ ಸೇರಿ ಕೆಲವು ವರ್ಗಗಳು ಹೇಗೆ ರಾಜಕೀಯ ಶಕ್ತಿಯನ್ನು ಉಪಯೋಗಿಸಿ ಕೊಳ್ಳುತ್ತಿವೆ, ಅಧಿಕಾರ ಬಲದಿಂದಲೋ, ಇನ್ನೊಂದು ಸಂಖ್ಯಾಬಲದಿಂದಲೋ, ಅದು ಯಾವ ಒಂದು ಜಾತಿಗೆ ಸೀಮಿತವಾಗಿಲ್ಲ. ಲಿಂಗಾಯಿತರು ಒಂದು ರೀತಿ, ಬ್ರಾಹ್ಮಣರು ಒಂದು ರೀತಿ, ಒಂದೊಂದು ಜಾತಿಯವರು ಒಂದೊಂದು ರೀತಿ ಮಾಡುತ್ತಾರೆ ಎನ್ನುವುದನ್ನು ನಾವು ಮರೆಯಬಾರದು. ಇದು ಕಾಲೇಜ್‌ನಲ್ಲಿ ಸೀಟ್ ತೆಗೆದುಕೊಳ್ಳುವಾಗ ಬರುತ್ತದೆ, ಇನ್‌ಸ್ಟಿಟ್ಯೂಷನ್ಸ್ ರಚನೆ ಮಾಡತಕ್ಕ ಕಾಲದಲ್ಲ ಬಗುತ್ತದೆ, ಸಂಬಳ ಹಂಚಿಕೊಳ್ಳುವಾಗ ಬರುತ್ತದೆ. ನಾವು ಅವರಿಗೆ ಪ್ರೋತ್ಸಾಹ ಕೊಡುತ್ತಾ ಇರುತ್ತೇವೆ. ಸರ್ಕಾರದ ದುಡ್ಡು ಎಂದರೆ, ಅದು ಇಡೀ ಸಮಾಜಕ್ಕೆ ಸೇರಿದ ಹಣ. ಆ ಹಣವನ್ನು ಹಂಚಿಕೊಳ್ಳುವಾಗ, ಅವರು ಸ್ಟ್ರೈಕ್ ಮಾಡಿದರೆ ಮೊದಲಿಗರಾಗಿ ನೀವು ಸಪೋರ್ಟ್ ಮಾಡುತ್ತೇವೆಂದು ಹೇಳುತ್ತೀರಿ. ನಮಗೆ ಹೆದರಿಕೆ. ಇದನ್ನು ನಾನು ಹೇಳು

ತ್ತಾ ಇರತಕ್ಕದ್ದು. ಈ ಹೆದರಿಕೆ ಏನು ನಾವು ಎದುರಿಸಬೇಕು. ರಾಜಕೀಯವಾಗಿ ಬಾಯಲ್ಲಿ ಮಾತನಾಡುತ್ತೇವೆ, ಅದು ಬಂದಾಗ ಮೊದಲನೆಯದಾಗಿ ಅವರ ಪರವಾಗಿ ನಾವು ಮಾಡುತ್ತಾ ಇದ್ದೇವೆ. ನಮ್ಮ ದೇಶದಲ್ಲಿ ಅದನ್ನು ಎದುರಿಸುತ್ತಾ ಇಲ್ಲ. ಆದುದರಿಂದ ಇಷ್ಟೊಂದು ಹಣ ಸರ್ಕಾರ ಸಂಪಾದನೆ ಮಾಡಿದರೂ, ಒಂದು ಕಡೆ ಸಂಬಳಕ್ಕೆ ಹೋಗುತ್ತದೆ. ಹಾಗೆಯೇ ಬೇರೆ ಸ್ಟೇಟ್‌ನಲ್ಲಿ ಶೇಕಡ 50—60 ರಷ್ಟು, 70 ರಷ್ಟು ಹಣ ಸಂಬಳಕ್ಕಾಗಿ ಹೋಗುತ್ತದೆ ಪಬ್ಲಿಕ್ ಸೆಕ್ಟರ್ ಇಂಥ ಸ್ಲೈಸ್ ತೆಗೆದುಕೊಂಡರೆ, ಸಂಪಾದನೆ ಮಾಡಿದ ಹಣವೆಲ್ಲ ಅವರಿಗೆ ಹಂಚು ಎಂದು ಹೇಳುತ್ತಾ ಇರುತ್ತೇವೆ. ಈ ವ್ಯವಸ್ಥೆ ಏಕೆ ಆಗುತ್ತಾ ಇದೆ ಎನ್ನುವುದನ್ನು ಮನಸ್ಸಿನಲ್ಲಿಟ್ಟು ಕೊಳ್ಳೋಣ.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಹೇಳಿದ್ದನ್ನು ನಾನು ಒಪ್ಪುತ್ತೇನೆ, ಇಲ್ಲ ಎಂದು ಹೇಳುವುದಿಲ್ಲ. I am well aware of these things.

ಶ್ರೀ ಎಚ್. ಡಿ. ದೇವೇಗೌಡ.—ಇಷ್ಟು ಬೇಜವಾಬ್ದಾರಿಯುತವಾಗಿ ವರ್ತನೆ ಮಾಡುವುದಕ್ಕೆ ನಾವು ತಯಾರಾಗಿಲ್ಲ. I made it clear on the floor of the House that it means whatever reasonable demands.

Sri N. RACHAIAH.—What about the reasonable wages to the agricultural labourers ?

Sri H. D. DEVE GOWDA.—What about the fate of the labourer who belongs to the Scheduled Caste ?

ಶ್ರೀ ಕಾಗೋಡು ತಿಮ್ಮಪ್ಪ.—ಮುಖ್ಯಮಂತ್ರಿಗಳು ಏನು ಹೇಳಿದರು, ಅದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಕೆಲವು ಸನ್ನಿವೇಶಗಳು ಕೂಡ ಬಂದಿವೆ. ಆ ಸನ್ನಿವೇಶಗಳಿಗೆ ಪ್ರತಿಯೊಬ್ಬರನ್ನು ಸಿಕ್ಕಿಸತಕ್ಕ ಪ್ರವೃತ್ತಿ ಇದೆ. ಏಕೆಂದರೆ, ಕಳೆದ ಸಾರಿ ಒಂದು ಸಣ್ಣ ಮಾತನ್ನು ಹೇಳಿದ್ದೆ. ನಾನು ಗೆಜೆಟೆಡ್ ನೌಕರರಿಗೆ ಸಂಬಳ ಏರಿಸತಕ್ಕಂಥ ಕಾಲದಲ್ಲಿ ರಿಯಾಯಿತಿ ದರದಲ್ಲಿ ಅಕ್ಕಿ ಆಹಾರ ಸಾಮಗ್ರಿಗಳನ್ನು ಒದಗಿಸಿ, ಪ್ರತಿವರ್ಷ ಸಂಬಳ ಜಾಸ್ತಿ ಮಾಡುವುದಕ್ಕೆ ಹೋಗಬೇಡಿ ಎಂದು ಸಲಹೆ ಕೊಟ್ಟೆ. ಅದಕ್ಕೆ ನಮ್ಮ ಪಾರ್ಟಿಯವರಾದಿಯಾಗಿ ನಿಷ್ಠುರ ಮಾಡುವುದಕ್ಕೆ ಶುರು ಮಾಡಿದರು. ನೀನೇಕೆ ಹಾಗೆ ಹೇಳುವುದಕ್ಕೆ ಹೋದೆ, ನಿನಗೇಕೆ ಅವರ ಸಂಬಂಧ ಎಂದು ಹೇಳಿದರು. ನಾನು ಅಸೆಂಬ್ಲಿ ಸದಸ್ಯನಾಗಿರಬಹುದು; ಇದೆಲ್ಲಾ ಅಪ್ರಕೃತ. ನಾವು ವ್ಯಕ್ತಿತ್ವ ಬೆಳೆಸಿಕೊಂಡರೆ, ಸಮಾಜದಲ್ಲಿ ನಾವು ಸ್ಥಾನಗಳನ್ನು ಪಡೆದುಕೊಂಡರೆ ಯಾರಿಗೂ ಹೆದರಬೇಕಾದ ಅಗತ್ಯವಿಲ್ಲ. ಎರಡು ಸಲ ಸೋತರೂ ಹೆದರಬೇಕಾಗಿಲ್ಲ. ಇವೆಲ್ಲಾ ನಮ್ಮ ಸ್ಥಾನಗಳನ್ನು ಕಲ್ಪಿಸಿಕೊಡುತ್ತಾರೆ ಎನ್ನುವ ಕಲ್ಪನೆ ಇರಬೇಕು. ಇವು ಆಕಸ್ಮಿಕವಾಗಿ ಬರಬಹುದು, ಹೋಗಬಹುದು. ಸತ್ಯಕ್ಕೋಸ್ಕರ ನಿಷ್ಠುರವಾದರೂ ಒಂದೇ ಸ್ಟ್ಯಾಂಡ್‌ನಲ್ಲಿ, ದೃಢತೆಯಲ್ಲಿ ಇರಬೇಕಾಗುತ್ತದೆ. ಆದುದರಿಂದ ಇವತ್ತು ಆ ಒಂದು ದೃಢತೆ ಬೇಕಾಗುತ್ತದೆ, ಅದು ಇಲ್ಲದೇ ಇರುವುದರಿಂದ ಬ್ಯಾಂಕ್ ಎಂಪ್ಲಾಯಿಸ್ ಸಹಾಯ ಮಾಡುತ್ತೇವೆ. ಇನ್‌ಷೂರೆನ್ಸ್ ಎಂಪ್ಲಾಯೀಸ್‌ಗೆ ಸಹಾಯ ಮಾಡುತ್ತೇವೆ, ಇನ್ನೊಬ್ಬರಿಗೆ ಮತ್ತೊಂದು, ಇದು ಇವತ್ತು ಬಂದಿದೆ. ಅಂತ ಸಂಘಟನೆ ನಿರ್ಮಾಣ ಮಾಡಿಕೊಂಡು ಸಂದರ್ಭ ಬಂದಾಗ ತುಳಿಯುತಕ್ಕಂಥ ಗಿಲೆಟಿನ್ ನಿರ್ಮಾಣವಾಗಿದೆ. ನಗರ ಪ್ರದೇಶಗಳಲ್ಲಿ ಸಂಘಟನೆ ಮಾಡುತ್ತಾರೆ ನಮ್ಮ ತಲೆಯನ್ನು ತಂದು ಅದರಲ್ಲಿ ಸಿಕ್ಕಿಸಿ ಬಿಡುವುದು, ನಾವು ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇಂತಹ ಪರಿಸ್ಥಿತಿ ನಿರ್ಮಾಣ ಇಟೀಸ್ ಡೇಂಜರಸ್ ಕಾನ್ಸಿಕ್ವೆನ್ಸಸ್. ಆದುದರಿಂದ ನಾವು ರಾಜಕಾರಿಣಿಗಳು, ಪ್ರಾಜ್ಞವಂತರು ಇಂತಹ ವಿಚಾರ ಕಡೆಗೆ ಕಲ್ಪನೆ ಏನ್ನು ಓಡಿಸ ತಕ್ಕವರು ಕರೆಂಟ್ ವಿರುದ್ಧ ಹೋರಾಟ ಮಾಡಲೇಬೇಕಾಗುತ್ತದೆ. ದೂರದೃಷ್ಟಿಯಿಂದ ಹೇಳುವುದಾದರೆ, ಸಮಾಜದಲ್ಲಿ ಸಮಾನತೆ, ಕಲ್ಪನೆಗೆ ಅರ್ಥ ಬರಬೇಕು ಎನ್ನುವ ಕಲ್ಪನೆ ಇರುವುದಾದರೆ, ಈ ವಿಪರ್ಯಾಸವನ್ನು ತೊಡೆದು ಹಾಕುವುದಕ್ಕೆ ನಾವು ಬಲವಾದ ಒಂದು ತಿಳುವಳಿಕೆಯನ್ನು ಇಟ್ಟುಕೊಳ್ಳಬೇಕು. ಇದು ಇದ್ದರೆ ಹೆದರಬೇಕಾಗಿಲ್ಲ. ಅದಕ್ಕೆ ಸಿದ್ಧವಾದ ಸೈನಿಕರ ನಿರ್ಮಾಣ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಆಗಬೇಕು. ಪತ್ರಿಕೆಯವರು ಬೇಕಾಗುತ್ತದೆ, ವಿಚಾರವಂತರು ಬೇಕಾಗುತ್ತಾರೆ, ಬರಹಗಾರರು ಬೇಕಾಗುತ್ತಾರೆ, ಪಕ್ಷವನ್ನು ರಚಿಸತಕ್ಕ ಒಳ್ಳೆಯ ಮುಖಂಡತ್ವ ಬೇಕಾಗುತ್ತದೆ. ಅವರಿಗೆ ಪ್ರೋತ್ಸಾಹ ಕೊಡಬೇಕಾಗುತ್ತದೆ. ಅಂತಹ ವ್ಯಕ್ತಿಗಳು, ಶಕ್ತಿಗಳನ್ನು ಕಂಡರೆ ಅವರನ್ನು ಗುರುತಿಸಿ, ಇದನ್ನು ಮಾಡು ಎನ್ನುವ ಪ್ರವೃತ್ತಿ ಬೇಕಾಗುತ್ತದೆ. ನಾವೇ ಎಲ್ಲವನ್ನೂ ಮಾಡುತ್ತೇವೆ ಎಂದು ಹೇಳುತ್ತಾ ಹೋದರೆ ಆಗುತ್ತಿಲ್ಲ. ಪತ್ರಿಕೆಯವರು ಬರೆಯಬೇಕಾಗುತ್ತದೆ. ನಮ್ಮ ಸಾಧನೆ ಇಟ್ಟುಕೊಳ್ಳಬೇಕು. ಸರ್ಕಾರ ಹೊರಡಿಸತಕ್ಕ ಪತ್ರಿಕೆ ಇದೆ. ಜನಸಾಮಾನ್ಯರು ಜಾಸ್ತಿಯಿರುವವರು ಸಂಘಟಿತರಾಗುತ್ತಾರೆ. ಸಂಘಟಿತರಾದಂಥ ಕೆಲಸಗಾರರ ಸಂಖ್ಯೆ ಕೇವಲ

(ಶ್ರೀ ಕಾಗೋಡು ತಿಮ್ಮಪ್ಪ)

20. ಅಸಂಘಟಿತ ಕೆಲಸಗಾರರ ಸಂಖ್ಯೆ ಬೇಕಾದಷ್ಟು ಇದೆ. ಅಸಂಘಟಿತ ಜನಸ್ತೋಮವನ್ನು ಎದುರಿಸಬೇಕಾಗಿಲ್ಲ ಎಂದು ಇರಬಹುದು. ಒಂದಲ್ಲ ಒಂದು ದಿವಸ ಎಲ್ಲರನ್ನೂ ಎದುರಿಸಲೇಬೇಕಾಗುತ್ತದೆ. ಎದುರಿಸದೇ ಹೋದರೆ, ಸರ್ಕಾರಕ್ಕೆ ರಾಜಕಾರಣಿ ಬಂದು ಅಧಿಕಾರದ ಲಾಭವನ್ನು ಪಡೆದುಕೊಳ್ಳಲು ಹೋಗಬೇಕಾಗುತ್ತದೆ. ಶಾಶ್ವತವಾದ ಒಂದು ವ್ಯವಸ್ಥೆಯನ್ನು ಮಾಡಬೇಕು ಎನ್ನುವ ಕಳಕಳಿ ನಮಗೆ ಇರುವುದಾದರೆ ಅದಕ್ಕೆ ತೀರ್ಮಾನ ಮಾಡಿಕೊಂಡಿದ್ದೇವೆ, ಅದಕ್ಕೆ ಏನೇ ಬರಲಿ, ಕಷ್ಟ ಬರಲಿ ನಷ್ಟ ಬರಲಿ ಅದನ್ನು ಮಾಡೇ ತೀರಬೇಕು ಎನ್ನುವ ಛಲ ರಾಜಕಾರಣಿಗೆ, ಮುಖಂಡರಿಗೆ, ವಿಚಾರವಂತರಿಗೆ, ಬೇಕಾಗುತ್ತದೆ. ಛಲ ಇದ್ದರೆ ಅದರ ಮೂಲಕ ಮಾಡುವುದಕ್ಕೆ ಸಾಧ್ಯವಾಗುತ್ತದೆ ಸರ್ಕಾರದವರು ಕೂಡ ಮುಖ್ಯ ಮಂತ್ರಿಗಳು ಕೂಡ ಇಲ್ಲ, ಹೌದು ಎಂದು ಎಲ್ಲಾ ಪೂರ್ವಭಾವಿಯಾಗಿ ಅದಕ್ಕೆ ಒಂದು ಭೂಮಿಕೆಯನ್ನು ರಾಜ್ಯದಲ್ಲಿ ಹಾಕುತ್ತಾ ಹೋಗಬೇಕು. ಕೆಲವುಕಡೆ ತೊಂದರೆ ಇದೆ, ಮಾಡುವುದಕಾಗುವುದಿಲ್ಲ. ಆಂಧ್ರದಲ್ಲಿ ಚುನಾವಣೆ ನಡೆಯಿತು, ಒಂದೊಂದು ರಾಜ್ಯದಲ್ಲಿ ಒಂದೊಂದು ರೂಪ ತಾಳುತ್ತಾ ಇದೆ. ಉತ್ತರಪ್ರದೇಶದಲ್ಲಿ vote for Jats ಎಂದು ಒಂದು ಕಡೆ ಇದೆ

ಶ್ರೀ ಚರಣಸಿಂಗ್‌ರವರು That is a landed peasantry'' ಎಂದು ಹೇಳಿದರು. ಒಂದೊಂದು ರಾಜ್ಯದಲ್ಲಿ ಒಂದೊಂದು ಚುನಾವಣೆ, ಒಂದೊಂದು ಮುಖಂಡತ್ವ ಇದೆ. There are major communities, landed peasantries, organised communities, which have got a leader ship and well conciseness. ಅದನ್ನು ನಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುವುದು ಬೇಡ. ಪರರಿಗೋಸ್ಕರ ಬಳಸಿ. ಈ ಒಂದು ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ರಾಷ್ಟ್ರ ಎಲ್ಲಾಗುತ್ತಾ ಇರತಕ್ಕ ಅಭಿವೃದ್ಧಿ ಮತ್ತು ರಾಜಕೀಯ ಬೆಳವಣಿಗೆಯ ಪ್ರಯೋಜನ ಎಲ್ಲರಿಗೂ ಸಮಾನವಾಗಿ ಹಂಚಬೇಕು ಎನ್ನುವುದಕ್ಕೆ ಕಾರ್ಯಕ್ರಮ ರೂಪಿಸಬೇಕಾದರೆ ಜನಗಣತಿಯನ್ನು ಮಾಡಬೇಕು ಅದನ್ನು ಯೋಚಿಸಬೇಕಾದ ಅಗತ್ಯವಿಲ್ಲ. ನಮಗೆ ಕಂಡದ್ದನ್ನು ನಾವು ಹೇಳುವುದು ನಿಮಗೆ ಕಂಡದ್ದನ್ನು ನೀವು ಹೇಳಬೇಕಾಗಿಲ್ಲ. ಅದನ್ನು ಸಾಬೀತು ಮಾಡಿ ಜನರಿಗೆ ತೋರಿಸಿಕೊಡಬೇಕಾದರೆ ಅದನ್ನು ಮಾಡಿ ತೋರಿಸಬೇಕು, ಬಹುಸಂಖ್ಯಾತರು ಯಾರು ಇದ್ದಾರ ಅವರಿಗೆ ಅರ್ಥವಾಗುವುದಿಲ್ಲ. ಅವರ ತಲೆಗೆ ಹೋಗುವುದಿಲ್ಲ. ಅವರ ಕಷ್ಟದಲ್ಲಿ ಅವರು ಇದ್ದು ಬಿಡುತ್ತಾರೆ. ವಿದ್ಯಾವಂತರ ಸಂಖ್ಯೆ ಎಷ್ಟು ಇದೆ? ಕೆಲವು ವಿದ್ಯಾವಂತರು ವಿಸ್ತಾರವಾಗಿ ತಿಳಿದುಕೊಳ್ಳುವುದಕ್ಕೆ ಅವಕಾಶ ಇರುವುದಿಲ್ಲ. ಊರುಗಳಲ್ಲಿ ಕೆಲಸ ಮಾಡುತ್ತಿರುತ್ತಾರೆ, ಮತ್ತೊಂದು ಮಾಡುತ್ತಾ ಇರುತ್ತಾರೆ, ಅವರಿಗೆ ಗೊತ್ತಾಗುವುದಿಲ್ಲ. ರಾಷ್ಟ್ರದಲ್ಲಿ, ರಾಜ್ಯದಲ್ಲಿ ಏನು ನಡೆಯುತ್ತಿದೆ, ಏನು ಹೋಗುತ್ತಿದೆ ಎಂದು ಸಿಂಹಾವಲೋಕನ ಮಾಡುವ ಪ್ರಜ್ಞೆ ಬಂದಿರುವುದಿಲ್ಲ. ಚುನಾವಣೆಯ ಕಾಲದೊಳಗೆ ಈ ವಿಷಯ ಗೊತ್ತು ಇಲ್ಲದೇ ಹೋದರೂ, ಇಂಥ ಮುಖಂಡತ್ವಕ್ಕೆ ಬೆಂಬಲ ಕೊಡಿ ಎಂದು ಹೇಳಿದರೆ ಬೆಂಬಲ ಕೊಡುತ್ತಾರೆ. ಹಿಂದುಳಿದ ವರ್ಗದ ಆಯೋಗದಿಂದ ಯಾವ ಜನರಿಗೆ ಪ್ರಯೋಜನ ಆಗಬೇಕಾಗಿದೆಯೋ ಆ ಜನರಿಗೇ ಆಸಕ್ತಿ ಇಲ್ಲ. ಜನರಿಗೆ ಅದರ ಬಗ್ಗೆ ಚಿಂತೆಯಿಲ್ಲ. ಹಿಂದುಳಿದ ಆಯೋಗದವರು ಬಂದಿದ್ದಾರೆ ಎಂದು ಹೇಳಿ ಹ್ಯಾಂಡ್ ಬಿಲ್ ಪ್ರಿಂಟ್ ಮಾಡಿಸಿ, ನೀವು ಎಲ್ಲಾ ಅಲ್ಲಿಗೆ ಹೋಗಿ ಹೇಳಿಕೆ ಕೊಡಬೇಕು, ನಿಮ್ಮ ಸ್ಥಿತಿಯನ್ನು ಅವರು ಮನಗಾಣಬೇಕು ನೀವು ಎಲ್ಲಾ ಎಂದು ಹೇಳಿದರೆ 30—31 ಜನ ಬಂದು ಕೂತಿರುತ್ತಾರೆ. ಕ್ವಾಲಿಫಿಕೇಷನ್ ಮಾಡಿಕೊಳ್ಳುವುದಕೋಸ್ಕರವಾಗಿ ಬೇರೆಯವರೂ ಬಂದು ಕೂತಿರುತ್ತಾರೆ. ಯಾರಿಗೆ ಅಂಥವರಲ್ಲಿ ಆಸಕ್ತಿ ಇರುತ್ತದೋ ಅಂಥವರು ಬಂದಿರುತ್ತಾರೆ. ಇಂಥ ವಿಷಯದಲ್ಲಿ ನೀವು ಏನು ಹೇಳುತ್ತೀರಿ? ಬ್ರಾಹ್ಮಣರಲ್ಲಿ ಬಡವರು ಇಲ್ಲವೇ, ಆ ಬಡವರಿಗೂ ಈ ಬಡವರಿಗೂ ಹೇಗೆ ಮಾಡುತ್ತಾರೆ ಎಂಬುದನ್ನು ತಿಳಿದುಕೊಳ್ಳುವುದಕೋಸ್ಕರವಾಗಿ ಬಂದು ಕೂತಿರುತ್ತಾರೆ. ಆದುದರಿಂದ ನೀವು ಯಾವ ಜನರಿಗೋಸ್ಕರ ಮಾಡುತ್ತೀರಿ? ಹಿಂದುಳಿದ ಆಯೋಗದ ಪ್ರತಿಫಲ ಶೇಕಡ ಹರಿಜನರು 15 ಪರ್‌ಸೆಂಟ್ ಮೈನಾರಿಟೀಸ್ ಕಮ್ಯೂನಿಟೀಸ್‌ನವರು 35 ಪರ್‌ಸೆಂಟ್‌ನ್ನು ಸೇರಿಸಿದರೆ ಸೇರಿಸಿದರೆ 53 ಪರ್‌ಸೆಂಟ್ ಆಗುತ್ತದೆ. ಮಂತ್ರಿಮಂಡಲದಲ್ಲಿ ಎಷ್ಟು ಜನ ಇದ್ದಾರೆ ಒಕ್ಕಲಿಗರು 5 ಜನ, ಲಿಂಗಾಯಿತರು 4 ಜನ ಒಬ್ಬ ಕುರುಬ ಇಬ್ಬರು ಹರಿಜನರು ಆದುದರಿಂದ ಇವರಿಗೆ ಪ್ರಜ್ಞೆ ಇಲ್ಲ. ಅವರಿಗೆ ಗೊತ್ತಾಗುವುದಿಲ್ಲ. ನನ್ನ ಹತ್ತಿರ ತಾಲ್ಲೂಕ್ ವೈಸ್ ಇದೆ, ಮಂಡ್ಯದಲ್ಲಿಯ ಲೆಕ್ಕ ಹೇಳುವುದಾದರೆ, ಯಾವ ತಾಲ್ಲೂಕಿನೊಳಗೆ ನೋಡಿದರೂ ಶೇಕಡ 30 ರಷ್ಟಕ್ಕಿಂತ ಜಾಸ್ತಿ ಇಲ್ಲ. ಇದ್ದರೆ ತೋರಿಸಿ. ಉಳಿದವರು ಇದ್ದಾರೆ ಅವರಿಗೆ ಗೊತ್ತಾಗುವುದಿಲ್ಲ. 10—11 ಪರ್‌ಸೆಂಟ್ ಇರತ್ತಾರೆ ಅವರೇ ಬಂದಿರುತ್ತಾರೆ. ಮೈಸೂರು ಜಿಲ್ಲೆಯಲ್ಲಿ ಕುರುಬರು ಎಷ್ಟು ಇದ್ದಾರೆ? ಯಾರಾ

ದರೂ ಒಬ್ಬರಾದರೂ ಬಂದಿದ್ದಾರೆಯೇ ? ಅವರಿಗೆ ಪ್ರಜ್ಞೆ ಬಂದಿಲ್ಲ. ಮೂಲತಃ ಹಿಂದುಳಿದಿರುವವರಲ್ಲಿ ಆರ್ಥಿಕವಾಗಿ ಇನ್ನೂ ಕುರುಬರು ಸೇರಿಕೊಂಡಿದ್ದಾರೆ. ಅನಕ್ಷರತೆ, ಬಡತನ, ಸಾಮಾಜಿಕವಾಗಿ ಹಿಂದುಳಿದಿರುವುಕೆ, ಮುಖಂಡತ್ವ ಇಲ್ಲದೇ ಇರುವುದು, ಜಮೀನು ಇಲ್ಲದೇ ಇರುವುದು ಈ ಎಲ್ಲಾ ದಿಶೆಯಲ್ಲಿ ಸೇರಿಕೊಂಡಿವೆ. ಮುಖಂಡತ್ವವನ್ನೇನಾದರೂ ವಹಿಸಿಕೊಳ್ಳುವುದಕ್ಕೆ ಹೋದರೆ ಹೊಡೆದು ಓಡಿಸುತ್ತಾರೆ, ಪಂಚಾಯಿತಿ ಚೇರ್ಮನ್ ಆಗುವುದಕ್ಕೆ ಹೋದರೆ ಅಲ್ಲಿಯೂ ಹೆದರಿಸಿ ಓಡಿಸುತ್ತಾರೆ ದುಡಿಮೆ ಮಾಡುವುದಕ್ಕೆ ಹೋದರೆ ಮುಂಖಡತ್ವ ಸಿಕ್ಕುವುದಿಲ್ಲ. ಅನಕ್ಷರತೆ ಬಡತನ ಇವೆಲ್ಲವು ಬಹುಸಂಖ್ಯಾತರರಲ್ಲಿ ನೇರಿರುವುದರಿಂದ್ ಸಂಖ್ಯೆಯಲ್ಲಿ ಬಹುಸಂಖ್ಯಾತರು ಆದರೂ ಅಧಿಕಾರ ಪಡೆಯುವುದರಲ್ಲಿ ಅವರು ಅಲ್ಪಸಂಖ್ಯಾತರರು ಆಗಿದ್ದಾರೆ. ಇದು ರಾಜ್ಯದ ವಾಸ್ತವಿಕ ಚಿತ್ರವಲ್ಲ, ಇಡೀ ರಾಷ್ಟ್ರದ ಚಿತ್ರ ಕೂಡ ಹೌದು. ಆದುದರಿಂದ ಈ ಒಂದು ಪರಿಸ್ಥಿತಿಯನ್ನು ನಾವು ಮನಗಾಣಬೇಕು.

ಶ್ರೀ ಎಚ್. ಡಿ. ದೇವೇಗೌಡ.—ರಾಷ್ಟ್ರದ್ದು ಎಂದು ಸಹಜವಾಗಿಯೇ ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ.—ಅಷ್ಟು ದೂರ ಬೇಡ. ನಾನು ಲೋಕ ಸಭೆಗೆ ಹೋದರೆ ಹೇಳುತ್ತೇನೆ. ಕರ್ನಾಟಕ ರಾಜ್ಯದಲ್ಲಿ ನೀವು ತಿಳಿದುಕೊಂಡಿರುವ ಹಾಗೆ ಅದು ಬದಲಾವಣೆಯಾಗಿಲ್ಲ, ಬದಲಾವಣೆ ಆಗುವುದಿಲ್ಲ ಇಲ್ಲ. ಆದುದರಿಂದ ಈ ಹಿಂದುಳಿದಿರುವವರನ್ನು ಗಮನದಲ್ಲಿಟ್ಟುಕೊಂಡು ನೀವು ಸ್ವಲ್ಪ ಪುನರ್ ಪರಿಶೀಲನೆ ಮಾಡಿ ಅಂಕಿ ಅಂಶಗಳನ್ನು ತಿಳಿದುಕೊಂಡು ಜನರಿಗೆ ಪ್ರಸಾರ ಮಾಡುತ್ತಾ ಹೋಗಬೇಕು. ಹಣಕಾಸಿನ ಸಚಿವರ ಕೈಯಲ್ಲಿ ಪ್ರಸಾರ ಇಲಾಖೆ ಇದೆ, ಇದರಿಂದ ನೀವು ಹಿಂದುಳಿದ ವರ್ಗದವರು ಹೇಗೆ ಇದ್ದಾರೆ ಅವರು ಯಾವ ಸ್ಥಿತಿಯಲ್ಲಿ ಇದ್ದಾರೆ ಎನ್ನುವ ಸಾಮಾಜಿಕ ಪ್ರಶ್ನೆ ಅವರಲ್ಲಿ ಬೆಳೆಯಬೇಕು. ಅವರು ಅಕ್ಷರಸ್ಥರು ಮೊದಲು ಆಗಬೇಕು. ಹೆಚ್ಚಾಗಿ ಜನರನ್ನು ಶಾಲೆಗೆ ಕಳುಹಿಸಬೇಕು, ವಿದ್ಯಾವಂತರನ್ನಾಗಿ ಮಾಡತಕ್ಕ ಕಾರ್ಯಕ್ರಮವನ್ನು ಹಾಕಿ ಅಕ್ಷರಸ್ಥರನ್ನಾಗಿ ಮಾಡಬೇಕು. ಎಲ್ಲಾ ಸವಲತ್ತುಗಳನ್ನು ಹಾಸ್ಟಲ್‌ಗಳಲ್ಲಿ ಒದಗಿಸಬೇಕು. ಹೈಸ್ಕೂಲ್‌ಗೆ ಹೋಗುತ್ತಿರುವವನ್ನು ರಜದಲ್ಲಿ ಊರಿಗೆ ಹೋದರೆ ಸಾಕು, ಅವರ ತಂದೆ ಗಾಡಿ ಕಟ್ಟು, ಭೂಮಿ ಉಳುಮೆ ಮಾಡು, ಗೊಬ್ಬರ ತುಂಬಿಕೊಂಡು ಬಾ, ಎಂದು ಹೇಳಿದರೆ ಅವನಿಗೆ ಪೇಪರ್ ಓದುವುದಕ್ಕೆ ಚೈತನ್ಯ ಎಲ್ಲಿ ಇರುತ್ತದೆ. ಅವನ ಜ್ಞಾನ ಹೇಗೆ ಬೆಳೆಯುತ್ತದೆ ? ಅವನು ಪತ್ರಿಕೆ ಎಲ್ಲಿಂದ ತರುವುದು ? ಅವರ ಪದ್ಧತಿಯಲ್ಲಿ ಅವನು ಬೆಳೆದು ಬಂದರೆ ಅವನು ವಿದ್ಯಾವಂತನು ಆಗುವುದು ಹೇಗೆ ? ಶಾಲಾ, ಕಾಲೇಜಿಗೆ ಬಂದಾಗ ಬೆಂಗಳೂರಿನಲ್ಲಿರಕ್ಕಂಥ ಮಕ್ಕಳು ಡಿಬೇಟ್‌ನಲ್ಲಿ ಪಾರ್ಟಿಸಿಪೇಟ್ ಮಾಡುತ್ತಾರೆ ನಮ್ಮ ಮಕ್ಕಳು ಡಿಬೇಟ್‌ನಲ್ಲಿ ಪಾರ್ಟಿಸಿಪೇಟ್ ಮಾಡುವುದಕ್ಕೆ ಹೋದರೆ ಹಳ್ಳಿಯ ಮಂಗಗಳ ಎಂದು ಗೇಲಿ ಮಾಡುವುದರಿಂದ ಶಾಲೆ ಬಿಟ್ಟುಕೂಡಲೇ ಊರಿನ ಕಡೆಗೆ ಓಡುವುದು ಹಳ್ಳಿಯ ಜನರಿಗೆ ವಿದ್ಯಾವಂತ ಮಕ್ಕಳಲ್ಲಿರುವ ಗಂಡಸುತನ ಮತ್ತು ಚೈತನ್ಯ ಸ್ವರೂಪಗೊಳ್ಳುತ್ತಾ ಇಲ್ಲ. ಏತಕ್ಕೆಂದರೆ ಅವರ ಸೋಶಿಯಲ್ ಕಾಂಪ್ಲೆಕ್ಸ್ ಏನು ಇದೆ ಅದು ಅವರನ್ನು ಬಿಟ್ಟು ಹೋಗುವುದಿಲ್ಲ. ಅದು ಇರುವುದರಿಂದ ಅವರಲ್ಲಿ ಹೆಚ್ಚು ಮಂದಿ ಇವತ್ತು ಪಧವೀಧರರು ಆಗುವುದಕ್ಕೆ ಆಗಿಲ್ಲ. ಅವರಲ್ಲಿ ಕೆಲವರು ಮಾತ್ರ ಉತ್ತಮವಾದ ಕಥೆ ಕವನವನ್ನು ಬರೆಯುತ್ತಿದ್ದಾರೆ.

ಇನ್ನು ಸರ್ಕಾರದ ಪ್ರಸಾರ ಇಲಾಖೆಯವರು ಏನು ಮಾಡಬೇಕು ಎಂದರೆ ಜಾಗ್ರತೆಯನ್ನು ಜನರಲ್ಲಿ ಮೂಡಿಸಬೇಕು. ಪ್ರಸಾರ ಇಲಾಖೆಯವರು ಬೆಂಗಳೂರು ನಗರದಲ್ಲಿ ಚಿತ್ರಪಟ್ಟವನ್ನು ತೋರಿಸಿಕೊಂಡು, ಕಾಲೇಜಿನಲ್ಲಿ, ಯೂನಿವರ್ಸಿಟಿಯಲ್ಲಿಡತಕ್ಕ ಹುಡುಗರಿಗೆ ತೋರಿಸುತ್ತಾ ಕುಳಿತರೆ ಶೇಕಡ 20ರಷ್ಟು ಜನ ತಿಳಿದುಕೊಂಡ ಹಾಗೆ ಆಗುತ್ತದೆ. ಇನ್ನು 80ರಷ್ಟು ಜನ ಮುಂದೆ ಬರುವುದಿಲ್ಲ, ಆದುದರಿಂದ ಪ್ರಸಾರ ಇಲಾಖೆಯವರು ಮೊಬೈಲ್ ವ್ಯಾನನ್ನು ಇಟ್ಟುಕೊಳ್ಳಬೇಕು ಚಿತ್ರವನ್ನು ತೋರಿಸಬೇಕು. ಬೆಳಿಗ್ಗೆ ಎರಡನೆ ಶಾಲೆಯ ಪುಸ್ತಕವನ್ನು ಓದಿದೆ, ಪುಸ್ತಕ ಬಹಳ ಚೆನ್ನಾಗಿದೆ ''ಒಂದು ಹೊಲದಲ್ಲಿ ಕುರಿಗಳು ಮೇಯುತ್ತಾ ಇವೆ, ಆ ಹೊಲವನ್ನು ಕಾಯುತಾ ಇದ್ದ ಹುಡುಗ ಕಲ್ಲು ತೆಗೆದುಕೊಂಡು ಅವಕ್ಕೆ ಹೊಡೆದರೂ ಅವು ಹೋಗಲಿಲ್ಲ, ಅಳುತ್ತಾ ನಿಂತಿದ್ದ. ಅಲ್ಲಿಗೆ ಒಂದು ಮೊಲ ಬಂತು, ಹುಡುಗ ಅಳುತ್ತಿರುವ ಕಾರಣವನ್ನು ತಿಳಿದು. ಅದು ಕುರಿಗಳಿಗೆ ಹೇಳಿತು ಆದರೂ ಅವು ಹೋಗಲಿಲ್ಲ ಅಲ್ಲಿಗೆ ನರಿ ಬಂತು ಅದು ಕರೆದರೂ ಹೋಗಲಿಲ್ಲ. ಕೊನೆಗೆ ಜೇನು ನೊಣ ಬಂತು, ಅದು ಹೋಗಿ ಕುರಿಯನ್ನು ಕಡಿದ ಕೂಡಲೇ ತಿನ್ನುವುದನ್ನು ಬಿಟ್ಟು ಓಡಿ ಹೋಯಿತು'' ಇಂಥ ಅವಾಸ್ತವಿಕವಾದ ವಿಷಯಗಳನ್ನು ಹುಡುಗರ ತಲೆಗೆ ತುಂಬುವುದು, ಯಾವುದು ಜಗತ್ತಿನಲ್ಲಿ ಸಾಧ್ಯವಿಲ್ಲವೋ ಅದನ್ನು ಹೇಳುವುದು ಮೋಲ ಮಾತನಾಡುವುದೇ, ಹೊಲವನ್ನು ಮೇಯುತ್ತಿರುವಾಗ ಕಲ್ಲು ಹೊಡೆದರೆ ಓಡದೇ ಇರುತ್ತದೆಯೇ ? ವಾಸ್ತವಿಕ ವಿಷಯಗಳನ್ನು ಸಣ್ಣ ಮಕ್ಕಳ

(ಶ್ರೀ ಕಾಗೋಡು ತಿಮ್ಮಪ್ಪ)

ತಲೆಗೆ ತುಂಬಿದರೆ ಏನು ಜಾಗ್ರತಿ ಆಗುತ್ತದೆ, ಅವರ ಪ್ರಜ್ಞೆ ಬೆಳೆಯುತ್ತದೆಯೇ? ಸಂಪೂರ್ಣವಾದ್ದ ಕಟ್ಟು ಕಥೆಗಳನ್ನು ಮಕ್ಕಳ ಮನಸ್ಸಿನಲ್ಲಿ ತುಂಬಿದರೆ ಪ್ರಜ್ಞೆ ಬೆಳೆಯುವುದಿಲ್ಲ. ಇಂಥ ವಿಷಯಗಳನ್ನು ಮಕ್ಕಳ ತಲೆಗೆ ಹಾಕಿದರೆ ನಾಳೆ ಹೇಗೆ ಜಾಗ್ರತೆ ಆಗಬೇಕು, ಹೇಗೆ ಬೆಳೆಯಬೇಕು ಆದುದರಿಂದ ಮೊಬೈಲ್ ವ್ಯಾನ್ ಮಾಡಿಕೊಂಡು ಹಳ್ಳಿಹಳ್ಳಿಗೆ ಹೋಗಿ, ಅವರು ಸಿನಿಮಾ ನೋಡಿರುವುದೇ ಇಲ್ಲ. ಬಯಲಾಟವೇ ಅವರಿಗೆ ದೊಡ್ಡ ಸಿನಿಮಾ. ಆದುದರಿಂದ ಅವರು ಸುಲಭವಾಗಿ ಸಮಾಜದ ವಿರುದ್ಧ ಬಂಡಾಯ ಏಳುವ ಹಾಗೆ ಮಾಡಬೇಕು. ಬಂಡಾಯ ಏಳಬೇಕು ಅದೇ ಸರಿ. ಸಂಪ್ರದಾಯದ ವಿರುದ್ಧ ನಿಲ್ಲತಕ್ಕ ಧೈರ್ಯವನ್ನು, ಬಂಡಾಯವನ್ನು ಹೂಡಬೇಕಾದರೆ ಅವರ ತನಿಗೆ ದೊಡ್ಡ ಸೂಜಿಮದ್ದನ್ನು ಹಾಕಬೇಕು. ಈಗ ಸ್ವಲ್ಪ ಬೆಳಕು ಹರಿಯುತ್ತಿದೆ. ಈ ಕೆಲಸವನ್ನು ತಾವು ಪ್ರಸಾರ ರೂಪದಲ್ಲಿ ಮಾಡಿಕೊಳ್ಳಬೇಕು. ಪ್ರಚಾರ ರಂಗ ಬಿಡುವುದು ಸರಿಯಲ್ಲ. ನಾನಾ ರೂಪಗಳಲ್ಲಿ ಪ್ರಸಾರ ಕಾರ್ಯಗಳನ್ನು ರೂಪುಗೊಳಿಸಬೇಕು. ಕೇವಲ ದೇವಸ್ಥಾನಗಳಿಗೆ ಹೋಗಿ ಅಲ್ಲಿನ ಚಿತ್ರಗಳನ್ನು ತೆಗೆದುಕೊಳ್ಳುವುದು ಅಷ್ಟೇ ಅಲ್ಲ. ಇಂತಹ ಕೆಲಸ ಯಾವುದನ್ನು ಮಾಡಬೇಕಾದರೂ ಅಲ್ಲಿ ಏನೋ ಹೋಗಿ ಮಾಡಿಕೊಂಡು ಬರುತ್ತಾರೆಂದು ಸುಮ್ಮನೆ ಕೂತುಕೊಳ್ಳುವುದಲ್ಲ. ಪ್ರಚಾರ ರಂಗ ವ್ಯವಸ್ಥೆ ವ್ಯವಸ್ಥಿತವಾಗಿ ರೂಪುಗೊಳ್ಳಬೇಕು. ಅದು ಕೇವಲ ನಗರದ ಪ್ರದೇಶಗಳಲ್ಲಿಯೇ ಸೀಮಿತವಾಗುವುದಕ್ಕೆ ಅವಕಾಶವಿರಬಾರದು, ಗ್ರಾಮಾಂತರ ಪ್ರದೇಶಗಳಲ್ಲಿಯೂ ಅವನ್ನು ಹರಡುವುದಕ್ಕೆ ತಕ್ಕ ಏರ್ಪಾಟು ಮಾಡಬೇಕು. ಅಲ್ಲಿನ ಜನರ ಪ್ರಜ್ಞೆಯಲ್ಲಿ ಹೊಸ ಚೈತನ್ಯವನ್ನು ಮೂಡಿಸತಕ್ಕಂಥ ವಿಷಯಗಳನ್ನು ಅವರಿಗೆ ಬಂದ ಭಾಷೆಯಲ್ಲಿ ಪ್ರಚಾರ ಮಾಡಬಹುದು, ಅಥವಾ ಚಿತ್ರದಲ್ಲಿ ಆಗಬಹುದು, ಅಂತೂ ಒಟ್ಟಿನಲ್ಲಿ ಗ್ರಾಮಾಂತರ ಜನಗಳಿಗೆ ಒಂದು ಪ್ರಜ್ಞೆಯ ಭಂಡಾರವನ್ನು ವಿಮುಖವಾಗಿ ಹಾಗೂ ಶೀಘ್ರವಾಗಿ ಬೆಳೆಸತಕ್ಕ ಪ್ರಯತ್ನವನ್ನು ಈ ರಾಜ್ಯದ ಪ್ರಚಾರ ಇಲಾಖೆ ಮಾಡಬೇಕು. ಇವತ್ತು ಸಾಕಷ್ಟು ರೇಡಿಯೋಗಳು ಕೇವಲ 30-40-50 ರೂಪಾಯಿಗಳಿಗೆ ಸುಲಭವಾಗಿ ಸಿಗುವುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿಯೂ ಎಲ್ಲೆಲ್ಲಿ ನೋಡಿದರೂ ಅವುಗಳ ಮೂಲಕ ಅನೇಕ ವಿಷಯಗಳನ್ನು ಗ್ರಾಮಾಂತರ ಜನಗಳು ತಿಳಿದುಕೊಳ್ಳುತ್ತಿದ್ದಾರೆ. ಇನ್ನೂ ಅವುಗಳು ಸುಲಭವಾಗಿ ಸಿಗುವ ಹಾಗೆ ಸರ್ಕಾರದವರು ತಕ್ಕ ವ್ಯವಸ್ಥೆ ಮಾಡಬೇಕು. ಪ್ರಚಾರಶಾಖೆಯವರು ಗ್ರಾಮಾಂತರ ಪ್ರದೇಶಗಳಲ್ಲಿ ಪುರಂದರ ದಾಸರ ಕೀರ್ತನೆಗಳು ಮತ್ತು ಇನ್ನಿತರ ದಾಸರ ಕೀರ್ತನೆಗಳ ಮೂಲಕ ಪ್ರಚಾರ ವ್ಯವಸ್ಥೆ ಆಗಬೇಕು. ಅವರಿಗೆ ಹೊಸ ಸಮಾಜ ಕಲ್ಪನೆ ಸರಿಯಾಗಿ ಆಗುವಂತೆ ಪ್ರಚಾರ ಕಾರ್ಯಗಳನ್ನು ಕೈಗೊಳ್ಳಬೇಕು. ಅದನ್ನು ಮಾಡದೆ ಅಲ್ಲಿ ಹೋಗಿ ಬೆಂಗಳೂರಿನ ಅಶೋಕ ಹೋಟಲಿನಲ್ಲಿ ಒಂದು ಕಾಫಿಗೆ 5 ರೂಪಾಯಿ ಇದೆಯೆಂದು ಹೇಳುವುದು— ಇಂತಹ ಪ್ರಚಾರಕಾರ್ಯ ಕೂಡದು. ಇಂಥಾದ್ದರಿಂದ ಈ ದೇಶದ ಬೆಳವಣಿಗೆಯಾಗುವುದಿಲ್ಲ. ಅಲ್ಲಿರತಕ್ಕ ಜನರು ಪ್ರಾಜ್ಞವಂತರಾಗಲು ಹೆಚ್ಚಿಗೆ ಪ್ರಚಾರಕಾರ್ಯಗಳು ಆಗಬೇಕು. ಅಲ್ಲಿಗೆ ರಸ್ತೆ ಬರಬೇಕು, ಆಸ್ಪತ್ರೆ ಬರಬೇಕು, ಅಲ್ಲಿ ನರ್ಸರಿ ಸ್ಕೂಲು ಬರಬೇಕು. ಬೆಳಕು ಬರಬೇಕು ಅಂದರೆ ಅದಕ್ಕೆ ಸರಿಯಾದ ಮುಖಂಡತ್ವವನ್ನು ಬೆಳಸಬೇಕು. ಸರ್ಕಾರದವರು ಅದಕ್ಕೆ ತಕ್ಕ ಸಾಧನೋಪಾಯಗಳನ್ನು ಬಳಸಬೇಕಾಗುತ್ತದೆ, ಹಳ್ಳಿಯ ಜನರಿಗೆ ಬೆಂಗಳೂರಿನಲ್ಲಿ ಏನೇನು ಆಗುತ್ತಿದೆಯೆಂಬುದು ಅನೇಕರಿಗೆ ಗೊತ್ತಿಲ್ಲ. ಇಲ್ಲಿನ ಅಶೋಕ ಹೋಟಲಿನ ಸ್ಥಿತಿಯನ್ನು ಹಳ್ಳಿಯ ಜನಗಳಿಗೆ ತೋರಿಸಿಕೊಟ್ಟು ಹೇಳಿದರೆ, ಅವರಿಗೆ ತುಂಬಾ ಆಶ್ಚರ್ಯವಾಗುತ್ತದೆ. ನಾವು ಅಷ್ಟು ದುಡ್ಡು ಕೊಟ್ಟು ಕಾಫಿ ಕುಡಿಯುವುದಿಲ್ಲವೆಂದು ಹೇಳುತ್ತಾರೆ.

† ಶ್ರೀ ಡಿ. ದೇವರಾಜ್ ಅರಸ್.—ನಿನ್ನೆ ದಿವಸ ಕಾಲೇಜ್ ಸ್ಟೂಡೆಂಟ್ಸ್ ಒಂದು ಸಭೆಯನ್ನು ಮಾಡಿದ್ದರು. ವಿದ್ಯಾರ್ಥಿಮಂಡಲಿಯ ಮುಂದೆ ನಾನು ಭಾಷಣಮಾಡತಕ್ಕ ಅವಕಾಶವಿತ್ತು. ಕಾಲೇಜಿಗೆ ಸೇಕಡ 80ರಷ್ಟು ಗ್ರಾಂಟ್ ಕೊಡುತ್ತಿದ್ದೇವೆ. ಅದನ್ನು ಹೆಚ್ಚಿಗೆ ಮಾಡಿ ಹುಡುಗರು ಕೊಡತಕ್ಕ ಡೊನೇಷನ್ ನಿಲ್ಲಿಸುವಂತೆ ಮಾಡಿ, ಸರ್ಕಾರವೇ ಇನ್ನುಮುಂದೆ ಹೆಚ್ಚಿಗ ಗ್ರಾಂಟ್ ಕೊಡಲಿ ಎಂಬುದಾಗಿ ಹೇಳಿದರು. ಈಗಾಗಲೇ ಸೇಕಡ 70 ರಿಂದ 80ಕ್ಕೆ ಏರಿಸಿದ್ದೇವೆ. ಅದನ್ನು ಈಗ ಇನ್ನೂ ಕಡಿಮೆಮಾಡಬೇಕೆಂದು ಯೋಚನೆ ಮಾಡಿದ್ದರೂ ಕಾಲೇಜುಗಳಿಗೆ ಸೇಕಡ 80ರಷ್ಟು ಗ್ರಾಂಟ್ ಕೊಡುತ್ತಾ ಬಂದಿದ್ದೇವೆ. ನಮ್ಮ ಪಕ್ಕದ ರಾಜ್ಯವಾಗಿರುವ ತಮಿಳುನಾಡಿನಲ್ಲಿ ಅಲ್ಲಿನ ಸರ್ಕಾರದವರು ನಾವು ಒಂದು ಯೂನಿವರ್ಸಿಟಿಗೆ ಕೊಡುವ ಹಣವನ್ನು ಅವರು ಮೂರು ಯೂನಿವರ್ಸಿಟಿಗಳಿಗೆ ಹಂಚಿ ಕೊಡುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ತೊಂದರೆಯಾಗದೇ ಇರಲಿ ಎಂಬ ಉದ್ದೇಶದಿಂದಲೇ ಹೆಚ್ಚಿಗೆ ಗ್ರಾಂಟನ್ನು ಕೊಡುತ್ತಿದ್ದೇವೆ. ಇಷ್ಟೊಂದು ದೊಡ್ಡದಾಗಿ ಅವರಿಗೆ ಹಣವನ್ನು ಕೊಡುತ್ತಿದ್ದೇವೆ. ಇಷ್ಟು ದುಡ್ಡು ಕೊಡುತ್ತಿದ್ದರೂ ಇನ್ನೂ 80 ರಿಂದ 95ಕ್ಕೇರಿಸಿ

ಎಂಬುದಾಗಿ ಕೇಳಿವರೆ ಹೇಗೆ ? ಹುಡುಗರು ಈ ರೀತಿಯಾಗಿ ಮಾತನಾಡುವುದಕ್ಕೆ ಹೊರಟಿದ್ದಾರೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಅವರಿಗೆ ಹೇಳಬೇಕಾಯಿತು. ನಿಮ್ಮಂತೆಯೇ ಈ ಊರು ಬಿಟ್ಟು ಹೊರಗಡೆ ನೋಡಿದರೆ ಬೇರೆ ಜನರೂ ರಹ ಇದ್ದಾರೆ ಸ್ಲಂ ಡ್ವೆಲರ್ಸ್ ಬೇಕಾದಷ್ಟು ಜನರು ಇದ್ದಾರೆ. ಅವೂ ಅಲ್ಲವೆ ಹಳ್ಳಿಗಳಿಗೆ ಹೋದರೆ ಅಲ್ಲಿನ ಜನರ ಕಷ್ಟ ಸ್ಥಿತಿಯನ್ನು ನೋಡಿದರೆ ತುಂಬಾ ದುಃಖವಾಗುತ್ತದೆ, ಅವರು ಎಲ್ಲಿಂದ ದುಡ್ಡು ತರಬೇಕು ? ಅವರಿಗೆ ಸರ್ಕಾರ ಎಷ್ಟರಮಟ್ಟಿಗೆ ಸಹಾಯಮಾಡಬೇಕು ? ವರ್ತಮಾನ ಪತ್ರಿಕೆಗಳಲ್ಲಿ ಏನು ಬರುತ್ತದೆ ಇಂತಹ ವಿಷಯಗಳು ಅವರಿಗೆ ಅನ್ ಇಂಪಾರ್ಟೆಂಟ್. ಅಲ್ಲಿನ ಹುಡುಗರಿಗೆ ಸೆನೆಟ್, ಸಿಂಡಿಕೇಟ್ ಮುಂತಾದ ಕಡೆಗಳಲ್ಲಿ ಅವುಗಳೂ ಅವಕಾಶ ಇರಬೇಕು, ಅವರ ಪ್ರತಿನಿಧಿಗಳು ಇರಬೇಕೆಂದು ಹೇಳಿದರೆ ಅಂಥಾದ್ದು ಬಹು ಜಾಗ್ರತೆಯಾಗಿ ವರ್ತಮಾನ ಪತ್ರಿಕೆಗಳಲ್ಲಿ ಬಂದುಬಿಡುತ್ತದೆ. ಇಂತಹ ವಿಷಯಗಳಲ್ಲಿ ಬಹಳ ದೊಡ್ಡದಾಗಿ ಇವೇ ಸಭೆಯಲ್ಲಿ ಒಂದು ಗೊಂದಲವಾದರೆ, ಪತ್ರಿಕಾ ಕರ್ತರು, ಸದಸ್ಯರುಗಳು ಅಧಿಕಾರಿಗಳು ಎಲ್ಲರೂ ಸಭೆಯು ತುಂಬ ತುಂಬಿಬಿಡುತ್ತಾರೆ. ಇವತ್ತಿನಂತಹ ಕಾರ್ಯಕಲಾಪಗಳು ಈ ಸಭೆಯಲ್ಲಿ ನಡೆಯುತ್ತಿದ್ದರೆ, ಯಾರಿಗೂ ಸ್ವಾರಸ್ಯವಿಲ್ಲ. ಈ ಸಭೆಯನ್ನು ಈಗ ನೋಡಿದರೇನೇ ಗೊತ್ತಾಗುತ್ತದೆ. ಇದು ಲೋಕ ನ್ಯಾಯ.

ಶ್ರೀ ಕಾಗೋಡು ತಿಮ್ಮಪ್ಪ.—ಪತ್ರಿಕೆಗಳು ಯಾವುದನ್ನು ಪ್ರಾಮುಖ್ಯವಾಗಿ ಪ್ರಕಟಿಸುತ್ತಾರೆಂದರೆ, 24 ಗಂಟೆಗಳ ಚುಂಬನ ಎಲ್ಲೋ ನಡೆಯುತೆಂದರೆ ಅದನ್ನು ಹಾಕುತ್ತಾರೆ,

ಶ್ರೀ ಡಿ. ದೇವರಾಜ ಅರಸ್.—ಫೋಟೊ ಒಂದು ಬಂದಿರಲಿಲ್ಲ,

ಶ್ರೀ ಕಾಗೋಡು ತಿಮ್ಮಪ್ಪ.—ಅದಕ್ಕೂ ಒಂದು ಎಡಿಟೋರಿಯಲ್.

ಶ್ರೀ ಡಿ. ದೇವರಾಜ ಅರಸ್.—ನಮ್ಮ ದೇಶದಲ್ಲಿ ಮೌಲ್ಯಗಳು ಈ ರೀತಿಯಾಗಿ ಅಧೋಗತಿಗೆ ಹೋಗುತ್ತಿವೆ. ಜನತೆಗೆ ಸಂಬಂಧಪಟ್ಟ ಮೌಲ್ಯಗಳನ್ನು ಎತ್ತಿಡುವುದು ಹೇಳಿದರೆ ಹೇಗೆ ? ಚುಂಬನ ಮತ್ತು ಬೆತ್ತಲೆ—ಇವುಗಳ ಬಗ್ಗೆ ಫೋಟೋಗಳು ಬಂದರೆ ಎಲ್ಲರೂ ನೋಡುತ್ತಾರೆ. ಈಗ ಸಭೆಯಲ್ಲಿ ನಡೆಯುವ ಚರ್ಚೆ ಯಾರಿಗೂ ಬೇಕಿಲ್ಲವೆಂಬಂತೆ ಆಗಿದೆ ಏಕೆಂದರೆ ನಾವು ನೀವು ಕೂಡಿ ವಿಚಾರಮಾಡುವ ರೀತಿ ನ್ಯಾಯಬದ್ಧವಾಗಿರಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಮುಖ್ಯಮಂತ್ರಿಗಳು ಕಾಲೇಜು ವಿದ್ಯಾರ್ಥಿಗಳ ವಿಷಯವಾಗಿ ಹೇಳಿದರು. ನಾನು ಒಂದು ಉದಾಹರಣೆಯನ್ನು ಹೇಳಬೇಕಾಗಿದೆ. ಮೆಡಿಕಲ್ ಕಾಲೇಜು ಹಾಸ್ಟಲ್‌ನಿಂದ 110—115 ಬಿಲ್‌ಗಳು ಬರುತ್ತವೆ. ಅವನ್ನು ಹುಡುಗರು ಕೊಟ್ಟಿದ್ದಾರೆ. ಅಲ್ಲಿ ಯಾರೋ ಒಬ್ಬ ವಾರ್ಡನ್ ಏನು ಮಾಡಿದರೆಂದರೆ ಬೇರೆ ಬಿಲ್‌ಗಳು ಕೊಡಿ ಎಂದು ಹೇಳಿ ತಪ್ಪು ಲೆಕ್ಕಗಳನ್ನು ತೋರಿಸಿದ್ದಾರೆ. ಅವನನ್ನು ಅಲ್ಲಿ ತಗೆಯಬೇಕೆಂದು ಹುಡುಗರು ಏನೇನೋ ಬಂದೋಬಸ್ತು ಮಾಡಿದರು. ಇದುವರೆಗೆ ಏನೂ ಆಗಲಿಲ್ಲ. ಇದು ಮೌಲ್ಯಪ್ರವೃತ್ತಿ. ಆದ್ದರಿಂದ ನಿಜವಾಗಿ ಪ್ರಾಮಾಣಿಕ ಮೌಲ್ಯಗಳನ್ನು ಬೆಳೆಸುವುದರಲ್ಲಿ, ಉಳಿಸುವುದರಲ್ಲಿ ನಾವು ಪ್ರಮುಖರಾಗುತ್ತಾ ಇಲ್ಲ. ಪತ್ರಿಕೆಗಳವರು ಅವರಿಗೆ ಕಂಡ ರೀತಿಯಲ್ಲಿ ಇಂತಹ ವಿಷಯಗಳನ್ನು ಪ್ರಚಾರಮಾಡುತ್ತಾರೆ. ವಿಚಾರಕಾರಕದೃಷ್ಟಿಯಿಂದ ಅವರು ಆ ರೀತಿ ಹೇಳುತ್ತಾರೆ. ನಮ್ಮಲ್ಲಿ ನೇಕಡ 10ರಷ್ಟು ಪತ್ರಿಕೆಗಳನ್ನು ಓದುವವರು ಇದ್ದಾರೆ. ಅದ್ದರಿಂದ ಅಂತಹವರನ್ನು ರಂಜಿಸುವುದು ಅವರ ಕರ್ತವ್ಯವಾಗಿರುತ್ತದೆ. ಜನಸಾಮಾನ್ಯರಿಗೆ ಏನು ವಿಚಾರ ಕೊಡುವುದು, ಅವರಿಗೆ ಪ್ರಮುಖವಾದ ವಿಷಯ ಯಾವುದು ಎಂಬುದಾಗಿ ಹೇಳುವುದಕ್ಕೆ ತಯಾರಿಲ್ಲ. ಇದು ಒಂದು ಪ್ರಚಾರರಂಗ, ಖಾಸಗೀ ಕ್ಷೇತ್ರದಲ್ಲಿರತಕ್ಕದ್ದು. ಅವರಿಗೆ ಪತ್ರಿಕಾ ಸ್ವಾತಂತ್ರ್ಯವನ್ನು ಹರಣಮಾಡಬೇಕೆಂದಿಲ್ಲ. ಆ ಒಂದು ಸ್ವಾತಂತ್ರ್ಯವನ್ನು ಸದುಪಯೋಗಪಡಿಸಿಕೊಳ್ಳಬೇಕು. ಯಾವ ಒಂದು ದೃಷ್ಟಿಕೋನಕ್ಕೂ, ವಿಪರ್ಯಾಸಕ್ಕೂ ಅವನ್ನು ತಿದ್ದುವುದಕ್ಕೋಸ್ಕರ ಹೊಸ ಸಮಾಜವನ್ನು ತರುವುದಕ್ಕೋಸ್ಕರ ಆ ಒಂದು ಸ್ವಾತಂತ್ರವನ್ನು ಅವರು ಸದುಪಯೋಗಪಡಿಸಿಕೊಳ್ಳಬೇಕು. ಇವತ್ತು ಸರ್ಕಾರದಿಂದ ಈ ಮೌಲ್ಯಗಳನ್ನು ಸೃಷ್ಟಿಸಿಕೊಳ್ಳುವುದಕ್ಕೆ ನಿಮ್ಮ ಕೆಲಸ ಮಾಡಬೇಕು. ಅದರಲ್ಲಿಯೂ ಕೂಡ ಸಮಾಜವಾದಿ ವ್ಯವಸ್ಥೆಯನ್ನು ಎಲ್ಲರೂ ಒಪ್ಪಿಕೊಳ್ಳಬಹುದು. ಅವರಲ್ಲಿಯೂ ಸಮಾಜವಾದವನ್ನು ಒಪ್ಪಿಕೊಳ್ಳತಕ್ಕ ಜನ ಬಹುಸಂಖ್ಯಾತರಾಗಿದ್ದಾರೆ. ಇನ್ನು ರಾಷ್ಟ್ರದ ರಾಜಕಾರಣಿಗಳನ್ನು ಲೆಕ್ಕಹಾಕಿದರೆ ಸಮಾಜವಾದದ ಕಡೆಗೆ ಹೋಗುವವರು ಜಾಸ್ತಿ ಸಂಖ್ಯೆಯಲ್ಲಿ ಕಾಣುತ್ತಿದ್ದಾರೆ. ಅದರ ಪೂರಕವಾಗಿ ಪ್ರಚಾರ ಮಾಡುವಂತಹವರನ್ನು ಮಂತ್ರಿಮಂಡಲದಲ್ಲಿಯೂ ಇಟ್ಟುಕೊಳ್ಳಬೇಕು. ನಾವು ಆಚೆಗೆ ಹೋದ ಕೂಡಲೇ ಎಲ್ಲಿಂದರೋ ಒಂದು ದಂಡು ಬಂದು ಕೂತಿರುತ್ತದೆ. ಇನ್ನು ಮನೆಗೆ ಹೋದರೆ ಅಲ್ಲಿಯೂ ಒಂದು ದಂಡು ಬಂದಿರುತ್ತದೆ. ವರ್ತಮಾನ ಪತ್ರಿಕೆಗಳನ್ನು ನಾವು ಓದುವುದಕ್ಕೇ ಬಿಡುವುದಿಲ್ಲ. ನಾನು ಓದುವುದನ್ನು ಬಿಟ್ಟರೂ ನಾವು ಕೂತು ಏನಾದರೂ

(ಶ್ರೀ ಕಾಗೋಡು ತಿಮ್ಮಪ್ಪ)

ವಿಚಾರ ಮಾಡುವುದಕ್ಕೂ ಸಹ ಆಗುವುದಿಲ್ಲ. ಇದರಿಂದೇನಾಗಿದೆ ಅಂದರೆ ಎಲ್ಲಿಯಾದರೂ ಒಂದು ಜಮೀನು ಬೇಕೆಂದರೆ, ಮುಖ್ಯಮಂತ್ರಿಗಳಿಗೆ ಒಂದು ಅರ್ಜಿ, ಒಂದು ಟ್ರಾನ್ಸ್‌ಫರ್‌ಗೂ ಮುಖ್ಯ ಮಂತ್ರಿಗಳಿಗೆ ಒಂದು ಅರ್ಜಿ ಕೊಡುವುದೇ ಈಗ ಜಾಸ್ತಿಯಾಗಿದೆ. ಇದು ಸರಿಯಾದ ಮೌಲ್ಯಗಳಾಗುವುದಿಲ್ಲ. ಇದು ಇವತ್ತಿನ ಒಂದು ಕೆಟ್ಟ ಪರಿಸ್ಥಿತಿ ಬೆಳೆದಿದೆ. ಇದನ್ನು ಈಗ ಯಾರು ಬಿಡುವುದಿಲ್ಲ. ಸ್ವಲ್ಪ ಇದಕ್ಕಾಗಿ ನೀವು ಸ್ವತಂತ್ರವಾಗಿ ಕುಳಿತು ಯೋಚನೆ ಮಾಡುವುದಕ್ಕೆ ನಿಮಗೆ ಅವಕಾಶ ಸಿಕ್ಕಿದೆ. ಒಂದು ಕಾಲದಲ್ಲಿ ಚುನಾವಣೆಯಲ್ಲಿ ಹಿಂದುಳಿದಿರುವವರೇ ಜಾಸ್ತಿ ಇದ್ದಾರೆ. ಮಂತ್ರಿ ಮಂಡಲದಲ್ಲಿಯೂ ಬದಲಾವಣೆಯನ್ನು ಕಾಣುತ್ತಿದ್ದೇವೆ. ಈಗ ಭೂಮಿಕೆಯನ್ನು ಹಾಕಬೇಕು. ಅವರ ಬಗ್ಗೆ ವಿಶೇಷವಾಗಿ ಕೆಲಸಮಾಡುವ ಜನರೂ ಸಹ ಬೇಕು. ಈಗ ಅಂತಹ ಒಂದು ಭೂಮಿಕೆಯನ್ನು ಸಿದ್ಧಪಡಿಸುವುದಕ್ಕೆ ಒಂದು ಕಾರ್ಯಾಂಗ ಬೇಕಾಗಿದೆ. ಎಲ್ಲವನ್ನೂ ಸಹ ನೀವೇ ಮಾಡುವುದಕ್ಕಾಗುವುದಿಲ್ಲ. ನಿಮಗೆ ಈಗ ಅದಕ್ಕೆ ಅವಕಾಶವೇ ಇಲ್ಲ. ಇದರ ಬಗ್ಗೆ ಒಂದು ಭೂಮಿಕೆಯನ್ನು ಸಿದ್ಧಪಡಿಸುವ ಕಾರ್ಯ ಮಾಡದೇ ಹೋದರೆ ಇದು ನಿಜವಾಗಿ ಸರಿ ಹೋಗುವುದಿಲ್ಲ, ಇದನ್ನು ಮಾಡಿದರೆ ಮಾತ್ರ ಆಗ ಒಳ್ಳೆಯ ಸ್ಥಿತಿ ಉಳಿದೀತು ಮತ್ತು ಉತ್ತಮ ಪರಿಣಾಮ ಬಂದೀತು.

12 NOON

ಇಲ್ಲದೇ ಹೋದರೆ ಮೇಲೆಹತ್ತಿ ಕೆಳಕ್ಕೆ ದಬಕ್ ಅಂತ ತಳ್ಳಿಬಿಟ್ಟರೆ ಪಾತಾಳಕ್ಕೆ ಹೋಗಿಬಿಡಬೇಕಾಗುತ್ತದೆ. ಆದುದರಿಂದ ಈವೊತ್ತು ರಾಜ್ಯದಲ್ಲಿ ಪೊಲಿಟಿಕಲ್ ಸೀಕ್ರೆಟ್ ಏನು ಇದೆ ಅನ್ನುವುದನ್ನು ತಿಳಿದುಕೊಂಡು ಒಂದು ಹೊಸ ವಾತಾವರಣವನ್ನು ಉಂಟು ಮಾಡಿ ಜನರಲ್ಲಿ ಒಂದು ಪ್ರಜ್ಞೆ ಬೆಳೆಯುವುದಕ್ಕೆ ಅವಕಾಶವಾಗುವಂತೆ ಮಾಡಿಕೊಟ್ಟರೆ ಆವಾಗ ಇದಕ್ಕೆ ಪರಿಹಾರ ಕಂಡುಹಿಡಿಯುವುದಕ್ಕೆ ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಮುಖ್ಯಮಂತ್ರಿಗಳೂ ಕೂಡ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತಾರ ಮಾಡುವುದಕ್ಕೂ ಸಹ ಸಾಧ್ಯವಾಗುತ್ತದೆ. ಮತ್ತು ಇದಕ್ಕೆ ಸ್ವಲ್ಪ ಸಮಯ ಕೊಟ್ಟು ಎರಡುಗಂಟೆ ವಿಚಾರ ಮಾಡುವುದಕ್ಕೂ ಕೂಡ ಅವಕಾಶ ಮಾಡಿಕೊಳ್ಳಬಹುದು. ಈವಾಗ ಏನಾಗಿದೆ ಎಂದರೆ ಅವರು ಎಲ್ಲಿ ಹೋದರೆ ಅಲ್ಲಿ ಒಂದು ಹೊರೆ ಜನ ಬಂದು ಕಾದುಕೊಂಡು ಕುಳಿತಿರುತ್ತಾರೆ. ಇನ್ನು ನಮ್ಮ ಪಾಡು ಏನು ಆಗಿದೆ ಎಂದರೆ ನಾವು ರೂಮಿನಿಂದ ಬೆಳಗ್ಗೆ 6 ಗಂಟೆಗೆ ಎದ್ದರೆ ಆಗಲೇ ಜನ ಬಂದು ಕೂತುಕೊಂಡಿರುತ್ತಾರೆ, ಈ ಸದನಕ್ಕೆ ಬರಲಿ ಇಲ್ಲಿ ಒಂದು ಹೊರೆ ಜನ ಬಂದು ಕುಳಿತುಕೊಳ್ಳುತ್ತಾರೆ, ನಾವು ಎಲ್ಲೇ ಹೋಗಲಿ ಅಲ್ಲಿ ಒಂದು ಹೊರೆಜನ ಬಂದು ಕುಳಿತುಕೊಂಡಿರುತ್ತಾರೆ. ಈ ದೃಷ್ಟಿಯಿಂದ ನಾನು ಹೇಳುವುದು ಏನೆಂದರೆ ನಮಗೆ ಪ್ರತ್ಯೇಕವಾದ ಒಂದು ರೂಮನ್ನಾದರೂ ಕೊಡಿಸಿದರೆ ಅಲ್ಲಿ ಒಂದೆರಡು ಗಂಟೆಗಳ ಕಾಲ ಸ್ವಲ್ಪ ನೆಮ್ಮದಿಯಿಂದಾದರೂ ಈ ವಿಷಯಗಳ ಬಗ್ಗೆ ಓದಿಕೊಂಡಾದರೂ ಏನಾದರೂ ಭಾಷಣ ಮಾಡುವುದಕ್ಕೆ ಯೋಚನೆ ಮಾಡಬಹುದು. ಅದನ್ನು ಇನ್ನೂ ಮಾಡುವುದಕ್ಕಾಗಲಿಲ್ಲ. ಕೆಲವರು ಟ್ರಾನ್ಸ್‌ಫರ್ ಬಗ್ಗೆ ಬರುತ್ತಿರುತ್ತಾರೆ' ಇನ್ನು ಯಾವ್ಯಾವುದಕ್ಕೋ ಬರುತ್ತಾರೆ. ಹೀಗಾಗಿ ನಮ್ಮ ತಲೆ ಕೆಟ್ಟು ಹೋಗಿ ನಾವು ಏನೂ ಕೆಲಸಮಾಡುವುದಕ್ಕೆ ಅವಕಾಶ ಇಲ್ಲವಾಗಿದೆ. ಇನ್ನು ನಮಗೇ ಹೀಗಾದರೆ ನಿಮಗೆ ಹೇಗೆ ಆಗುತ್ತದೋ ನನಗೆ ಗೊತ್ತಿಲ್ಲ. ಅದಕ್ಕೋಸ್ಕರ ಈ ಬಗ್ಗೆ ವಿಶೇಷ ಆಸಕ್ತಿ ವಹಿಸಿ ಒಂದು ಪರಿಹಾರ ಕಂಡುಹಿಡಿಯಬೇಕು. ಈಗ ಪ್ರಜಾಪ್ರಭುತ್ವದಲ್ಲಿ ಏನಾಗಿದೆ ಎಂದರೆ ಹಿಂದುಳಿದವರ ಅಭಿವೃದ್ಧಿ ನೋಡಿದರೆ ಅದು ಕೆಲವೇ ವರ್ಗದವರಲ್ಲಿ ಆಗಿದೆ, ಆದುದರಿಂದ ನಾನು ಹೇಳುವುದು ಇದನ್ನು ಜನಗಣತಿ ಮಾಡಿಸಿ ಇದಕ್ಕೆ ಒಂದು ಪರಿಹಾರ ಕಂಡುಹಿಡಿದು ಅದಕ್ಕೆ ವಿಚಾರಬದ್ಧವಾದ ಒಂದು ಕಾರ್ಯಕ್ರಮವನ್ನು ರೂಪಿಸಿಕೊಂಡು ಹಿಂದುಳಿದ ವರ್ಗಕ್ಕೆ ಒಂದು ಪ್ರಾತಿನಿಧ್ಯ ಕೊಡಬೇಕು ಎಂದು ಹೇಳುತ್ತೇನೆ. ಈ ಹೆಳವರ ಜನಾಂಗವನ್ನು ಭುಜದ ಮೇಲೆ ಕೂಡಿಸಿಕೊಂಡು ಅವರನ್ನೂ ಸಹ ಒಂದು ಗುರಿಯನ್ನು ಮುಟ್ಟಿಸುತ್ತೀರಿ ಎಂದು ತಿಳಿದುಕೊಂಡು, ಮತ್ತು ಮಾನ್ಯ ಹನುಮೇಗೌಡರು ಈ ಜನಗಣತಿ ಬಗ್ಗೆ ಏನು ಒಂದು ನಿರ್ಣಯ ತೆಗೆದುಕೊಂಡು ಬಂದಿದ್ದಾರೋ ಅದನ್ನು ಈ ಸದನ ಸ್ವೀಕಾರ ಮಾಡಿ ಒಪ್ಪಿಗೆ ಕೊಡಬೇಕೆಂದು ತಮ್ಮಲ್ಲಿ ಒತ್ತಾಯಪೂರ್ವಕವಾಗಿ ಮನವಿ ಮಾಡಿಕೊಂಡು, ಅಧ್ಯಕ್ಷರು ಬಗ್ಗೆ ಮಾತನಾಡಲು ನನಗೆ ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ಕೃತಜ್ಞತೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ವೈ. ಪಾಟೀಲ್ (ಸಿಂದ್ಗಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸ್ನೇಹಿತರಾದ ಶ್ರೀಮಾನ್ ಕೆ. ಹೆಚ್. ಹನುಮೇಗೌಡರು ತಂದಿರತಕ್ಕಂಥ ಠರಾವನ್ನು ನಾನು ಅನುಮೋದಿಸುತ್ತಾ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ನನಗಂತೂ ಮಾನ್ಯ ಕಾಗೋಡು ತಿಮ್ಮಪ್ಪನವರ ಭಾಷಣವನ್ನು ಕೇಳಿದ ಬಳಿಕ ಒಂದು ವಿಷಯ ನನ್ನ ಮೇಲೆ ಪರಿಣಾಮವಾಗುತ್ತದೆ. ಈ ಜನಸಂಖ್ಯೆ ಬಲದ ಮೇಲಿಂದ ಒಂದು ಸಂಘಟನೆಯನ್ನು ಬಲ ಮಾಡುವುದಾಗಲಿ ಅಥವಾ ನಮ್ಮ ಸಾಮಾಜಿಕ ತೊಂದರೆಯನ್ನಾಗಲಿ ಪರಿಹಾರ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಯಾವಾಗಲೂ ಎಲ್ಲಿ ಅಜ್ಞಾನ ಇರುತ್ತದೋ, ಎಲ್ಲಿ ಅಶಕ್ತರು ಇದ್ದಾರೋ ಅವರನ್ನು ಜ್ಞಾನಿಗಳಾಗಿ ಸಶಕ್ತರನ್ನಾಗಿ ಮಾಡುವುದು ಗುಣಧರ್ಮ ಆದರೆ ಈವೊತ್ತು ದೇಶದಲ್ಲಿ ಏನಾಗಿದೆ ಎಂದರೆ ಯಾರಾದರೂ ಅನ್ಯಾಯ ಮಾಡುತ್ತಿದ್ದಾರೆ ಆ ಅನ್ಯಾಯವನ್ನು ಮಾಡಿಸಿಕೊಳ್ಳುವುದು ಮುಖ್ಯವೇ ಹೊರತು ಅನ್ಯಾಯ ಮಾಡಬಾರದು ಎಂದು ರಿಟ್ ಹಾಕಿದರೂ ಅದು ಬಗೆಹರಿಯುವುದಿಲ್ಲ. ಈವೊತ್ತಿನ ದಿವಸ ಮಾನ್ಯ ಕಾಗೋಡು ತಿಮ್ಮಪ್ಪನವರು ಒಂದು ಕ್ಯಾಲಿಕುಲೇಷನ್ ಮಾಡಿ, ದೇಶದಲ್ಲಿ 53 ಪರ್ಸೆಂಟ್ ಇಂಥಾ ಜನ ಇದ್ದಾರೆ ಅಂತ ಏನು ಹೇಳಿದರು ಅದಕ್ಕೆ ನಾನು ಹೇಳುತ್ತೇನೆ ಈವೊತ್ತಿನ ದಿವಸ ಈಡಿಗರೇ ಆಗಲಿ, ಲಿಂಗಾಯಿತರೇ ಆಗಲಿ, ಯಾರೇ ಆಗಲಿ, ಬ್ರಾಹ್ಮಣ ಸಮಾಜವೇ ಆಗಲಿ ಯಾವುದೇ ಜಾತಿ ಆಗಲಿ ಅವರ ಮೇಲೆ ರಿಟ್ ಹಾಕಿದರೂ ಸಹ ಈ ಸಮಸ್ಯೆ ಬಗೆಹರಿಯುವುದಿಲ್ಲ. ದೇಶದಲ್ಲಿ ಮುಖ್ಯವಾಗಿ ಆಗಿರುವ ಅನ್ಯಾಯ ಮಹಿಳಾ ವರ್ಗದ ಮೇಲೆ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಈವೊತ್ತಿನ ದಿವಸ ಹೆಣ್ಣುಮಕ್ಕಳು ಜಾಗೃತರಾದರೆ ಯಾವ ಪುರುಷರೂ ಅಸೆಂಬ್ಲಿಗೆ ಬರೋದಕ್ಕೆ ಸಾಧ್ಯವಿಲ್ಲ. ಅದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಿ. ಈವೊತ್ತು ನಾವು ವಿರೋಧಪಕ್ಷದಲ್ಲಿದ್ದರೂ ಕೂಡ ಈವೊತ್ತು ಭಾರತದೇಶದಲ್ಲಿ ಹೆಣ್ಣುಮಕ್ಕಳು ಪ್ರೈಮ್ ಮಿನಿಸ್ಟರ್ ಆಗಿರುವುದು ಇದೇ ಮೊದಲನೇ ಸಲ. ಅದೇ ರೀತಿಯಾಗಿ ಸಿಂಹಳ ದೇಶ ತೆಗೆದುಕೊಳ್ಳಿ, ಬೇರೆ ದೇಶಗಳನ್ನೇ ತೆಗೆದುಕೊಳ್ಳಿ. ಆ ರೀತಿಯಾಗಿ ಈವೊತ್ತಿನ ದಿವಸ ಹೆಣ್ಣುಮಕ್ಕಳು ಅಂಥಾ ಒಂದು ಸ್ಥಾನಕ್ಕೆ ಬರಬೇಕು ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಹೆಣ್ಣುಮಕ್ಕಳ ಮೇಲೆ ಅನ್ಯಾಯ ಮಾಡುವ ಯಾವ ವ್ಯಕ್ತಿ ಮೇಲಾಗಲಿ ಯಾವ ಕ್ಷೇತ್ರದಲ್ಲಿಯಾಗಲಿ ಅವರ ಕಣ್ಣು ತೆರೆಸಬೇಕಾದರೆ ನೀವು ಬಿಟ್ಟ ಬಾಣ ರಾಮಬಾಣದಂತಿರಬೇಕು. ಇಲ್ಲದೇ ಹೋದರೆ ಅದರ ಪರಿಣಾಮ ಎಲ್ಲಿಯೋ ಹೋಗುತ್ತದೆ. ಡಾ. ಅಂಬೇಡ್ಕರ್‌ರವರು ಹರಿಜನರ ಸಲುವಾಗಿ ಎಷ್ಟೋ ಪ್ರಯತ್ನ ಮಾಡಿದರು. ಆದರೆ ಅದನ್ನು ಎತ್ತಿ ಹಿಡಿದವರು ಮಹಾತ್ಮಾ ಗಾಂಧಿಯವರು. ಅವರ ಮೇಲೆ ಏನು ಪರಿಣಾಮವಾಯಿತು ಅನ್ನುವುದನ್ನು ನೋಡಿ. ಈ ಅನ್ಯಾಯದ ತಿಳುವಳಿಕೆ ಇದ್ದರೆ ಜಾತಿಶೋಷಣೆ ಆಗುವುದಿಲ್ಲ. ಉದಾಹರಣೆಗೆ ಒಬ್ಬ ಗ್ರಾಜುಯೇಟ್ ಹೆಣ್ಣುಮಗಳಿಗೆ ಮೆಟ್ರಿಕ್ಯುಲೇಟ್ ಆದ ಒಬ್ಬ ಗಂಡನಿದ್ದರೆ ಅಥವಾ ಒಬ್ಬ ಮೆಟ್ರಿಕ್ಯುಲೇಟ್ ಹೆಣ್ಣುಮಗಳಿಗೆ ಒಬ್ಬ ಗ್ರಾಜುಯೇಟ್ ತಮ್ಮ ಇದ್ದರೆ ಸ್ವಜಾತಿಯಾಗಿದ್ದರೂ ಕೂಡ ಅವರಲ್ಲಿ ಭಿನ್ನಾಭಿಪ್ರಾಯ ಇರುತ್ತದೆ ಎನ್ನುವುದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಈ ರಾಜ್ಯದಲ್ಲಿ 4 ಮಂದಿ ಲಿಂಗಾಯಿತರು ಆಗಲಿ 4 ಮಂದಿ ಬ್ರಾಹ್ಮಣರೇ ಆಗಲಿ ಮಂತ್ರಿಯಾದರೆ ಅದೇ ಜಾತಿಯವರು ಮುಂದೆ ಬರುತ್ತಾರೆ ಅನ್ನುವುದನ್ನು ನಾನು ಒಪ್ಪುವುದಿಲ್ಲ. ಏತಕ್ಕೆಂದರೆ ಸಮಾಜದಲ್ಲಿ ಆಗತಕ್ಕಂಥ ಅನ್ಯಾಯಗಳು ಬೇಕಾದಷ್ಟು ಇವೆ. ಲಿಂಗಾಯಿತರು ವಿಚಾರದಲ್ಲಿ ಈ ಬಗ್ಗೆ ಅಂಶಗಳು ನನ್ನಲ್ಲಿ ಇದೆ, ಬೇಕಾದರೆ ಸಿದ್ಧಮಾಡಿ ತೋರಿಸುತ್ತೇನೆ. ಯಾವುದೇ ವ್ಯಕ್ತಿ ಇದ್ದರೆ ಯಾವುದೇ ಜಾತಿ ಇದ್ದರೆ ಅವರಿಂದ ಆ ಜಾತಿಯಲ್ಲಿ ಸಮಾಜ ಕಲ್ಯಾಣ ಆಗುವುದಕ್ಕೆ ಸಾಧ್ಯವಿಲ್ಲ. ದೇಶದ ಕಲ್ಯಾಣವಾಗಬೇಕಾದರೆ ರಾಷ್ಟ್ರದ ಸಂಪತ್ತು ಬೆಳೆಯಬೇಕು. ಹಾಗೆಯೇ ಈ ಅನ್ಯಾಯವನ್ನು ಬಗೆಹರಿಸಬೇಕಾದರೆ ಸಾಕಷ್ಟು ಶಿಕ್ಷಣ ಆಗಬೇಕು. ಈವೊತ್ತು ಅಂಬೇಡ್ಕರ್‌ರವರು ಹರಿಜನರನ್ನು ಮುಂದೆ ತರುವುದಕ್ಕ ಬೇಕಾದಷ್ಟು ಪ್ರಯತ್ನ ಮಾಡಿದರು. ಈವೊತ್ತು ಕೊಲ್ಲಾಪುರದ ಮಹಾರಾಜರು ಮರಾಠಿಗರು. ಅವರು ಮುಂದಕ್ಕೆ ಬರಬೇಕಾದರೆ ಬರೋಡಾ ಮಹಾರಾಜರೇ ಕಾರಣರು ಎಂದು ಹೇಳುತ್ತೇನೆ. ಅದೇ ರೀತಿ ಇನ್ನೊಂದು ಉದಾಹರಣೆ ಕೊಡುವುದಾದರೆ ಈವೊತ್ತು ಹಳೇ ಮೈಸೂರಿನಲ್ಲಿ ಕುರುಬರ ಹಾಸ್ಟೆಲ್ಸ್ ಇವೆ. ಆದೇ ಉತ್ತರ ಕರ್ನಾಟಕದಲ್ಲಿ ಅಂಥಾ ಹಾಸ್ಟೆಲ್ ಎಲ್ಲೂ ನೋಡಲಿಲ್ಲ. ಯಾರು ಮೈಸೂರಿಗೆ ಬಂದರೂ ಅವರೆಲ್ಲರಿಗೂ ಪ್ರತಿಯೊಂದು ಜಾತಿಯಲ್ಲೂ ಹಾಸ್ಟೆಲ್ಸ್ ಇವೆ. ಬ್ರಾಹ್ಮಣರು ಎಂದರೆ ಹರಿಜನರು ಅಂತಲ್ಲ. ಅದನ್ನು ಸಿದ್ಧಮಾಡುತ್ತೇನೆ. ನಾವು ಈವೊತ್ತು ಬ್ರಾಹ್ಮಣರಾಗಿರಬಹುದು, ಹನುಮಂತಯ್ಯನವರು ಒಕ್ಕಲಿಗರಾಗಿರಬಹುದು. ರಾಚಯ್ಯನವರು ಮತ್ತು ಅಂಬೇಡ್ಕರ್‌ರವರು ಸಹ ಬ್ರಾಹ್ಮಣರು ಎಂದು ಸಿದ್ಧಮಾಡಿ ತೋರಿಸುತ್ತೇನೆ. ಬ್ರಾಹ್ಮಣ ಎಂದರೆ ಹುಟ್ಟಿನದಲ್ಲ. ಬ್ರಾಹ್ಮಣರ ಲಕ್ಷಣ ತಿಳುವಳಿಕೆ ಹೊಂದಿದ ಜನ ಎಂದು ಅರ್ಥ. ಆದುದರಿಂದ ಬ್ರಾಹ್ಮಣ ಅನ್ನುವುದು ಎಲ್ಲ ಜಾತಿಗೂ ಬರುತ್ತದೆ. ಯಾರಲ್ಲಿ ಅಜ್ಞಾನ ಇರುತ್ತದೋ ಅದು ಹರಿಜನರ ಲಕ್ಷಣ. ಈವೊತ್ತು ಹರಿ ಬರೆದ ಪುಸ್ತಕದಲ್ಲಿ ಇದನ್ನು ಕ್ಲಾಸಿಫಿಕೇಷನ್ ಮಾಡಬೇಕು. ಶ್ರೀಮಾನ್ ಡಿ. ದೇವರಾಜ

(ಶ್ರೀ ವೈ. ಎಸ್. ಪಾಟೀಲ್)

ಅರಸ್‌ರವರು ಹೇಳುತ್ತಾರೆ ಸಣ್ಣ ಸಮಾಜವಾದಿಗಳು ಮುಂದೆ ಬರಬೇಕು ಎಂದು. ಯಾವ ಜಾತಿಯವರು ಬಂದರೂ ಕೂಡ, ಯಾವ ಕ್ಷೇತ್ರದವರು ಬಂದರೂ ಕೂಡ ಅಶಕ್ತರ ಮೇಲೆ ಆಕ್ರಮಣ ನಡೆಯುತ್ತಿದೆ. ಈಪ್ರೊತ್ತು ಕಾಂಗ್ರೆಸ್ಸಿನ ಘೋಷಣೆ ಏನು ಇದೆ ನೋಡಿ. ಕಾಗೋಡು ತಿಮ್ಮಪ್ಪನವರು ಈಡಿಗರಾದರೂ ಅವರು ಬ್ರಾಹ್ಮಣರ ಮುಷ್ಟಿದಲ್ಲಿದ್ದಾರೆ. ಅವರು ತಾಲ್ಲೂಕಾ ಬೋರ್ಡ್ ಪ್ರೆಸಿಡೆಂಟರಾಗಿದ್ದಾರೆ, ಹಾಗೆಯೇ ಮಂಜುನಾಥ್‌ರವರು ತಾಲ್ಲೂಕಾ ಬೋರ್ಡ್ ಪ್ರೆಸಿಡೆಂಟರಾಗಿದ್ದಾರೆ. ಮತ್ತು ಈ ಸದನದಲ್ಲಿ ನಾಲ್ಕು ಜನ ಏಕೀಕರಣ ಸಮಿತಿಯವರು ಇದ್ದಾರೆ. ಹಾಗೆಯೇ ಹಿಂದೆ ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿದ್ದರು, ಶ್ರೀಮಾನ್ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದರು, ಶ್ರೀಮಾನ್ ಕಡಿದಾಳ್ ಮಂಜಪ್ಪನವರು ರೆವಿನ್ಯೂ ಮಂತ್ರಿಗಳಾಗಿದ್ದರು. ಆದರ ಲಿಂಗಾಯಿತರೇ ಹೆಚ್ಚು ಬರುತ್ತಿದ್ದಾರೆ ಅನ್ನುವುದನ್ನು ನಾವು ಒಪ್ಪುವುದಿಲ್ಲ. ಯಾವ ಜಾತಿಯವರು ಮುಂದೆ ಬಂದರೂ ಕೂಡ ಆ ಜಾತಿಯವರು ಮುಂದೆ ಬರುತಾತ್ತಾರೆ ಅನ್ನೋದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಉದಾಹರಣೆ ವಿಶ್ವೇಶ್ವರಯ್ಯನವರು ಬ್ರಾಹ್ಮಣರು, ಅವರು ಸಾಮಾನ್ಯ ಕುಲದಲ್ಲಿ ಹುಟ್ಟಿದಂಥಾವರು. ಅವರು ಕಾಲದಲ್ಲಿ ನಮ್ಮ ಬಿಜಾಪುರಕ್ಕೆ ಒಂದು ವಾಟರ್ ಸಪ್ಲೈ ಸ್ಕೀಂ ಮಾಡಿದರು. ಇದರಲ್ಲಿ ಜಾತಿ ಪ್ರಶ್ನೆ ಬರುವುದಿಲ್ಲ.

ಎರಡು ಜಾತಿಗಳು ನಮ್ಮಲ್ಲಿ ಇವೆ. ಒಂದು, ದೇಶದಲ್ಲಿ ಅಶಕ್ತರನ್ನು ಕಲ್ಯಾಣ ಮಾಡತಕ್ಕದ್ದು, ಇನ್ನೊಂದು ಅಶಕ್ತರನ್ನು ತುಳಿಯತಕ್ಕದ್ದು. ಜಗತ್ತಿನಲ್ಲಿ ಇದನ್ನು ಯಾರು ಮಾಡಿದರೂ ಅವರಿಗೆ ಶಾಸನ ಮಾಡ್ರಿ. ಲಿಂಗಾಯಿತರು ಮಾಡಿದ್ದರೆ ಅವರಿಗೂ ಶಾಸನ ಮಾಡ್ರಿ. ಮಾನ್ಯ ರಾಚಯ್ಯನವರು, ಬಸವಲಿಂಗಪ್ಪನವರು ಮುಂದೆ ಬಂದರೆ ಅವರ ಸಮಾಜವೇ ಮುಂದೆ ಬಂದ ಹಾಗಾಗುತ್ತದೆಯೇ ? ಇವತ್ತು ಹರಿಜನರು ನಮ್ಮ ಊರಲ್ಲಿ ಬಚ್ಚಲ ಮೋರಿಯ ನೀರನ್ನು ಕುಡಿಯುತ್ತಿದ್ದಾರೆ. ಅವರು ಬಾವಿಯ ನೀರನ್ನು ಕುಡಿಯಲಿಕ್ಕೆ ಇವತ್ತಿನವರೆಗೂ ಶಕ್ಯ ಇಲ್ಲ. ನೀವು ಎಷ್ಟೇ ಜನ ಮಂತ್ರಿಗಳು ಬಂದರೂ ಇವರನ್ನು ಸುಧಾರಿಸಲಿಕ್ಕೆ ಆಗುವುದಿಲ್ಲ. ಆದ್ದರಿಂದ ತಾವು ಸ್ಪಷ್ಟವಾಗಿ ಎಷ್ಟು ಜನ ನಿಜವಾಗಿಯೂ ಹಿಂದುಳಿದಿದ್ದಾರೆ, ಎನ್ನುವುದರ ಬಗ್ಗೆ ಸೆನ್ಸಸ್ ತೆಗೆದುಕೊಂಡು ಅವರಿಗೆ ನ್ಯಾಯವಾಗಿರತಕ್ಕ, ಅವಶ್ಯಕತೆಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಮುಖ್ಯವಾಗಿ ಅವರೆಲ್ಲರಿಗೂ ವಿದ್ಯಾಭ್ಯಾಸವನ್ನು ಕೊಡಬೇಕು. ಮಾನ್ಯ ಹನುಮೇಗೌಡರು ಈ ಠರಾವನ್ನು ತಂದಿರುವುದಕ್ಕೆ ನನ್ನ ಅಡ್ಡಿಯಿಲ್ಲ. ಯಾವ ಜಾತಿಯವರೇ ಇರಲಿ ಈಡಿಗರೇ ಇರಲಿ, ಲಿಂಗಾಯಿತರೇ ಇರಲಿ, ಬ್ರಾಹ್ಮಣರೇ ಇರಲಿ, ಅವರಿಗೆ, ಅವರ ಮುಂದಾಳುಗಳಿಂದ ನೇರವಾಗಿ ಅನುಕೂಲ ಆಗಲಿಕ್ಕೆ ಸಾಧ್ಯವಿಲ್ಲ. ನಮ್ಮ ಹೈದರಾಬಾದ್ ನಿಜಾಮರು ಇದ್ದ ಕಾಲದಲ್ಲಿ ಎಷ್ಟೋ ಮಂದಿ ಹಿಂದುಗಳು ಮುಂದುವರಿದಿದ್ದಾರೆ. ಆದ್ದರಿಂದ ಇದು ಜಾತಿಯ ಪ್ರಶ್ನೆಯಾಗಿ ಬರುವುದಿಲ್ಲ. ದೊಡ್ಡಮೀನು ಸಣ್ಣ ಮೀನನ್ನು ನುಂಗುವ ಹಾಗೆ, ಒಂದು ಜಾತಿಯಲ್ಲಿ ದೊಡ್ಡವರು ಸಣ್ಣವರನ್ನು ಉಪಯೋಗಿಸಿಕೊಂಡು ಅಧಿಕಾರ ನಡೆಸಿದ್ದಾರೆ. ಇನ್ನು ಮುಂದೆ ನಮ್ಮ ಹೆಂಗಸರು ಮುಂದೆ ಬರತಕ್ಕ ಕಾಲ ಬಂದಿದೆ. ಅವರು ಗಂಡಸರ ವಿರುದ್ಧ ನಿಲ್ಲುವಕಾಲ ಬಂದಿದೆ. ಹೆಂಗಸರು ಚುನಾವಣೆಗೆ ನಿಂತರೆ, ಗಂಡಸರೊಬ್ಬರು ಕ್ಯಾಬಿನೆಟ್‌ನಲ್ಲಿ ಇರಲಿಕ್ಕಾಗುವುದಿಲ್ಲ. ಇಂಗ್ಲೆಂಡಿನಲ್ಲಿ ಮೊದಲು ಹುಟ್ಟಿದ ಮಗು ಹೆಣ್ಣಾಗಲಿ, ಗಂಡಾಗಲೀ, ಅದಕ್ಕೆ ಹೆಚ್ಚಿನ ಪ್ರಾತಿನಿಧ್ಯ ಕೊಡುತಾರೆ. ಅದೇ ರೀತಿಯಲ್ಲಿ ಅಲ್ಲಿ ಮೊದಲು ಹುಟ್ಟಿದ ರಾಜನ ಮಗಳು ರಾಣಿಯಾಗಿದ್ದಾಳೆ. ಒಟ್ಟಿನಲ್ಲಿ ಈ ದೇಶ ಅಭಿವೃದ್ಧಿಯಾಗಬೇಕಾದರೆ,ಈ ದೇಶದ ಜನರು ಅಭಿವೃದ್ಧಿಯಾಗಬೇಕಾದರೆ, ಅವರಿಗೆ ಕಂಪಲ್ಸರಿ ಶಿಕ್ಷಣವನ್ನು ಕೊಡಬೇಕು, ನೀವು ಏನು ಕೊಡ್ರಿ ಏನು ಬಿಡ್ರಿ, ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡಿದರೆ ಸಾಕು. ಅವರ ಕಲ್ಯಾಣವಾಗುತ್ತದೆ.ಮತ್ತು ಸಮಾಜದ ಕಲ್ಯಾಣವೂ ಆಗುತ್ತದೆ. ಏಕದಂ ಇದನ್ನು ಮಾಡಲಿಕ್ಕಾಗುವುದಿಲ್ಲ. ಇದನ್ನು ತಮ್ಮ ದೃಷ್ಟಿಯಲ್ಲಿಟ್ಟುಕೊಂಡು, ಮಾನ್ಯ ಹನುಮೇಗೌಡರು ತಂದಿರತಕ್ಕ ನಿರ್ಣಯದ ಪ್ರಕಾರ, ತಾವು ನಮ್ಮ ಜನಗಳ ಸೆನ್ಸಸ್ ಮಾಡಬೇಕು. ಮಾಡಿದ ಮೇಲೆ ನಿಮ್ಮ ಲ್ಯಾಂಡ್ ರಿಫಾರಮ್ಸ್ ಪ್ರಕಾರ ಭೂಮಿ ಇಲ್ಲದವರಿಗೆ ಭೂಮಿ ಕೊಡಿ,ಇಂತಿಷ್ಟು ಜನಕ್ಕೆ ಉದ್ಯೋಗ ಕೊಡ್ರಿ, ಏನಾದರೂ ಕೆಲಸವನ್ನು ಕೊಟ್ಟು ದೇಶದ ಸಂಪತ್ತನ್ನು ಹೆಚ್ಚು ಮಾಡಿ ಎಂದು ಪ್ರಾರ್ಥನಾ ಮಾಡಿಕೊಳ್ಳುತ್ತೇನೆ. ಇದನ್ನು ತಾವು ಸಾಧನೆ ಮಾಡಬೇಕು. ಇದಕ್ಕೆ ಮುಖ್ಯವಾಗಿ ಮೀಡಿಯಂ ಆಫ್ ಎಜುಕೇಷನ್ ಬೇಕಾಗುತ್ತದೆ. ಒಂದೊಂದು ಜಿಲ್ಲಾದ ಸೆನ್ಸಸ್ ತೆಗೆದುಕೊಂಡು, ಒಂದೊಂದು ಜಿಲ್ಲೆಯಲ್ಲಿಯೇ ಹಿಂದುಳಿದ ಜನರಿಗೆ ವಿದ್ಯಾಭ್ಯಾಸ ಕೊಟ್ಟು, ಅವರನ್ನು ಮುಂದುವರಿಯುವಂತೆ ಮಾಡಬೇಕು. ಕೆಲವು ಕಡೆ ಹರಿಜನರನ್ನು ಸೇವ್ ಮಾಡುವುದಕ್ಕೂ ಜನರಿಲ್ಲ. ಇದನ್ನು ಮಾನ್ಯ ರಾಚಯ್ಯನವರು ಗಮನಿಸಬೇಕು. ಗಾಂಧೀಜಿಯವರು ಅವರಿಗೊಂದು

ಹೆಸರನ್ನು ಕೊಟ್ಟರು. ಆದರೆ ಇವತ್ತಿನ ದಿವಸ ಅವರ ಪರಿಸ್ಥಿತಿ ಏನಾಗಿದೆ? ಅವರನ್ನು ಸಮಾಜದಲ್ಲಿ ತುಳಿಯುತ್ತಿದ್ದಾರೆ. ಇದನ್ನು ಮಾನ್ಯ ತಿಮ್ಮಪ್ಪನವರು ವಿಚಾರ ಮಾಡಬೇಕು. ಇವರಿಗೆ ಲಿಂಗಾಯಿತರು ಅನ್ಯಾಯಮಾಡಿದ್ದರೆ, ಅವರಿಗೆ ಶಾಸನ ಮಾಡ್ರಿ, ಯಾರೇ ಅನ್ಯಾಯ ಮಾಡಿದರೂ ಅವರಿಗೆ ಶಾಸನ ಮಾಡ್ರಿ. ಅದಕ್ಕೆ ನನ್ನ ಅಡ್ಡಿ ಇಲ್ಲ. ಇವತ್ತು ಶಿಕ್ಷಕರನ್ನು ನೇಮಿಸಬೇಕಾದರೆ, ಬುದ್ಧಿವಂತರನ್ನೇ ನೇಮಿಸಬೇಕಾಗುತ್ತದೆ ಎಂದು ನನ್ನ ಅಭಿಪ್ರಾಯ. ಇದಕ್ಕೆ ಬ್ರಾಹ್ಮಣರನ್ನೇ ನೇಮಿಸಬೇಕಾಗುತ್ತದೆ. ನನ್ನ ದೃಷ್ಟಿಯಲ್ಲಿ ಬ್ರಾಹ್ಮಣರು ಎಂದರೆ, ಯಾರು ಬುದ್ಧಿವಂತರು ಇದ್ದಾರೋ ಅವರು ಬ್ರಾಹ್ಮಣರು. ಇವತ್ತು ನಮ್ಮ ಸೈಕಾಲಜಿ ಏನು ಇದೆ, ಅದನ್ನು ನಾವು ತಪ್ಪಿಸಬೇಕಾಗಿದೆ. ಡಾಕ್ಟರ್ ಅಂಬೇಡ್ಕರ್ ಅವರನ್ನು ನಾನು ಚೆನ್ನಾಗಿ ತಿಳಿದುಕೊಂಡಿದ್ದೇನೆ. ಎಂಥ ಬುದ್ಧಿವಂತರು ಇವರು ಹರಿಜನರಲ್ಲವೇ? ಇವರನ್ನು ನಾನು ಬ್ರಾಹ್ಮಣರು ಎಂದು ಹೇಳುತ್ತೇನೆ. ಆದ್ದರಿಂದ ನಾವು ದೇಶದಲ್ಲಿ ಸಂಸ್ಕೃತಿಯ ಕ್ರಾಂತಿಯನ್ನು ಮಾಡಬೇಕಾದರೆ, ಸಮಾಜದ ಒಂದು ಜಾತಿಯಲ್ಲಿ ಒಬ್ಬರು ಮುಂದೆ ಬಂದರೆ ಅದು ಸಾಧ್ಯವಿಲ್ಲ; ಅಥವಾ ಒಂದು ಜಾತಿಯಲ್ಲಿ ಅನೇಕ ಜನ ವಿದ್ಯಾವಂತರಾದರೂ ಸಾಧ್ಯವಿಲ್ಲ, ಎಲ್ಲರಿಗೂ ಉತ್ತಮವಾದಂಥ ವಿದ್ಯೆಯನ್ನು ಕೊಟ್ಟರೆ ಮಾತ್ರ ಇದು ಸಾಧ್ಯ. ನಿಜಲಿಂಗಪ್ಪನವರು, ದೇವೇಗೌಡರು ಮುಂದುವರಿದ್ದಾರೆಂದರೆ ಎಲ್ಲರೂ ಮುಂದೆ ಬಂದಿದ್ದಾರೆಂದು ತಿಳಿಯುವುದು ಅಲ್ಲ. ಆದ್ದರಿಂದ ನಾನು ಇಷ್ಟು ಹೇಳುತ್ತೇನೆ. ಹರಿಜನರಿಗೆ ಮತ್ತು ಗಿರಿಜನರಿಗೆ, ಅವರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಮುಂದುವರಿಯಲು ಕೇವಲ ಅವರಿಗೆ ರಿಸರ್ವೇಷನ್ ಕೊಟ್ಟರೆ ಸಾಲದು, ಅವರಿಗೆ ಸಾಕಷ್ಟು ಉತ್ತಮವಾದಂಥ ವಿದ್ಯಾಭ್ಯಾಸವನ್ನು ಕೊಟ್ಟು ಅವರನ್ನು ಮುಂದುವರಿಯುವಂತೆ ಮಾಡಬೇಕಾದದ್ದು ಸರ್ಕಾರದ ಕರ್ತವ್ಯ ಎಂದು ನನ್ನ ಅಭಿಪ್ರಾಯ. ಇದನ್ನು ನಮ್ಮ ಮುಖ್ಯಮಂತ್ರಿಗಳು ಚೆನ್ನಾಗಿ ತಮ್ಮ ಗಮನಕ್ಕೆ ತೆಗೆದುಕೊಳ್ಳಬೇಕು ಎಂದು ಪ್ರಾರ್ಥನಾ ಮಾಡುತ್ತೇನೆ. ಇಂಥ ಒಂದು ಶಿಸ್ತು ನಮ್ಮ ದೇಶದಲ್ಲಿ ಇರಬೇಕಾಗುತ್ತದೆ.

ಇವತ್ತು ಎಲ್ಲರಿಗೂ ಉತ್ತಮವಾದ ಶಿಕ್ಷಣ ಸಿಗಬೇಕು. ಆರೀತಿ ಸಿಕ್ಕಿದರೆ ಪ್ರತಿಯೊಬ್ಬರೂ 800 ರೂಪಾಯಿ ಸಂಬಳ ಪಡೆಯುವ ಅರ್ಹತೆ ಪಡೆಯುತ್ತಾರೆ. ಲಿಂಗಾಯತ್ತರು, ಬೇಡರು ಈಡಿಗರು, ಎಲ್ಲರಿಗೂ ಸ್ಥಾನಗಳನ್ನು ಕೊಡಬೇಕೆಂದು 16 ಸಿವಿಲ್ ಸರ್ಜನ್‌ಗಳನ್ನು ಪ್ರತಿಯೊಂದು ಜಾತಿಯಿಂದ ನೇಮಕ ಮಾಡಿ ಆಸ್ಪತ್ರೆಗಳಲ್ಲಿ ತಂದಿಟ್ಟರೆ ಅವರಿಂದ ಚಿಕಿತ್ಸೆ ಪಡೆದು ಸಾಯುವುದಕ್ಕೆ ಯಾವ ರೋಗಿಗಳು ತಯಾರಾಗಿದ್ದಾರೆ. ಕುರುಬ ಜನಾಂಗಕ್ಕೆ ಸೇರಿದ ಶ್ರೀ ಟಿ. ಮರಿಯಪ್ಪನವರು ನಮ್ಮ ರಾಜ್ಯದಲ್ಲಿ ಅರ್ಥಸಚಿವರಾಗಿ ಬಹಳ ಕೆಲಸ ಮಾಡಲಿಲ್ಲವೇ? ಒಕ್ಕಲಿಗ ಜನಾಂಗಕ್ಕೆ ಸೇರಿದ ಶ್ರೀ ಕೆ. ಹನುಮಂತಯ್ಯ ಅವರು ವಿಧಾನಸೌಧದಂತಹ ದೊಡ್ಡ ಕಟ್ಟಡ ಕಟ್ಟಿಸಲಿಲ್ಲವೆ? ಆದುದರಿಂದ ಪ್ರತಿಯೊಂದು ಜನಾಂಗದಲ್ಲೂ ಮೇಧಾವಿಗಳಾದವರು ಉನ್ನತ ಪದವಿಗಳನ್ನು ಪಡೆದು ರಾಜ್ಯಕ್ಕೆ ಸಹಾಯ ಮಾಡಿದ್ದಾರೆ. ತಹಸೀಲ್ದಾರರಿಗೆ 800ರೂಪಾಯಿ ಪಗಾರ ಇದ್ದು ಒಬ್ಬ ಜವಾನನಿಗೆ 900 ರೂಪಾಯಿ ಕೊಡುತ್ತೇವೆ ಎಂದರೆ ಎಲ್ಲರೂ ಜವಾನನ ಹುದ್ದೆಗೆ ಅಪ್ಲಿಕೇಷನ್ ಹಾಕುತ್ತಾರೆಯೋ ಹೊರತು ತಹಸೀಲ್ದಾರರ ಹುದ್ದೆಗೆ ಅಪ್ಲಿಕೇಷನ್ ಹಾಕುವುದಿಲ್ಲ. ಎಲ್ಲಿ ವರಮಾನ ಜಾಸ್ತಿ ಇದೆ ಅಲ್ಲಿಗೆ ಅಪ್ಲಿಕೇಷನ್ ಹಾಕುತ್ತಾರೆ. ನಮ್ಮಲ್ಲಿ ಕುಲಕರ್ಣಿ ಎಂಬ ಅಡ್ವೋಕೇಟ್ ಪೂನಾದೊಳಿಗೆ ಇದ್ದರು. ಅವರಿಗೆ ಪ್ರಾಕ್ಟೀಸ್ ಇಲ್ಲವೆಂದು ಹೇಳಿದಾಗ ಧೋಬಿ ಅಂಗಡಿ ಇಡಿಸಿ 2,000 ರೂಪಾಯಿ ಕೊಡಿಸಿದೆ. He is a rich fellow now. ಉಡುಪಿ ಹೋಟೆಲ್ ನಡೆಸುವವರು ಯಾವ ಮಿನಿಸ್ಟರಿಗಿಂತಲೂ ಕಡಿಮೆ ಇಲ್ಲ. ಅವರು ಅಷ್ಟು ರೊಕ್ಕ ಸಂಪಾದನೆ ಮಾಡುತ್ತಾರೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಏನು ಹೇಳಿದ್ದಾರೋ ಅದರ ಸ್ಪಿರಿಟ್ ತೆಗೆದುಕೊಳ್ಳಬೇಕು. ಯಾರು ಹಿಂದಿದ್ದಾರೆ ಅವರು ಮುಂದೆ ಬರಲು ಪ್ರಯತ್ನ ಮಾಡಬೇಕು. ಟಿಪ್ಪು ಸುಲ್ತಾನ್ ಮುಸಲ್ಮಾನ್ ಆಗಿದ್ದರೂ ಅವರಿಂದ ದೇಶದ ಕಲ್ಯಾಣವಾಗಿದೆ. ಅದೇ ರೀತಿ ವಿಶ್ವೇಶ್ವರಯ್ಯನವರು, ಅವರಿಂದ ದೇಶದ ಅಭಿವೃದ್ಧಿ ಆಗಿದೆ. ಯಾತರ ಹೂ ಆದರೂ ನಾತ ಇದ್ದರೆ ಸಾಕು. ವೀರಶೈವ ಮಹಾಸಭೆಗೆ ಸೇರಿದವರೆಂದು ಅವರನ್ನು ಪೋಲೀಸ್ ಆಫೀಸರ್ ಮಾಡಿದರೆ ಅವರಿಂದ ಏನು ಪ್ರಯೋಜನ ಆದೀತು. ಯಾರಿಗೆ ಗುನ್ಹೆ ತಪಾಸೆ ಮಾಡುವ ಕೆಪ್ಯಾಸಿಟಿ ಇದೆಯೋ ಅಂತವರನ್ನು ಪೋಲೀಸ್ ಆಫೀಸರನ್ನಾಗಿ ನೇಮಕ ಮಾಡಬೇಕು. ಶ್ರೀಮಂತಿ ನಾಗರತ್ನಮ್ಮನವರು ಹೆಣ್ಣುಮಗಳು. ಅವರಿಗೆ ಏಕೆ ಅಧ್ಯಕ್ಷರ ಪದವಿ ಕೊಟ್ಟರಿ? ಗಂಡಸರು ಯಾರೂ ಇರಲಿಲ್ಲವೆ? ಅವರಿಗೆ ಏತಕ್ಕೆ ಅಧ್ಯಕ್ಷರ ಪದವಿ ಕೊಡಬಾರದಾಗಿತ್ತು ಎಂದು ಕೇಳಬಹುದು. ಆದರೆ ಶ್ರೀಮತಿ ನಾಗರತ್ನಮ್ಮನವರಿಗೆ ಅನುಭವ ಇದೆ. ಅವರು ಫಾರಿನ್ ರಿಟರ್ನ್ ಇದ್ದಾರೆ. ಅವರಿಗೆ ಅಧ್ಯಕ್ಷರಾಗುವ ಅರ್ಹತೆ ಇದೆ. ಆದುದರಿಂದ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಸೈನ್ಯಕ್ಕೆ ಮುಖ್ಯಾಧಿಕಾರಿಗಳನ್ನು ನೇಮಿಸುವಾಗ ನಾವು

(ಶ್ರೀ ವೈ. ಎಸ್. ಪಾಟೀಲ್)

ಕೂರ್ಗಿಗೆ ಹೋಗುತ್ತೇವೆ. ಕಾರಿಯಪ್ಪ ಮುಂತಾದವರು ಕೂರ್ಗಿನಿಂದ ಬಂದವರು. ಅವರಿಗೆ ಯುದ್ಧ ಮಾಡುವ ಶಕ್ತಿ ಸಾಮರ್ಥ್ಯ ಇವೆ ಅವರನ್ನು ಸೈನ್ಯದ ಮುಖ್ಯಾಧಿಕಾರಿಗಳನ್ನಾಗಿ ಮಾಡಿದ್ದರು. ನಮ್ಮವರನ್ನು ಸೈನ್ಯದ ಮುಖ್ಯಾಧಿಕಾರಿಗಳನ್ನಾಗಿ ಮಾಡಬೇಕಾಗಿತ್ತು ಎಂದು ಹೇಳುವುದು ಸರಿಯಲ್ಲ. ದೇವರಾಜ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಾರೆಂದು ಹೊಟ್ಟೆಕಿಚ್ಚು ಪಟ್ಟರೆ ಆಗುತ್ತದೆಯೇ? ಅವರಿಗೆ ಜನರನ್ನು ಸಂಘಟಿಸುವ ಶಕ್ತಿ ಇದೆ. ರಾಜಕೀಯ ಮುಂದಾಳುಗಳಾಗಿದ್ದಾರೆ. ಆದುದರಿಂದ ಅವರನ್ನು ಮುಖ್ಯಮಂತ್ರಿಗಳನ್ನಾಗಿ ಮಾಡಿದ್ದಾರೆ. ನನಗೆ ವಯಸ್ಸು 62. ನಾನು ಹೋದ ಸಲ ನಮ್ಮ ಕ್ಷೇತ್ರದಿಂದ ಅಸ್ಸೆಂಬಿಗೆ ನಿಂತಾಗ ಅಲ್ಲಿಂದ ಸಣ್ಣ ವಯಸ್ಸಿನವರು ಆರಿಸಿ ಬರಲು ಅವಕಾಶ ಕೊಡಬೇಕೆಂದು ಲಿಂಗಾಯತರು ನಮ್ಮ ಪಕ್ಷದ ಮುಖಂಡರಿಗೆ ಡೆಪ್ಯುಟೇಷನ್ ಹೋದರು. ಆದರೆ ಅಸೆಂಬ್ಲಿಯಲ್ಲಿ ಹೆಣ್ಣುಮಕ್ಕಳನ್ನು ಕೂಡಿಸಿಕೊಂಡು ಹೋಗುವುದು ಏನಿದೆ ಅನುಭವದ ಮೇಲೆ ಕೊಡಬೇಕು, ಆದ್ದರಿಂದ ಎಸ್. ವೈ. ಪಾಟೀಲ್‌ರವರೇ ಇರಲೆಂದು ಹೇಳಿದರು. ನಾನು 52ನೇ ವಯಸ್ಸಿನಲ್ಲಿ ಬಿ. ಎ. ಪರೀಕ್ಷೆ ಪಾಸ್ ಮಾಡಿದ್ದೇನೆ. ನಾನಾದರೂ ಹೇಳುತ್ತೇನೆ. ಎಲ್ಲರಿಗೂ ಸರಿಯಾದ ಶಿಕ್ಷಣ ಕೊಡಬೇಕು. ಆಗ ಯಾವ ಜಾತಿಯೇ ಇರಲಿ ಅವರಲ್ಲಿ ಎಮಿನೆಂಟ್ ಡಾಕ್ಟರ್ಸ್, ಎಮಿನೆಂಟ್ ಪ್ಲೀಡರ್ಸ್, ಎಮಿನೆಂಟ್ ಇಂಜಿನಿಯರ್ಸ್ ಆಗುತ್ತಾರೆ. ಶ್ರೀಮಾನ್ ಶ್ರೀ ಕೆ. ವಿ. ಪುಟ್ಟಪ್ಪನವರು ಶಿವಮೊಗ್ಗಾ ಜಿಲ್ಲೆಯಲ್ಲಿ ಹುಟ್ಟಿ ರಾಷ್ಟ್ರಕವಿಗಳಾದರು. ಹಾಗೆಯೇ ದ. ರಾ ಬೇಂದ್ರೆಯವರು ಧಾರಾವಾಡದವರು. ಆದುದರಿಂದ ಈ ರೂಪಸೌಂದರ್ಯ, ಅಥವಾ ಶಕ್ತಿಸಾಮರ್ಥ್ಯಗಳು ಒಂದು ಭಾಗಕ್ಕೇ ಸೀಮಿತವಾಗಿರುವುದಿಲ್ಲ. ಅಥವಾ ಒಂದು ಜಾತಿಗೇ ಸೀಮಿತವಾಗಿರುವುದಿಲ್ಲ. ವೀರಶೈವ ಸಮಾಜಕ್ಕೆ ಕಲ್ಯಾಣವನ್ನು ಮಾಡಲಿಲ್ಲ, ದೇವರಾಜ ಅರಸ್‌ರವರು ಆ ರೀತಿ ಮಾಡುವುದಕ್ಕೆ ಶಕ್ಯ ಇಲ್ಲ. ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ಅವರು ಲಿಂಗಾಯತ ಜನಾಂಗಕ್ಕೆ ಅನುಕೂಲ ಮಾಡಿದ್ದಕ್ಕಿಂತ ಹೆಚ್ಚಿಗೆ ದೇವರಾಜ ಅರಸ್‌ರವರು ಅನುಕೂಲ ಮಾಡಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಆದುದರಿಂದ ಮಾನ್ಯ ಹನುಮೇಗೌಡರು ನಿರ್ಣಯದಲ್ಲಿ ಹೇಳಿದಂತೆ ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ಸಂಗ್ರಹ ಮಾಡಿ ಯಾರಿಗೆ ಹೆಚ್ಚು ಅನುಕೂಲವಾಗಿದೆಯೋ ಅವರನ್ನು ಬಿಟ್ಟು ಬಿಟ್ಟು ಯಾರಿಗೆ ಕಡಿಮೆ ಅನುಕೂಲವಾಗಿದೆಯೋ ಅಂಥವರಿಗೆ ಹೆಚ್ಚಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ ಈ ಠರಾವನ್ನು ಅನುಮೋದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

2-30 P.M.

† ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ).—ಸನ್ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಹನುಮೇಗೌಡರು ರಾಜ್ಯದ ಜನತೆಯ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿಯನ್ನು ಕೋಮುವಾರಾಗಿ ಗೊತ್ತುಮಾಡಲು ಅಂಕಿಅಂಶಗಳನ್ನು ಸಂಗ್ರಹ ಮಾಡಬೇಕು ಎಂದು ಏನು ಒಂದು ನಿರ್ಣಯವನ್ನು ತಂದಿದ್ದಾರೆ, ಅದನ್ನು ನಾನು ಸ್ವಾಗತಿಸುತ್ತಾ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಅದೃಷ್ಟವೋ ಅಥವಾ ನಮ್ಮ ದುರಾದೃಷ್ಟವೋ ತಿಳಿಯದು, ನಾವು ಈ ರಾಜ್ಯದಲ್ಲಿ ಹುಟ್ಟಿದ್ದೇವೆ. ಈ ರಾಜ್ಯದಲ್ಲಿ ಹಲವಾರು ಕೋಮುಗಳಿವೆ ಈ ಕೋಮುವಾದವನ್ನು ಹತ್ತಿಕಬೇಕು ಎಂಬ ಮಾತನ್ನು ಹಲವಾರು ಜನರು ಹಲವಾರು ವೇದಿಕೆಗಳಿಂದ ಹೇಳುತ್ತಿದ್ದಾರೆ. ಆದರೆ ನಮ್ಮ ದುರಾದೃಷ್ಟವೆಂದರೆ, ಈ ಒಂದು ಕೋಮುವಾದದ ಭೂತವನ್ನು ಹದೆಬಡಿಯಬೇಕೆಂದು ನಾವು ಎಷ್ಟು ಪ್ರಯತ್ನ ಮಾಡಿದರೂ ಸಹ ಅದು ಇನ್ನೂ ಹೆಚ್ಚು ಭಯಂಕರ ರೂಪದಲ್ಲಿ ತಲೆಯೆತ್ತಿ ನಿಲ್ಲುತ್ತಿದೆ. ಇದು ಒಂದು ಅಪಾಯ ಸೂಚಿಸತಕ್ಕ ಪರಿಸ್ಥಿತಿಯಾಗಿದೆ ಎಂದು ನಾನಾದರೂ ಭಾವಿಸುತ್ತೇನೆ. ನಮಗೆ ಸ್ವಾತಂತ್ರ್ಯ ಬಂದು 25 ವರ್ಷಗಳ ಮೇಲಾಯಿತು; ಆದರೂ ಇದನ್ನು ಹೋಗಲಾಡಿಸುವುದಕ್ಕೆ ಸಾಧ್ಯವಾಗಿಲ್ಲ; ಮಹಾತ್ಮಗಾಂಧಿಯವರು ಸ್ವಾತಂತ್ರ್ಯ ಬರುವುದಕ್ಕೆ ಮೊದಲಿನಿಂದಲೂ ಸಹ ಈ ದೇಶದಲ್ಲಿರುವ ಜಾತಿಗಳನ್ನು ತೊಡೆದುಹಾಕಿ, ಒಂದು ಸುಂದರವಾದಂಥ ಸಮಾಜವನ್ನು ನಿರ್ಮಾಣ ಮಾಡಬೇಕೆಂಬ ಬಗ್ಗೆ ಒಂದು ದೊಡ್ಡ ಆದರ್ಶವನ್ನು ಇಟ್ಟುಕೊಂಡು ತಮ್ಮ ಇಡೀ ಜೀವನವನ್ನು ಈ ಜಾತೀಯತೆಯ ಪಿಡುಗನ್ನು ಹೋಗಲಾಡಿಸುವುದಕ್ಕಾಗಿ ಹೋರಾಟ ಮಾಡಿದರು. ಮತ್ತು ದೇಶದಲ್ಲಿರುವ ಎಲ್ಲರೂ ಸಮಾನರಾಗಿರಬೇಕು ಮತ್ತು ಸ್ವತಂತ್ರರಾಗಿರಬೇಕೆಂಬ ದೃಷ್ಟಿಯಿಂದ ಹೋರಾಟ ಮಾಡಿದರು. ಅದೇ ರೀತಿ ಅವರ ಹಿಂಬಾಲಕರೂ ಸಹ ಹೋರಾಟ ಮಾಡಿದ ಫಲವಾಗಿ ಮತ್ತು ಅವರೆಲ್ಲರ ತ್ಯಾಗ ಮತ್ತು

ಪರಿಶ್ರಮದ ಫಲವಾಗಿ ನಾವು ಇಂದು ಸ್ವತಂತ್ರವಾದ ದೇಶದಲ್ಲಿ ಬಾಳುತ್ತಿದ್ದೇವೆ. ಆದರೆ ನಮಗೆ ಸ್ವಾತಂತ್ರ್ಯ ಬಂದಮೇಲೆ ನಮ್ಮ ರಾಷ್ಟ್ರಪಿತರು ಹಾಗೂ ರಾಷ್ಟ್ರನಾಯಕರು ಹೇಳಿದಂಥ ಮಾತನ್ನು ಮರೆತ್ತಿದ್ದೇವೆ. ಪುನಃ ನಾವು ಈ ಜಾತಿಯ ಒಂದು ಕೀಳು ಭಾವನೆಗೆ ಹೆಚ್ಚು ಪ್ರೋಷಣೆ ಕೊಡುತ್ತಾ ಈ ಸಮಾಜದಲ್ಲಿರತಕ್ಕಂಥ ಶಾಂತಿಯನ್ನು ಕಲಕುವ ಪರಿಸ್ಥಿತಿಯನ್ನು ಉಂಟುಮಾಡಿ ಕೊಂಡಿದ್ದೇವೆ. ಜೊತೆಗೆ ನಮ್ಮ ದುರ್ದೈವವೋ ಎಂಬಂತೆ, ಅದನ್ನು ನಾವು ಪ್ರತ್ಯಕ್ಷ ವಾಗಿ ಮತ್ತು ಪರೋಕ್ಷವಾಗಿ ಪೋಷಿಸಿ, ನಮ್ಮ ಮುಂದಿನ ಭವಿಷ್ಯ ಭಯಂಕರ ರೂಪ ವನ್ನು ತಳೆಯತಕ್ಕ ಪರಿಸ್ಥಿತಿಗೆ ಕೊಂಡೊಯ್ಯುವ ಸ್ಥಿತಿಗೆ ಹೋಗುತ್ತಿದ್ದೇವೆ. ನಾವೇನು ಒಕ್ಕಲಿಗರ ಜಾತಿಯಲ್ಲಿಯಾಗಲೀ ಲಿಂಗಾಯಿತರ ಜಾತಿಯಲ್ಲಾಗಲೀ, ಹರಿಜನರ ಜಾತಿಯಲ್ಲಾಗಲೀ ಹುಟ್ಟ ಬೇಕೆಂದು ಕೇಳಿಕೊಂಡು ಹುಟ್ಟಲಿಲ್ಲ. ನಮ್ಮ ಹುಟ್ಟು ಏಕೆ ಆಕಸ್ಮಿಕವಾದುದು; ಅದೇ ಸರ್ಕಾರದಲ್ಲಿ ಏನಾದರೂ ಕೆಲಸವಾಗಬೇಕು ಎಂದರೆ, ಯಾರಾದರೂ ಶಿಫಾರಸು ಮಾಡಿಸಿದರೆ ಆಗಬಹುದು; ಆದರೆ ಬ್ರಾಹ್ಮಣರಾಗಿಯೇ ಹುಟ್ಟಬೇಕು ಎಂದರೆ ಅದಕ್ಕೆ ಶಿಫಾರಸ್ ಮಾಡಿಸುವುದಕ್ಕಾಗುವುದಿಲ್ಲ; ಭಗವಂತ ನಮ್ಮನ್ನು ಒಂದು ಜಾತಿಯಲ್ಲಿ ಹುಟ್ಟಿಸಿದ್ದಾನೆ. ನಾವು ಅದನ್ನು ಒಳ್ಳೆಯದು ಎಂದು ಕರೆಯಬಹುದು, ಅಥವಾ ಕೆಟ್ಟದ್ದು ಎಂದು ಕರೆಯಬಹುದು; ಆದರೆ ಅದು ಮುಖ್ಯವಲ್ಲ; ಒಬ್ಬ ಮನುಷ್ಯನ ಗುಣಗಳನ್ನು ಕಂಡುಹಿಡಿಯಬೇಕಾದರೆ ಆತನ ಜಾತಿಯನ್ನು ಪರಿಗಣಿಸದೆ, ಆತನ ವ್ಯಕ್ತಿತ್ವ ಮತ್ತು ಆತನ ಚಾರಿತ್ರ್ಯವನ್ನು ಆಧರಿಸಿ ಕಂಡುಹಿಡಿಯಬೇಕಾಗಿದೆಯೇ ಹೊರತು, ಆತ ಆ ಜಾತಿಯಲ್ಲಿ ಹುಟ್ಟಿದ್ದಾನೆ, ಅದೇ ಮಹಾಪಾಪ ಎಂದು ಯಾರಾದರು ಹೇಳಿದರೆ, ಅದು ಅಸಹ್ಯ, ಅಸಭ್ಯ ಮತ್ತು ಖಂಡನೀಯವಾದುದು ಎಂದು ಹೇಳುತ್ತೇನೆ. ಇದು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ನಡೆಯುತ್ತಿದೆ. ಇದರಿಂದ ನಮ್ಮ ಈಗಿನ ಸಮಾಜಕ್ಕೆ ಅಷ್ಟೇ ಅಲ್ಲ, ಮುಂದಿನ ನಮ್ಮ ಪೀಳಿಗೆಗೂ ಸಹ ಗಂಡಾಂತರಕಾರಿಯಾದುದು ಎಂದು ವಿನಯಪೂರ್ವಕವಾಗಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇಂದು ನಾವು ಅಧಿಕಾರಿಗಳ ಅಂತರಂಗವನ್ನು ಒಳಹೊಕ್ಕು ನೋಡಿದರೆ ಇದು ಗೊತ್ತಾಗುತ್ತದೆ; ರಾಜಕೀಯದಲ್ಲಿ ಪ್ರಕಟಿತವಾಗಿ ಕಾಣುತ್ತದೆ. ಇನ್ನೂ ಮುಂದಕ್ಕೆ ಹೋದರೆ, ಶಿಕ್ಷಣ ಕ್ಷೇತ್ರದಲ್ಲಿ ಪಾಠ ಹೇಳಿಕೊಡತಕ್ಕಂಥ ಮತ್ತು ಮುಂದಿನ ಭಾವಿ ಜನಾಂಗವನ್ನು ತಯಾರು ಮಾಡತಕ್ಕಂಥ ಒಂದು ವರ್ಗದ ಜನರು ಯಾರಿದ್ದಾರೆ ಅವರಲ್ಲಿಯೂ ಸಹ ಈ ಒಂದು ಕಶ್ಮಲ ಇರುವು ದರಿಂದ ವಿದ್ಯಾರ್ಥಿಗಳು ಸಹ ಅದನ್ನೇ ಅನುಕರಣೆ ಮಾಡುವುದು ಒಂದು ಪ್ರವೃತ್ತಿಯಾಗಿಬಿಟ್ಟಿದೆ. ಮತ್ತು ಇಂತಹ ಒಂದು ಭಾವನೆಗಳು ಆಳವಾಗಿ ಬೆಳೆದುಕೊಂಡು ಬರುತ್ತಿದೆ. ಇಂತಹ ಭಾವನೆ ಗಳನ್ನು ಬೆಳೆಸತಕ್ಕಂಥ ಪ್ರವೃತ್ತಿ ಏನಿದೆ, ಇದಕ್ಕಿಂತ ದೇಶದ್ರೋಹ ಬೇರೆ ಇಲ್ಲ ಎಂದು ಹೇಳುತ್ತೇನೆ. ಇನ್ನು ಮುಂದೆ ಯಾರಾದರೂ ಜಾತಿಯ ಹೆಸರನ್ನು ಹೇಳಿದರೆ ಅವರ ನಾಲಗೆಯನ್ನು ಕತ್ತರಿಸು ವಂತಹ ಒಂದು ಶಾಸನವನ್ನು ಮಾಡಿ, ಅದನ್ನು ನಾನು ಒಪ್ಪುತ್ತೇನೆ. ಮುಖ್ಯವಾಗಿ ಮನು ಷ್ಯನ ಯೋಗ್ಯತೆಯನ್ನು ಅಳೆಯುವಾಗ ಆತನ ಶೀಲ, ಚಾರಿತ್ರ್ಯ ನೋಡಿ ಪುರಸ್ಕಾರ ಕೊಡಬೇಕೇ ಹೊರತು, ಆತ ಮೇಲು ಜಾತಿಯಲ್ಲಿ ಹುಟ್ಟಿದ್ದಾನೆ, ಅದಕೋಸ್ಕರ ಮೇರೆತ್ತಬೇಕು ಎಂದು ಹೇಳುವು ದಾಗಲೀ, ಆತ ಕೀಳುಜಾತಿಯಲ್ಲಿ ಹುಟ್ಟಿದ್ದಾನೆ, ಅದಕೋಸ್ಕರ ತುಳಿಯಬೇಕು ಎಂದು ಹೇಳುವು ದಾಗಲೀ ಸರಿಯಲ್ಲ; ಇಂದು ಹಿಂದುಳಿದ ಜನಾಂಗಗಳು ಏನಿವೆ, ಅವುಗಳನ್ನು ಒಂದು ಘಟಕವಾಗಿ ತೆಗೆದುಕೊಂಡು ನೋಡಿದರೆ, ಆ ವ್ಯಕ್ತಿ ಬಹುತೇಕ ಜನರು ಹಿಂದುಳಿದಿದ್ದಾರೆ. ಉದಾಹರಣೆಗೆ ಶ್ರೀಮಾನ್ ದೇವರಾಜ ಅರಸ್ ಅವರು ಒಂದು ಪ್ರತಿಷ್ಠಿತ ಸ್ಥಾನದಲ್ಲಿ ಇದ್ದರೆ, ಆದರಿಂದ ಇಡೀ ಅರಸು ಜನಾಂಗಕ್ಕೆ ಅನುಕೂಲವಾಗಿಲ್ಲ. ಏನಾದರು ಅನುಕೂಲವಾಗಿದ್ದರೆ ಅವರ ದೂರದ ಮತ್ತು ಹತ್ತಿರದ ಸಂಬಂಧಿಗಳಿಗೆ ಮತ್ತು ಆತ್ಮೀಯ ಸ್ನೇಹಿತರುಗಳಿಗೆ ಆಗಿರಬಹುದು ಅಷ್ಟೆ; ಅದೇ ರೀತಿ ಹಿಂದೆ ಒಕ್ಕಲಿಗರ ವ್ಯಕ್ತಿ ಯಾರಾದರೂ ಮುಖ್ಯಮಂತ್ರಿಗಳಾಗಿದ್ದರೆ ಅವರ ಜಾತಿಯ ನಾಲ್ಕೈದು ಕುಟುಂಬಗಳಿಗೆ ಅನುಕೂಲವಾಗಿರಬಹುದೇ ಹೊರತು ಎಲ್ಲರಿಗೂ ಅನುಕೂಲವಾಗಿಲ್ಲ. ಹಿಂದಿನ ಚರಿತ್ರೆಗಳನ್ನು ತೆಗೆದು ನೋಡಿದರೆ ಗೊತ್ತಾಗುತ್ತದೆ. ಮಾನ್ಯ ರಾಚಯ್ಯನವರು ಮಂತ್ರಿಗಳಾಗಿರುವುದರಿಂದ ಅವರ ಸುತ್ತಮುತ್ತಲಿನ ಜನರಿಗೆ ಅನುಕೂಲವಾಗಿರಬಹುದೇ ಹೊರತು, ಇನ್ನೂ ಎಷ್ಟೋ ಜನ ಹರಿಜನರು ಇಂದು ಅಂಧಕಾರದಲ್ಲಿಯೇ ಮುಳುಗಿದ್ದಾರೆ. ಅದೇ ರೀತಿ ಹಳ್ಳಿಯಿಂದ ಬಂದಂಥ ಯಾರಾದರೂ ಐ.ಎ.ಎಸ್. ಅಧಿಕಾರಿಯಾದರೆ ಮುಂದೆ ಆ ಅಧಿಕಾರಿ ತನ್ನ ಮಕ್ಕಳಿಗೆ ಶಿಕ್ಷಣವನ್ನು ನರ್ಸರಿಯಿಂದ ಹಿಡಿದು ಮೇಲ್ಮಟ್ಟದ ಶಿಕ್ಷಣವನ್ನು ಕೊಡಿಸುವವರೆಗೆ ಪಟ್ಟಣ ದಲ್ಲಿಯೇ ಇರುತ್ತಾರೆಯೇ ಹೊರತು ಹಳ್ಳಿಯ ಕಡೆಗೆ ಹೋಗುವುದಿಲ್ಲ.

ಹಲವರು ತಮ್ಮ ಜನಾಂಗದ ಹೆಸರಿನಲ್ಲಿ ಸ್ವಾರ್ಥ ಸಾಧನೆ ಮಾಡಿಕೊಳ್ಳುತ್ತಾರೆ. ಕೆಲವು ರಾಜಕಾರಣಿಗಳೂ ಹಾಗೇನೆ ಸ್ವಾರ್ಥ ಸಾಧನೆ ಮಾಡಿಕೊಳ್ಳುತ್ತಾರೆ. ಇದೇರೀತಿ ಎಲ್ಲಾ ಕ್ಷೇತ್ರ ಗಳಲ್ಲಿಯೂ ಸ್ವಾರ್ಥಿಗಳು ಇದ್ದಾರೆ. ಜಾತಿಯ ಹೆಸರನ್ನು ಹೇಳುತ್ತಾರೆ. ತಮ್ಮ ಸ್ವಾರ್ಥ ಸಾಧನೆ

(ಶ್ರೀ ಎಚ್. ಟಿ. ಕೃಷ್ಣಪ್ಪ)

ಮಾಡಿಕೊಳ್ಳುತ್ತಾರೆ. ಇಂಥವರ ವಿರುದ್ಧ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ಎಲ್ಲಾ ಜಾತಿಯಲ್ಲಿಯೂ ಒಳ್ಳೆಯವರೂ ಇದ್ದಾರೆ ಕೆಟ್ಟವರೂ ಇದ್ದಾರೆ. ನಾನು ಮಾನ್ಯ ಅಧ್ಯಕ್ಷರ ಮೂಲಕ ಮನವಿ ಮಾಡಿಕೊಳ್ಳುತ್ತೇನೆ. ಜಾತಿಯ ವಿಚಾರವನ್ನು ನಾವು ಗಣನೆಗೆ ತೆಗೆದುಕೊಂಡು ವಾತಾವರಣವನ್ನು ಕಲುಷಿತ ಮಾಡತಕ್ಕದ್ದು ಸಾಧುವಲ್ಲ ಎಂದು ನಾನು ವಿನಯ ಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈಗ ಶ್ರೀಮಾನ್ ಕೆ. ಎಚ್. ಹನುಮೇಗೌಡರು ಈ ಸಭೆಯ ಮುಂದೆ ತಂದಿರತಕ್ಕ ನಿರ್ಣಯ ಈಗ ಬಹಳ ಅವಶ್ಯಕವಾಗಿದೆ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಹೇಳಿದರು ಸ್ವಾತಂತ್ರ್ಯ ಚಳುವಳಿಯಲ್ಲಿ ಮುಂಚೂಣಿಯಲ್ಲಿದ್ದಂತಹ ಜನ ಎಲ್ಲಾ ಕಬಳಿಸಿದರು ಎಂದು. ಸ್ವಾತಂತ್ರ್ಯ ಪೂರ್ವ ಆದಂತಹ ಘಟನೆ ಮತ್ತು ಸ್ವಾತಂತ್ರ್ಯ ಬಂದ ನಂತರ ನಡೆದಿರತಕ್ಕ ಘಟನೆಗಳು ನಮಗೆ ಗೊತ್ತಿದೆ. ಸ್ವಾತಂತ್ರ್ಯದ ಹೋರಾಟದಲ್ಲಿ ಸ್ವಾಭಾವಿಕವಾಗಿ ಆಗ ಮುಂದೆ ಇದ್ದಂತಹ ಜನ ಮುಂದಕ್ಕೆ ಹೋದರು. ನಮಗೆ ಸ್ವಾತಂತ್ರ್ಯ ಬಂದಂತಹ ಸಂದರ್ಭದಲ್ಲಿ ಶ್ರೀಮಾನ್ ಕೆ. ಸಿ. ರೆಡ್ಡಿಯವರು ಎಂ. ಪಿ. ಸಿ. ಸಿ. ಅಧ್ಯಕ್ಷರಾಗಿದ್ದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಅವರು ಹೆಚ್ಚು ಭಾಗವಹಿಸುತ್ತಿದ್ದರು. ಆದ್ದರಿಂದ ಅವರು ಮುಖ್ಯ ಮಂತ್ರಿಗಳಾದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಯಾರು ತ್ಯಾಗಮನೋಭಾವನೆಯಿಂದ ಸ್ವಾತಂತ್ರ್ಯದ ಗುರಿಯನ್ನಿಟ್ಟುಕೊಂಡು ಉಳಿದದ್ದನ್ನು ಗೌಣವಾಗಿಟ್ಟುಕೊಂಡು ದುಡಿದಂತಹವರಿಗೆ ಸ್ವಾಭಾವಿಕವಾಗಿ ಅಧಿಕಾರಸ್ಥಾನಗಳು ಸಿಕ್ಕಿದವು. ಅದಕ್ಕಾಗಿ ನಾವು ಅಸೂಯೆ ಪಡಬೇಕಾಗಿಲ್ಲ. ಶ್ರೀಮಾನ್ ಕೆ. ಸಿ. ರೆಡ್ಡಿಯವರು ಆಗ ಎಂ. ಪಿ. ಸಿ. ಸಿ. ಅಧ್ಯಕ್ಷರಾಗಿದ್ದರು. ಆದ್ದರಿಂದ ಅವರೇ ಮುಖ್ಯ ಮಂತ್ರಿಗಳಾದರು. ಅದು ಆಕಸ್ಮಿಕ ಘಟನೆ. ಶ್ರೀಮಾನ್ ಚನ್ನಯ್ಯನವರು ಕಾಂಗ್ರೆಸ್ ಸಂಸ್ಥೆಯನ್ನು ಕಟ್ಟಿ ಬೆಳೆಸಿದರು. ಆದ್ದರಿಂದ ಆಗ ಅವರು ಪ್ರತಿಷ್ಠಿತ ವ್ಯಕ್ತಿಗಳಾಗಿದ್ದರು. ಆದರೂ ಅವರು ಮಂತ್ರಿಗಳಾಗಲಿಲ್ಲ. ಅವರು ಎಷ್ಟೋ ಜನಗಳನ್ನು ಮಂತ್ರಿಗಳನ್ನಾಗಿ ಮಾಡಿದರು. ಶ್ರೀಮಾನ್ ಕೆ. ಟಿ. ಭಾಷ್ಯಂ ಅವರು ಅನೇಕ ವರ್ಷಗಳ ಕಾಲ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದರು. ಶ್ರೀಮಾನ್ ನಿಜಲಿಂಗಪ್ಪನವರು ವಕೀಲರಾಗಿದ್ದರು. ಅವರು ಈ ಸ್ವಾತಂತ್ರ್ಯದ ಹೋರಾಟದ ಕಾಲದಲ್ಲಿ ಸನ್ನದನ್ನು ಕಳೆದುಕೊಂಡರು. ಆಗ ಅವರಿಗೆ ಆಸ್ತಿಪಾಸ್ತಿ ಏನೂ ಇರಲಿಲ್ಲ. ಜೀವನ ಮಾಡುವುದಕ್ಕೇ ಕಷ್ಟವಾಗಿತ್ತು. ಆಗ ಅವರ ಹೆಂಡತಿ ಮಕ್ಕಳನ್ನು ಯಾರು ಯಾರೋ ಪೋಷಣೆ ಮಾಡಿದ್ದಾರೆ. ಆ ಕಾಲದಲ್ಲಿ ಅವರಿಗೆ ನಾವು ಅಧಿಕಾರಕ್ಕೆ ಬರುತ್ತೇವೆ ಎನ್ನುವ ನಂಬಿಕೆ ಇತ್ತೋ ಇಲ್ಲವೋ ಗೊತ್ತಿಲ್ಲ. ಆಕಸ್ಮಿಕವಾಗಿ ಅವರು ಅಧಿಕಾರಸ್ಥಾನಕ್ಕೆ ಬಂದಿದ್ದಾರೆ. ಆ ಸಮಯದಲ್ಲಿ ಅಧಿಕಾರದಲ್ಲಿ ಇದ್ದಂತಹವರು ಒಬ್ಬಿಬ್ಬರು ಅವರ ಅಧಿಕಾರದಿಂದ ದುರ್ಲಾಭ ಪಡೆದುಕೊಂಡಿರಬಹುದು. ನಾನು ಅದನ್ನು ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಹೇಳಿದರು ಯಾವ ಕೋಮಿನವರು ಮಂತ್ರಿಗಳಾಗಿರುತ್ತಾರೆಯೋ ಆ ಕೋಮಿನವರೇ ಹೆಚ್ಚಾಗಿ ಅವರ ಹತ್ತಿರ ಹೋಗಿ ಅವರ ಮೂಲಕ ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳುತ್ತಾರೆ ಎಂದು ಹೇಳಿದರು. ಅದು ಹಿಂದಿನಿಂದ ನಡೆದುಕೊಂಡು ಬಂದಿರತಕ್ಕ ಸಂಪ್ರದಾಯ. ಈಗ ಮಂಡ್ಯ ಜಿಲ್ಲೆ ನನ್ನ ಜಿಲ್ಲೆ. ಅಲ್ಲಿಯ ಹರಿಜನರು ಯಾರಾದರೂ ಒಂದು ಅನುಕೂಲ ಪಡೆಯಬೇಕು ಎಂದರೆ, ಯಾರಾದರೂ ಒಬ್ಬರಿಗೆ ನ್ಯಾಯ ದೊರಕಿಸಬೇಕು ಎಂದರೆ ಅವರು ಶ್ರೀಮಾನ್ ಹುಚ್ಚಮಾಸ್ತಿಗೌಡರ ಹತ್ತಿರ ಹೋಗುವುದಿಲ್ಲ. ಶ್ರೀಮಾನ್ ಕೃಷ್ಣ ಅವರ ಹತ್ತಿರ ಹೋಗುವುದಿಲ್ಲ. ಶ್ರೀಮಾನ್ ಮಲ್ಲಿಕಾರ್ಜುನಸ್ವಾಮಿಯವರ ಹತ್ತಿರ ಹೋಗುತ್ತಾರೆ. ಅದಕ್ಕೆ ಕಾರಣ ಇಷ್ಟೇ ಹಿಂದಿನಿಂದ ನಡೆದುಕೊಂಡು ಬಂದಿರತಕ್ಕ ಪದ್ಧತಿ ಅದು. ಅದಕ್ಕೆ ನಾವು ಜವಾಬ್ದಾರರಲ್ಲ. ಬರತಕ್ಕ ಜನ ಅದೇ ಜಿಲ್ಲೆಯ ಶ್ರೀಮಾನ್ ಕೃಷ್ಣ ಅವರ ಹತ್ತಿರ ಹೋದರೆ ಅವರು ಬೇಡ ಎಂದು ಹೇಳುವುದಿಲ್ಲ. ಜನರ ಪ್ರವೃತ್ತಿ ಮನೋಧರ್ಮ ಆ ರೀತಿ ಬೆಳೆದುಕೊಂಡು ಬಂದಿದೆ. ಅದನ್ನು ಒಂದು ನಿರ್ದಿಷ್ಟವಾದ ರೀತಿಯಲ್ಲಿ ಬದಲಾವಣೆ ಮಾಡಿಕೊಂಡು ಹೋಗದ ಹೊರತು ಜಾತಿ ಜಾತಿ ಎನ್ನತಕ್ಕಂಥಾ ಮಾತುಗಳನ್ನು ಪದೇ ಪದೇ ಆಡಿ ಒಂದು ಕಲುಷಿತ ವಾತಾವರಣವನ್ನುಂಟು ಮಾಡತಕ್ಕದ್ದು ಸರಿಯಾದ್ದಲ್ಲ. ಜಾತಿಯ ಆಧಾರದ ಮೇಲೆ ಏತಕ್ಕೆ ಅಂಕಿ ಅಂಶಗಳನ್ನು ಸಂಗ್ರಹಿಸಬೇಕಾಗಿದೆ ಎನ್ನುವುದಕ್ಕೆ ಎರಡು ಕಾರಣಗಳು ಇವೆ. ಮೊದಲನೆಯದು ನಮಗೆ ಸ್ವಾತಂತ್ರ್ಯ ಬಂದ ನಂತರ ಸ್ವಾತಂತ್ರ್ಯದ ಚಳುವಳಿಯಲ್ಲಿ ಮುಂಚೂಣಿಯಲ್ಲಿದ್ದವರು ಸ್ವಾತಂತ್ರ್ಯಕ್ಕಾಗಿ ತ್ಯಾಗ ಮಾಡಿ ಸೇವೆ ಮಾಡಿದ ಜನ ಯಾರಿದ್ದರು ಅಂಥವರು ಅಧಿಕಾರವನ್ನು ಪಡೆದರು. ಅವರು ಬಹುಸಂಖ್ಯಾತ ಪಂಗಡಕ್ಕೆ ಸೇರಿದವರಾಗಿರಬಹುದು ಅಥವಾ ಅಲ್ಪ ಸಂಖ್ಯಾತ ಪಂಗಡಕ್ಕೆ ಸೇರಿದವರಾಗಿರಬಹುದು. ಈಗ ಕೆ. ಟಿ. ಭಾಷ್ಯಂ ಅವರು ಅಲ್ಪ ಸಂಖ್ಯಾತ ಕೋಮಿಗೆ ಸೇರಿದವರಾಗಿದ್ದರು. ಅವರು ತ್ಯಾಗ ಮನೋಭಾವದಿಂದ ದೇಶಕ್ಕಾಗಿ ಹೋರಾಟ ಮಾಡಿದ್ದಾರೆ. ಅಂಥವರಿಗೆ ಆಗ ಸ್ಥಾನಮಾನಗಳು ಸಿಕ್ಕಿವೆ,

ಆದರೆ ಒಂದು ದುರ್ದೈವ ಸಂಗತಿ ಎಂದರೆ ಇತ್ತೀಚಿನ ವರ್ಷಗಳಲ್ಲಿ ಒಕ್ಕಲಿಗರು ದೇಶದ ಆಡಳಿತವನ್ನು ನಡೆಸಿದರು. ಆಗ ಅವರು ಎಲ್ಲಾ ತಮ್ಮವರಿಗೇ ಎಲ್ಲಾ ಸೌಲಭ್ಯಗಳನ್ನೂ ಎಲ್ಲಾ ಸವಲತ್ತುಗಳನ್ನೂ ಕೊಟ್ಟರು. ಬೇರೆ ಕೋಮುಗಳನ್ನು ಪೂರ್ಣವಾಗಿ ತುಳಿದು ನಿರ್ಲಕ್ಷ್ಯ ಮಾಡಿದರು ಎನ್ನುತಕ್ಕಂಥಾ ವಾದ ಇದೆ. ಅನಂತರ ಲಿಂಗಾಯಿತರು ದೇಶದ ಆಡಳಿತವನ್ನು ನಡೆಸಿದರು. ಅವರು ಕೋಮಿನವರಿಗೇ ಎಲ್ಲಾ ಸೌಲಭ್ಯ ಮತ್ತು ಸವಲತ್ತುಗಳನ್ನೂ ಕೊಟ್ಟರು, ಇತರ ಕೋಮುಗಳನ್ನು ನಿರ್ಲಕ್ಷ್ಯ ಮಾಡಿದರು ಎನ್ನುವ ವಾದ ಇದೆ. ಇದನ್ನು ಕೆಲವು ಮಾನ್ಯ ಸದಸ್ಯರು ಒಂದು ಬಂಡವಾಳವಾಗಿ ಉಪಯೋಗಿಸಿದ್ದಾರೆ. ಇದು ಸರಿಯಲ್ಲ. ಈಗ ಇದರ ನಿಜಾಂಶ ಏನು ಎಂಬುದನ್ನು ಪೂರ್ಣವಾಗಿ ಕಂಡುಹಿಡಿಯಬೇಕು ಬೇರೆ ದಾರಿಯೇ ಇಲ್ಲ. ಅದಕ್ಕಾಗಿ ಜಾತಿಯ ಆಧಾರದ ಮೇಲೆ ಜನಗಣತಿ ನಡೆಸಬೇಕಾಗಿದೆ. ಜಾತಿಯ ಆಧಾರದ ಮೇಲೆ ಜನಗಣತಿ ಆದರೆ ಇನ್ನೊಂದು ಪ್ರಯೋಜನ ಆಗಬಹುದು ಎಂದು ನನ್ನ ಕಲ್ಪನೆ. ಏತಕ್ಕೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡತಕ್ಕ ಜನ ಹಲವಾರು ಕೋಮಿಗೆ ಸೇರಿದವರು ಇದ್ದಾರೆ. ಈ ಬಗ್ಗೆ ನನ್ನ ಒಂದು ಸ್ಪಷ್ಟವಾದ ಅಭಿಪ್ರಾಯ ಏನೆಂದರೆ ಹಳ್ಳಿಗಳಲ್ಲಿರತಕ್ಕ ಜನ ಯಾವ ಕೋಮಿಗೇ ಸೇರಿರಲಿ. ಅವರು ಎಲ್ಲರೂ ಸಹ ಹಿಂದೆ ಬಿದ್ದಿದ್ದಾರೆ. ಅನೇಕರು ಮುಂದುವರಿದ ಕೋಮುಗಳು ಎಂದು ಏನು ಹೇಳುತ್ತಾರೆ ಅವರ ಮನೆಗೆ ಹೊರಗಡೆಯವರು ಯಾರಾದರೂ ಹೋದರೆ ಅವರ ಮನೆಯಲ್ಲಿ ಮಲಗುವುದಕ್ಕೆ ಚಾಪೆ ಕೂಡ ಸಿಕ್ಕುವುದಿಲ್ಲ. ಶ್ರೀಮಾನ್ ಹುಚ್ಚಮಾಸ್ತಿಗೌಡರ ಮನೆಗೆ 4-5 ಜನ ಹೋದರೆ ಮಲಗುವುದಕ್ಕೆ ಚಾಪೆ ಸಿಕ್ಕುವುದಿಲ್ಲ. ಅವರು ಹಿಂದಿನಿಂದಲೂ ಒಂದು ಪ್ರತಿಷ್ಠಿತ ಕುಟುಂಬಕ್ಕೆ ಸೇರಿದವರು ಮತ್ತು ಗೌಡಾಳ್ವಿಕೆಯನ್ನು ಮಾಡಿಕೊಂಡು ಬಂದಂತಹವರು. ಅಂಥವರ ಪರಿಸ್ಥಿತಿಯೂ ಅಷ್ಟು ಉತ್ತಮವಾಗಿಲ್ಲ. ಈ ಒಂದು ಪರಿಸ್ಥಿತಿಯಲ್ಲಿ ಹಳ್ಳಿಯ ಜನರು ದಿನೇ ದಿನೇ ಹಿಂದಕ್ಕೆ ಹೋಗುತ್ತಿದ್ದಾರೆ. ಪಟ್ಟಣಗಳಲ್ಲಿ ವಾಸ ಮಾಡತಕ್ಕ ಜನಗಳಿಗೆ ದುಡ್ಡು ಅದೆಲ್ಲಿಂದ ಬರುತ್ತದೆಯೋ ಗೊತ್ತಿಲ್ಲ. ಅದನ್ನು ಊಹೆ ಮಾಡುವುದಕ್ಕೆ ಸಾಧ್ಯವಿಲ್ಲ. ಅಷ್ಟೊಂದು ಭವ್ಯವಾದ ರೀತಿಯಲ್ಲಿ ಅವರು ಜೀವನ ಮಾಡುತ್ತಾರೆ. ಈ ರೀತಿ ಅವರು ಜೀವನ ಮಾಡಬೇಕಾದರೆ ಅವರಿಗೆ ದುಡ್ಡು ಎಲ್ಲಿಂದ ಬರುತ್ತದೆ. ಅವರು ಬೆವರು ಸುರಿಸಿ ಸಂಪಾದನೆ ಮಾಡುವ ಹಣ ಎಂದು ಹೇಳುವುದಕ್ಕಾಗುವುದಿಲ್ಲ. ಅಂತೂ ಅವರಿಗೆ ಎಲ್ಲಿಂದ ಹಣ ಬರುತ್ತದೆಯೋ ಅವರಲ್ಲಿ ಹಣ ಇದೆ, ಖರ್ಚು ಮಾಡುತ್ತಾರೆ. ಹಳ್ಳಿಗಳಲ್ಲಿ ವಾಸ ಮಾಡತಕ್ಕ ಜನ ಯಾವ ಕೋಮಿನವರೇ ಆಗಲಿ. ದಿನೇ ದಿನೇ ಅವರು ಹಿಂದಕ್ಕೆ ಹೋಗುತ್ತಿದ್ದಾರೆ. ಆದ್ದರಿಂದ ಈಗ ಜಾತಿವಾರು ಜನಗಣತಿ ಮಾಡಿದರೆ ವಾಸ್ತವಾಂಶ ಗೊತ್ತಾಗುತ್ತದೆ, ಅವರ ಆರ್ಥಿಕ ಅಂತಸ್ತು ಅಳೆಯುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಭಾವನೆ ಇದೆ. ಮುಖ್ಯವಾಗಿ ಈ ಜಾತಿಯು ಒಂದು ಪೆಡಂಭೂತವಾಗಿ ಅವರನ್ನು ತುಳಿದು ಇವರು ಮೇಲೆ ಬಂದವರು ಇವರನ್ನು ತುಳಿದು ಅವರು ಮೇಲೆ ಬಂದರು ಎನ್ನತಕ್ಕಂಥಾ ಹಾಗೂ ಬೇರೆಯವರನ್ನು ತುಳಿದು ಇವರು ಮೇಲೆ ಬಂದರು ಎನ್ನುತಕ್ಕಂಥಾ ಆಪಾದನೆ ಏನಿದೆ ಇದಕ್ಕೆ ಇತಿಶ್ರೀ ಹಾಡಲೇಬೇಕು. ಇಲ್ಲದಿದ್ದರೆ ಇದು ಖಂಡಿತವಾಗಿ ಜಾತಿಯ ಭಾವನೆ ಇನ್ನು ಹೆಚ್ಚು ಹೆಚ್ಚಾಗಿ ಜನತೆಯ ಮನಸ್ಸನ್ನು ಕೆರಳಿಸಿ ವಿಷಮತೆಯ ವಾತಾವರಣವನ್ನು ಸೃಷ್ಟಿಸಿ ಯಾರೂ ನೆಮ್ಮದಿಯಿಂದ ಬಾಳುವುದಕ್ಕೆ ಸಾಧ್ಯವಿಲ್ಲ ಎನ್ನುವ ಪರಿಸ್ಥಿತಿ ಬಂದೀತು ಎನ್ನುವ ದೃಷ್ಟಿಯಿಂದ ಈ ಜಾತಿವಾರು ಜನಗಣತಿ ಮಾಡುವುದು ಅವಶ್ಯಕ. ನಿಜವಾಗಿಯೂ ಹಳ್ಳಿಗಳಲ್ಲಿ ವಾಸಮಾಡತಕ್ಕ ಜನಗಳು ಬಹಳ ಹಿಂದೆ ಬಿದ್ದಿದ್ದಾರೆ. ಪಟ್ಟಣವಾಸಿಗಳು ಆರ್ಥಿಕ ಪರಿಸ್ಥಿತಿಯಲ್ಲಿ ಹಾಗೂ ಸಾಮಾಜಿಕವಾಗಿ ಬಹಳವಾಗಿ ಮುಂದುವರಿದಿದ್ದಾರೆ. ಮಳವಳ್ಳಿ ಟೌನ್‌ನಲ್ಲಿ ಮುಂದುವರಿದ ಜನಾಂಗಗಳ ಬೀದಿಗಳಿಗೆ ಹೋಗಿ ಬನ್ನಿ ಹಾಗಯೇ ಹರಿಜನರ ಬೀದಿಗಳಿಗೂ ಹೋಗಿ ಬನ್ನಿ. ಅವರ ವಿದ್ಯಾವಂತರ ಸಂಖ್ಯೆ ಮತ್ತು ಅವರ ಶಿಕ್ಷಣ ಮಟ್ಟ ಎಷ್ಟರಮಟ್ಟಿಗೆ ಇದೆಯೆಂಬುದನ್ನು ನೋಡಿದರೆ ನಾವೆಲ್ಲರೂ ಆಶ್ಚರ್ಯಪಡಬೇಕಾಗುತ್ತದೆ.

ಶ್ರೀ ಕೆ. ಪ್ರಭಾಕರ್.—ಆದರೂ ಕೂಡ ಸಮಾನತೆ ಇಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.—ನೀವು ನಮ್ಮ ಜೊತೆಯಲ್ಲಿ ಬನ್ನಿ. ಗೊತ್ತಾಗುತ್ತದೆ. ಡಾ: ರುದ್ರಪ್ಪನವರು ಅಲ್ಲಿ ಕಂಟೆಸ್ಟ್ ಮಾಡಿದ್ದರು. ಅವರೂ ಕೂಡ ಅಲ್ಲಿ ಹೋಗಿ ಸಂಚಾರಮಾಡಿ ಬಂದಿದ್ದಾರೆ. ಅಷ್ಟು ಅವರು ಹಿಂದುಳಿದಿರುವುದಕ್ಕೆ ಏನು ಕಾರಣವೆಂಬುದನ್ನು ನಾವು ಕಂಡುಹಿಡಿಯಬೇಕು. ಸೇಕಡ 88ರಷ್ಟು ವಾಸಮಾಡತಕ್ಕ ಹಳ್ಳಿಗರ ಶ್ರೇಣಿಕೆಯನ್ನು ನಾವು ಜಾಗ್ರತೆಯಾಗಿ ಸುಧಾರಿಸದೇ ಹೋದರೆ ಖಂಡಿತವಾಗಿಯೂ ಸಹ ಒಂದು ಬಹಳ ಸುಸ್ಥಿರವಾದ, ಆರೋಗ್ಯಕರವಾದ ಮತ್ತು ಸುಂದರವಾದಂಥ ಸಮಾಜವನ್ನು ನಿರ್ಮಾಣ ಮಾಡುವುದರಲ್ಲಿ ವಿಫಲರಾಗುತ್ತೇವೆಂಬ ಮಾತನ್ನು ಹೇಳುತ್ತೇನೆ.

(ಶ್ರೀ ಎಚ್. ಟಿ. ಕೃಷ್ಣಪ್ಪ)

ಕೊನೆಯದಾಗಿ ಮಾನ್ಯ ಹನುಮೇಗೌಡರು ತಂದಿರತಕ್ಕ ಈ ನಿರ್ಣಯವನ್ನು ಬೆಂಬಲಿಸಿ, ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು).—ಮಾನ್ಯ ಅಧ್ಯಕ್ಷರೇ, ನನ್ನ ಮಾನ್ಯ ಸ್ನೇಹಿತರಾದಂಥ ಶ್ರೀ ಹನುಮೇಗೌಡರು ತಂದಿರತಕ್ಕ ಗೊತ್ತುವಳಿಯನ್ನು ಅನುಮೋದಿಸುತ್ತಾ, ಜನಗಣತಿ ಮೂಲಕ ದೇಶದಲ್ಲಿರತಕ್ಕ ಜಾತೀಯವಾರು ಅಂಕಿ ಅಂಶಗಳನ್ನು ಗೊತ್ತುಪಡಿಸಬೇಕೆಂಬುದನ್ನು ಸಮರ್ಥನೆ ಮಾಡುತ್ತಾ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಸವಿಸ್ತಾರವಾಗಿ ಈ ಒಂದು ನಿರ್ಣಯದ ಮುಖ್ಯೋದ್ದೇಶವನ್ನು ಕುರಿತು ಮಾತನಾಡಿದ್ದಾರೆ. ಈ ಒಂದು ಜಾತಿ ಎನ್ನತಕ್ಕ ಭೂತ ಬಹುಶಃ ಮಾನವನಲ್ಲಿ ಬುದ್ಧಿ ವಿಕಾಸವಾದಂತೆ ಸಮಾಜದಲ್ಲಿ ಬೆಳೆಯುತ್ತಾ ಬಂದಿದೆ. ವೇದಗಳ ಕಾಲದಿಂದ ಇರತಕ್ಕ ಪರಿಸ್ಥಿತಿಯನ್ನು ತೆಗೆದುಕೊಂಡರೆ ಇದುವರೆಗೂ ವೈಶ್ಯ, ಬ್ರಾಹ್ಮಣ, ಕ್ಷತ್ರಿಯ, ಮತ್ತು ಶೂದ್ರ ಎಂಬ ನಾಲ್ಕು ಪಂಗಡಗಳನ್ನು ನಾವು ನೋಡುತ್ತಿದ್ದೇವೆ. ಆಗಲೂ ನೋಡಿದಾಗ ಸಮಾಜದಲ್ಲಿರತಕ್ಕ ಜನರು ತಮ್ಮ ವೃತ್ತಿಗೆ ಅನುಗುಣವಾಗಿ ಅವರವರು ಆಯಾ ಪಂಗಡಗಳಲ್ಲಿ ತಂತಮ್ಮ ಕಸುಬುಗಳನ್ನು ಮಾಡಿಕೊಂಡು ಬರುತ್ತಿದ್ದರು. ಅಂದಮೇಲೆ ಆಗಿನ ಕಾಲದಲ್ಲಿಯೂ ಸಹ ಜಾತಿಗಳ ಬಗ್ಗೆ ಶೋಷಣೆ ಇತ್ತು, ಅದು ಬೆಳೆದು ಬಂದಿತ್ತೆಂಬುದು ಎಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ಆದರೆ ಇಂದಿನ ವಿಜ್ಞಾನ ಯುಗದಲ್ಲಿ ನಾವೆಲ್ಲರೂ ಒಂದು ಬುದ್ಧಿವಂತಿಕೆಯ ಜೀವನವನ್ನು ನಡೆಸಿಕೊಂಡು ಬರುತ್ತೇವೆಂದು ಈ ಪ್ರಪಂಚದಲ್ಲಿ ಹೇಳಬೇಕಾದರೆ ಇದರ ಮಧ್ಯೆ ಈ ಒಂದು ಜಾತೀಯ ಭೂತ ಇನ್ನೂ ಹೆಚ್ಚು ಹೆಚ್ಚಾಗಿ ಇತ್ತೀಚೆಗೆ ಬೆಳೆಯುತ್ತಾ ಇವೆ. ಉತ್ತಮ ಜೀವನವನ್ನು ಯಾರೇ ಆಗಲೀ ನಡೆಸದೇ ಇರುವುದಕ್ಕೆ ಇದು ಒಂದು ಮೂಲ ಕಾರಣವಷ್ಟೇ. ನಮ್ಮ ರಾಷ್ಟ್ರದಲ್ಲಿರತಕ್ಕ ಸ್ವಾರ್ಥಮನೋಭಾವದಲ್ಲಿರತಕ್ಕ, ಮುಂದಾಳುಗಳಾಗಿರತಕ್ಕ ರಾಜಕೀಯ ವ್ಯಕ್ತಿಗಳಿಂದ ಇಂತಹ ಒಂದು ದುಃಸ್ಥಿತಿ ನಮ್ಮ ರಾಷ್ಟ್ರಕ್ಕೆ ಹಾಗೂ ನಮ್ಮ ದೇಶಕ್ಕೆ ಬಂದಿದೆಯೆಂದು ಹೇಳಿದರೆ ಅದೇನೂ ತಪ್ಪಾಗಲಾರದು. 800 ವರ್ಷಗಳ ಹಿಂದೆ ಬಸವಣ್ಣನವರು ಜಾತಿ ಇಲ್ಲದೇ ಇರತಕ್ಕ ಮಾನವ ಸಮಾಜವನ್ನು ರಚನೆಮಾಡಬೇಕು, ಅವರ ಮುಖಾಂತರ ಮಾನವನ ಕಲ್ಯಾಣವಾಗುತ್ತದೆಂದು ಹೇಳಿದ್ದರು. ಅದೇ ರೀತಿಯಲ್ಲಿ ಮಹಾತ್ಮ ಗಾಂಧೀಜಿಯವರು ಅಂತಹ ಒಂದು ತತ್ವವನ್ನೇ ಇಟ್ಟುಕೊಂಡಿದ್ದರು. ಆದರೆ ಈಗ ಕೇವಲ ಕಾಂಗ್ರೆಸ್ ಪಕ್ಷದ ಮುಖಾಂತರ ಈ ರಾಷ್ಟ್ರವನ್ನು ಉದ್ಧಾರ ಮಾಡುತ್ತೇವೆಂದು ಇವರು ಹೊರಟಿದ್ದಾರೆ. ಸುಮಾರು 800 ವರ್ಷಗಳ ಹಿಂದೆಯೇ ಇದರ ಬಗ್ಗೆ ಒಂದು ದೊಡ್ಡ ಕ್ರಾಂತಿಯನ್ನೇ ಮಾಡಿ ಮಾನವ ಜನಾಂಗದಲ್ಲಿ ಎಲ್ಲರಿಗೂ ಒಂದೇ ತರಹವಾದಂಥ ಸಂಘ ಜೀವನ ಸಮಾಜದಲ್ಲಿ ಇರಬೇಕು, ಎಲ್ಲರೂ ಭಗವಂತನ ಮಕ್ಕಳು ಎನ್ನುವ ಅಭಿಪ್ರಾಯವನ್ನು ಕೊಟ್ಟು ಒಂದೇ ಸಮಾಜವನ್ನು ಕಟ್ಟಲಿಕ್ಕೆ ಹೊರಟರು ಆಗ ಅನುಭವ ಮಂಟಪವನ್ನು ರಚನೆಮಾಡಿ, ಎಲ್ಲ ಜನಾಂಗದವರ ತತ್ವ ಒಂದು, ಜನಾಂಗ ಅಥವಾ ಜಾತಿ ಎಂದು ಬೇರೆ ಹೇಳದೆ ಆಗಿನ ಕಾಲದಲ್ಲಿಯೇ ಆಯಾ ಜನಾಂಗದವರು ಮಾಡುತ್ತಿರುವ ಕಸುಬಿಗೆ ಅನುಗುಣವಾಗಿ ಜಾತಿಯ ಹೆಸರನ್ನು ಇಟ್ಟುಕೊಂಡರೂ ಅದು ಧರ್ಮದ ಹೆಸರುಗಳಲ್ಲ. ಮಡಿವಾಳ ಮಾಚಯ್ಯ; ಅಲ್ಲಮ ಪ್ರಭು, ಮಾದಿಗರ ಚನ್ನಯ್ಯನವರು ಎಂಬುದಾಗಿ ಇದ್ದರು. ಆಗಿನ ಕಾಲದಲ್ಲಿಯೇ ಮಾನವ ಸಮಾಜವನ್ನು ಒಗ್ಗಟ್ಟಿನಲ್ಲಿಡಬೇಕು, ನಮ್ಮಲ್ಲಿ ಭಿನ್ನಾಭಿಪ್ರಾಯಗಳು, ಏರುಪೇರು ಇರಬಾರದೆಂಬ ಬಗ್ಗೆ ನಮ್ಮ ಹಿರಿಯರು ಬಹಳ ಚೆನ್ನಾಗಿ ಅಸ್ತಿಭಾರವನ್ನು ಹಾಕಿಕೊಂಡು ಬಂದಿದ್ದಾರೆ. ಅಂತಹ ಕಾಲದಲ್ಲಿಯೂ ಸಹ ಸಮಾಜದಲ್ಲಿ ಸ್ವಾರ್ಥಿಗಳಾಗಿ ಅವರಿಗಿದ್ದ ಒಂದು ಅಧಿಕಾರದಿಂದ ಅಥವಾ ಒಂದು ಕುಯುಕ್ತಿಯಿಂದ ಏನಾದರೂ ಅನ್ಯಾಯಗಳು ನಡೆಯುತ್ತಿದ್ದರೆ ಅವೆಲ್ಲವನ್ನೂ ಅನೇಕ ಸಂದರ್ಭಗಳಲ್ಲಿ ಬಸವಣ್ಣನವರು ಕೊನೆಗಾಣಿಸಬೇಕಾಗಿ ಬಂತು. ಆದ್ದರಿಂದ ಹಿಂದಿನ ಚರಿತ್ರೆಯನ್ನು ನೋಡಿದರೆ ಮಾನವನು ಯಾವುದೋ ಒಂದು ಕಾಲದಿಂದಲೂ ಬುದ್ಧಿಜೀವಿಯಾಗಿರತಕ್ಕವನಾಗಿದ್ದರೂ ಸಮಾಜದಲ್ಲಿರತಕ್ಕ ಅನ್ಯಾಯಗಳನ್ನು ತುಳಿಯುವುದಕ್ಕಾಗಿ ಹಿಂದಿನವರಲ್ಲಿ ಅನೇಕರು ಸತತವಾಗಿ ಹೋರಾಡುತ್ತಾ ಬಂದಿದ್ದಾರೆಂಬ ಅಂಶ ನಮಗೆಲ್ಲರಿಗೂ ಗೊತ್ತಿವೆ. ಆಗ ಜನತೆಯಲ್ಲಿ ಅಷ್ಟು ವಿದ್ಯಾವಂತರು ಇರಲಿಲ್ಲ, ಜ್ಞಾನವಂತರು ಇರಲಿಲ್ಲ, ತಿಳುವಳಿಕಸ್ಥರು ಇರಲಿಲ್ಲ. ಅಂತಹ ಕಾಲದಲ್ಲಿ ಒಂದು ತರಹ ಶೋಷಣೆ ನಡೆಯಿತು. ಇತ್ತೀಚೆಗೆ ಆಗುತ್ತಿರುವ ಪರಿಸ್ಥಿತಿಯನ್ನು ನಾವು ಈ ಒಂದು ಕ್ಷೇತ್ರದಲ್ಲಿ ನೋಡುವುದಾದರೆ ಅದಕ್ಕಿಂತ ಭೀಕರವಾದ ಶೋಷಣೆ ಈ ಒಂದು ಸಮಾಜದಲ್ಲಿ ಇವತ್ತು ನಡೆಯುತ್ತಿದೆ. ಅದಕ್ಕೆ ಕಾರಣವಿಷ್ಟೇ. ಯಾರು ಈ ರಾಜ್ಯದ

ಅಡಳಿತವನ್ನು ಹಿಡಿದುಕೊಂಡಿದ್ದಾರೋ ಅಥವಾ ಸಮಾಜವನ್ನು ಮುಂದುವರಿಸುತ್ತಿದ್ದಾರೋ, ಇಂದು ಮುಂಚೂಣಿಯಲ್ಲಿ ನಿಂತಿದ್ದಾರೋ ಅಂತಹ ನಾಯಕರು ಇವತ್ತು ಅ ವರವರ ಆತ್ಮ ಸಂಶೋಧನೆ ಆತ್ಮ ಪರಿಶೋಧನೆ ಮಾಡಿಕೊಂಡು ತಂತಮ್ಮ ಕಾರ್ಯವನ್ನು ಮಾಡುವುದು ಒಳ್ಳೆಯದು. ಅದರೆ ಅವರು ಜನತೆಯ ಮುಂದೆ ಇವತ್ತು ಹೇಳುವುದು ಒಂದು, ವಾದ ಮಾಡುವುದು ಮತ್ತೊಂದು, ಕೃತಿಯಲ್ಲಿ ನಡೆಯುವುದು ಇನ್ನೊಂದು. ಇದು ಆಗಬಾರದು. ಅದೂ ಅಲ್ಲದೆ ಅವರೇ ಪ್ರತ್ಯೇಕವಾಗಿ ಒಂದು ಗುಂಪಿನಲ್ಲಿ ಕೂತುಕೊಂಡು ನಿರ್ಣಯ ಮಾಡುವುದೇ ಬೇರೆ. ಇದು ಇಷ್ಟು ಶೋಷಣೆಗೆ ಮುಖ್ಯ ಕಾರಣವಾಗುತ್ತದೆ. ಯಾರೇ ಆಗಲೀ, ಅವನು ನಾಯಕನಾಗರಲಿ, ರಾಜಕಾರಣಿಯಾಗಿರಲಿ, ಸಮಾಜ ಮುಖಂಡನಾಗಿರಲಿ, ಅವನು ಯಾವ ಜಾತಿಯವನೇ ಆಗಿರಲಿ, ಅವನು ತನ್ನ ಕಾರ್ಯವನ್ನು ಮಾಡದೆ ಈ ರೀತಿಯಾಗಿ ಶೋಷಣೆ ಮಾಡುವುದಕ್ಕೆ ಹೋದರೆ ಅದು ಎಂದಿಗೂ ಸರಿಹೋಗುವುದಿಲ್ಲ. ಎಲ್ಲಿಯುವರೆಗೆ ಈ ಒಂದು ಕೆಟ್ಟ ವಾತವಾರಣ ಸಮಾಜದ ನಾಯಕರಲ್ಲಿ ಇದ್ದೇ ಇರುತ್ತದೋ ಅಲ್ಲಿಯುವರೆಗೆ ಈ ದೇಶದಲ್ಲಿ ನಮ್ಮ ಹಿರಿಯರು ಹಾಕಿಕೊಟ್ಟರತಕ್ಕ ಮಾರ್ಗದಲ್ಲಿ ಜಾತ್ಯಾತೀತ ರಾಷ್ಟ್ರವನ್ನು ಕಟ್ಟುವುದಕ್ಕೆ ಸಾಧ್ಯವಿಲ್ಲವೆಂಬುದನ್ನು ನಾವು ಈಗಾಗಲೇ ಅರಿತಿದ್ದೇವೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಇವತ್ತು ನಾವು ಸರ್ಕಾರದಲ್ಲಿ ಹರಿಜನರಿಗೋಸ್ಕರ ಇಷ್ಟು ಸ್ಥಾನಗಳನ್ನು ಕಾದಿರಿಸಿಕೊಂಡಿದ್ದೇವೆಂದು ಹೇಳುತ್ತಿದ್ದೇವೆ. ಇದು ಏತಕ್ಕೋಸ್ಕರವೆಂಬುದು ಎಲ್ಲರಿಗೂ ಗೊತ್ತಿದೆ. ಯಾರು ಹರಿಜನರು ಇದ್ದಾರೆಯೋ, ಯಾರು ಅವಿದ್ಯಾವಂತರು ಇದ್ದಾರೆಯೋ, ಅದರಲ್ಲಿ ಹೆಚ್ಚಿಗೆ ಬಡವರು ಇದ್ದಾರೆಯೋ ಅಂತವರೂ ಸಹ ಮಾನವೀಯತೆಯ ದೃಷ್ಟಿಯಿಂದ ನಮ್ಮ ಮಟ್ಟಕ್ಕೆ ಬರಬೇಕೆನ್ನುವ ಮೂಲೋದ್ದೇಶವನ್ನಿಟ್ಟುಕೊಂಡು ಈ ದೇಶದ ಎಲ್ಲವರ್ಗದ ಜನಾಂಗಗಳಲ್ಲಿ ಈ ವರ್ಗಕ್ಕೆ ಹೆಚ್ಚಿನ ರಕ್ಷಣೆ ಮಾಡಬೇಕೆಂದು ರಾಜ್ಯಾಂಗದಲ್ಲಿ ಹೇಳಿರುವ ಪ್ರಕಾರ ಕಾಯಿದೆ ಹಾಗೂ ಕಾನೂನುಗಳನ್ನು ಅಳವಡಿಸಿಕೊಂಡು ಅವರ ರಕ್ಷಣೆಯನ್ನು ಇವತ್ತು ನಾವು ಮಾಡುತ್ತಿದ್ದೇವೆ. ಈಗ ಮಾನವೀಯತೆಯ ದೃಷ್ಟಿಯಿಂದ ಅದು ಎಷ್ಟರಮಟ್ಟಿಗೆ ಸಫಲವಾಗಿಯೆಂಬುದನ್ನು ಯೋಚನೆಮಾಡಿ ನೋಡಿದರೆ, ಯಾರು ಅವರ ಮುಖಂಡರು ಆಗಿದ್ದಾರೋ ಅವರುಗಳಿಂದಲೇ ಅವರ ಶೋಷಣೆ ನಡೆಯುತ್ತಿದೆ. ಬೇರೆಯವರಿಂದ ಅಂತಹ ಒಂದು ಶೋಷಣೆ ನಡೆಯುತ್ತಾ ಇಲ್ಲ. ಅದಕ್ಕೂ ಹಿಂದೆ ಒಂದು ಕಾಲವಿತ್ತು. ಹಿಂದಿನ ಕಾಲದಲ್ಲಿದ್ದಂಥ ಹಳ್ಳಿಯ ಚಿತ್ರವನ್ನು ತೆಗೆದುಕೊಂಡು ನೋಡಿದ್ದೇ ಆದರೆ, ಒಬ್ಬ ಹರಿಜನರೂ ಅ ಗ್ರಾಮದ ಗೌಡರ ಮುಂದೆ ಹೋಗುತ್ತಿರಲಿಲ್ಲ. ಅವರ ಮನೆಯ ಮುಂದೆ ನಿಂತು ಮಾತನಾಡುತ್ತಿರಲಿಲ್ಲ. ಇವತ್ತು ಕುಡಿಯುವ ನೀರಿನ ವ್ಯವಸ್ಥೆ ಗ್ರಾಮಾಂತರ ಪ್ರದೇಶಗಳಲ್ಲಿ ಏನಾಗಿದೆಯೆಂದರೆ, ನಾಲ್ಕಾರು ಘಂಟೆಗಳ ಕಾಲ ಹರಿಜನರ ಹೆಣ್ಣುಮಕ್ಕಳು ಬಾವಿಗಳ ಹತ್ತಿರ ನೀರಿಗೋಸ್ಕರ ನಿಂತು ಕಾಯಬೇಕು. ಅವರಿಗೆ ಯಾರಾದರೂ ನೀರು ಹಾಕಬೇಕು, ಇಲ್ಲದಿದ್ದರೆ ಅವರಿಗೆ ನೀರಿಲ್ಲ. ಇಂತಹ ಒಂದು ಸಮಾಜವನ್ನು ನಾವು ನೋಡುತ್ತಿದ್ದೇವೆ. ಆದರೂ ಕೂಡ ರಾಜ್ಯಾಂಗದಲ್ಲಿ ನಮೂದು ಮಾಡಿರುವ ಹಾಗೆ, ಅದರ ಒಂದು ನಿಯಮದಂತೆ ಅವರ ರಕ್ಷಣೆ ಇನ್ನೂ ಸರಿಯಾಗಿ ಆಗಿಲ್ಲ ಅದಕ್ಕೋಸ್ಕರ...

ಅಧ್ಯಕ್ಷರು.—ಮಾನ್ಯ ಸದಸ್ಯರು ಅವರ ಭಾಷಣವನ್ನು ಪುನಃ ಮುಂದುವರಿಸಬಹುದು. ನಾಡಿದ್ದು ಸೋಮವಾರ ಷೆಡ್ಯೂಲ್ ಪ್ರಕಾರ ಆರ್ಥಿಕ ಸಚಿವರು ಬೇಡಿಕೆಗಳನ್ನು ಮಂಡಿಸುವವರಿದ್ದಾರೆ. ಅದಕ್ಕೆ ಮುಂಚೆ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್‌ಗೆ ಸಂಬಂಧಪಟ್ಟ ಮಂತ್ರಿಗಳು ಅವರ ಬೇಡಿಕೆಯ ಬಗ್ಗೆ ಚರ್ಚೆ ಮುಗಿದಿರುವುದರಿಂದ ಅವರು ಉತ್ತರ ಕೊಡುತ್ತಾರೆ. ಈಗ ಈ ಸಭೆ ಎದ್ದು ಸೋಮವಾರ ಮತ್ತೆ ಮಧ್ಯಾಹ್ನ 12 ಗಂಟೆಗೆ ಸೇರುತ್ತದೆ.

The House adjourned at One of the clock the to meet again at Twelve of the clock. on Monday, the 29th April 1974.